*ಅಪೊಸ್ತಲನಾದ ಪೌಲನು*

# ಕೊರಿಂಥದವರಿಗೆ ಬರೆದ ಎರಡನೆಯ ಪತ್ರಿಕೆ

**ಗ್ರಂಥಕರ್ತ:**

ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು.

**ದಿನಾಂಕ:**

ಸುಮಾರು ಕ್ರಿ.ಶ. 57

**ಧ್ಯೇಯ:**

ಪೌಲನು ಕೊರಿಂಥದವರಿಗೆ ಬರೆದ ತನ್ನ ಮೊದಲನೆಯ ಪತ್ರಿಕೆಯಲ್ಲಿ ಅವರಲ್ಲಿದ್ದ ಅನೇಕ ಸಮಸ್ಯೆಗಳ ಬಗ್ಗೆ ಮಾತನಾಡಿದ್ದನು, ಆದರೆ ಈಗ ಅವುಗಳಲ್ಲದೆ ಮತ್ತೊಂದು ಗಂಭೀರವಾದ ಸಮಸ್ಯೆ ಅವರ ನಡುವೆ ಕಾಣಿಸಿಕೊಂಡಿತ್ತು. ಪೌಲನು ಯೇಸು ಕ್ರಿಸ್ತನ ನಿಜವಾದ ಅಪೊಸ್ತಲನಲ್ಲ ಮತ್ತು ಅವನ ಬೋಧನೆಗಳು ವಿಶ್ವಾಸಾರ್ಹವಲ್ಲ ಎಂಬದಾಗಿ ಹೇಳಿಕೊಂಡು ಕೆಲವು ಸುಳ್ಳು ಬೋಧಕರು ಕೊರಿಂಥಕ್ಕೆ ಬಂದಿದ್ದರು. ಇದಲ್ಲದೆ ತಮ್ಮ ಈ ಸುಳ್ಳು ಸತ್ಯ ಎಂದು ಅವರು ಅನೇಕ ಕ್ರೈಸ್ತರನ್ನು ನಂಬಿಸಿದ್ದರು ಮತ್ತು ಇಡೀ ಸಭೆಯನ್ನು ಅಪಾಯಕ್ಕೆ ಸಿಲುಕಿಸಿದ್ದರು. ಯಾಕಂದರೆ ಒಂದುವೇಳೆ ಅವರು ಪೌಲನ ಅಪೊಸ್ತಲತನವನ್ನು ನಿರಾಕರಿಸಿದರೆ, ಅವನು ಬೋಧಿಸುತ್ತಿದ್ದ ಯೇಸು ಕ್ರಿಸ್ತನ ಸತ್ಯವಾದ ಸುವಾರ್ತೆಯನ್ನು ಪ್ರಶ್ನಿಸುವವರಾಗಿದ್ದರು, ಆದರೆ ಸುವಾರ್ತೆ ಒಂದೇ ಆಗಿದೆ. ಆದ್ದರಿಂದ ಅಲ್ಲಿರುವ ವಿಶ್ವಾಸಿಗಳ ನಿಮಿತ್ತ, ಮತ್ತು ಯೇಸು ಕ್ರಿಸ್ತನ ಸತ್ಯದ ನಿಮಿತ್ತ, ಯೇಸು ಕ್ರಿಸ್ತನಿಂದ ಅಪೊಸ್ತಲನಾಗಿ ನೇಮಕಗೊಂಡಿರುವದರಿಂದ ತನ್ನ ಅಧಿಕಾರವನ್ನು ತೋರ್ಪಡಿಸುವದು ಹಾಗೂ ತನ್ನ ಮಾತುಗಳು ಮತ್ತು ಕ್ರಿಯೆಗಳು ತನ್ನ ಅಪೊಸ್ತಲತನದನುಸಾರವಾಗಿವೆ ಎಂದು ಸಾಬೀತುಪಡಿಸುವದು ಅವಶ್ಯವಾಗಿತ್ತು. ಈ ಕಾರಣದಿಂದಲೇ, ತನ್ನ ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿಯೇ ಇದರಲ್ಲಿ ಆತನು ಹೆಚ್ಚಾಗಿ ತನ್ನ ವೈಯಕ್ತಿಕ ಜೀವಿತ ಮತ್ತು ಕ್ರಿಸ್ತನಿಗಾಗಿ ಮಾಡಿದ ಸೇವೆಯ ಬಗ್ಗೆ ಬರೆದಿದ್ದಾನೆ. ಆತನು ತನ್ನ ಅನುಭವಗಳು, ಉದ್ದೇಶಗಳು, ಶ್ರಮೆಗಳು ಮತ್ತು ಪ್ರಯಾಸಗಳ ಬಗ್ಗೆ ಮಾತನಾಡಿದ್ದಾನೆ. ಹೀಗೆ ಮಾಡುವ ಮೂಲಕ ಯೇಸು ಕ್ರಿಸ್ತನ ಸೇವೆ ಎಂದರೆ ಏನು ಹಾಗೂ ಅದರಲ್ಲಿ ಏನೆಲ್ಲಾ ಒಳಗೊಂಡಿರುತ್ತದೆ ಮತ್ತು ತಮ್ಮನ್ನು ಯೇಸು ಕ್ರಿಸ್ತನ ಸೇವಕರೆಂದು ಕರೆದುಕೊಳ್ಳುವವರು ಹೇಗಿರಬೇಕು ಹಾಗೂ ಹೇಗೆ

ನಡೆದುಕೊಳ್ಳಬೇಕು ಎಂಬದನ್ನು ತೋರಿಸಿದ್ದಾನೆ.

# 1 1

**1:1** *“ಅಪೊಸ್ತಲನು”*– ರೋಮಾ 1:1; 1 ಕೊರಿಂಥ 1:1; ಮತ್ತಾಯ 10:2.

*“ದೇವರ ಚಿತ್ತಾನುಸಾರ”*– ಆತನು ತನ್ನ ಅಪೊಸ್ತಲತನದ ಸತ್ಯವನ್ನು ಇಲ್ಲಿ ಮತ್ತು ಈ ಪತ್ರದಾದ್ಯಂತ ಸಾಬೀತುಪಡಿಸುತ್ತಾ ಇದ್ದಾನೆ ಯಾಕಂದರೆ ಕೊರಿಂಥದಲ್ಲಿದ್ದ ಕೆಲವರು ಈ ವಿಷಯದಲ್ಲಿ ಅವನ ಮೇಲೆ ದಾಳಿ ಮಾಡುತ್ತಾ ಇದ್ದರು.

*“ತಿಮೊಥೆ”*– ವ 19; ಅಪೊ 16:1-3; 1 ತಿಮೊ 1:2.

*“ಅಖಾಯ”*– ಕೊರಿಂಥವಿದ್ದ ಪ್ರದೇಶ (ಗ್ರೀಸ್). **2**

**- 1:2** ರೋಮಾ 1:7. **3-11**

**1:3-11** ಈ ಪತ್ರಿಕೆಯ ಎರಡು ಧೇಯಗಳನ್ನು ನಾವು ಇಲ್ಲಿ ನೋಡಬಹುದು – “ಸಂತೈಸುವಿಕೆ” (ಅಥವಾ “ಸಮಾಧಾನ”) ಮತ್ತು “ಸಂಕಟ.” “ಸಂತೈಸುವದು” ಅಥವಾ “ಸಂತೈಸುವಿಕೆ” (ನಾಮಪದ ಮತ್ತು ಕ್ರಿಯಾಪದ) ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದ 17 ಸಲ ಬರೆಯಲ್ಪಟ್ಟಿದೆ. “ಬಾಧೆ,” “ಶ್ರಮೆಗಳು” ಇತ್ಯಾದಿ ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದಗಳು ಸಹ ಬಹುತೇಕ 17 ಸಲ ಬರೆಯಲ್ಪಟ್ಟಿವೆ. ಪೌಲನು ತನ್ನ ಸಂಕಟಗಳ ವಿಷಯದಲ್ಲಿ ಆರೋಪ ಮಾಡುತ್ತಾ ಇಲ್ಲ ಬದಲು ವಿರುದ್ಧವಾಗಿ ನಡೆದುಕೊಳ್ಳುತ್ತಾ ಇದ್ದಾನೆ (6:10; 7:4; 12:10; ರೋಮಾ 5:3). ತನ್ನ ಸಂಕಟಗಳು ಮತ್ತು ಶ್ರಮೆಗಳಿಂದ ತನಗೇ ಒಳ್ಳೆಯದಾಗುತ್ತಿದೆ ಎಂಬದಾಗಿ ಅವನು ಅಂದುಕೊಂಡನು. ಆತನು ಅವುಗಳ ಬಗ್ಗೆ ಏನು ಹೇಳಿದ್ದಾನೆ ಎಂಬದನ್ನು ಆಲೋಚನೆ ಮಾಡೋಣ. ಶ್ರಮೆಗಳು ಮತ್ತು ಸಂಕಟಗಳ ಮೂಲಕ ದೇವರು ತನ್ನ ಜನರನ್ನು ಸಂತೈಸುತ್ತಾನೆ ಮತ್ತು ಪ್ರೋತ್ಸಾಹಪಡಿಸುತ್ತಾನೆ ಎಂಬದಾಗಿ ಪೌಲನು ದೇವರ ಬಗ್ಗೆ ಆಳವಾಗಿ ತಿಳಿದುಕೊಂಡನು (ವ 3,4). ಅವನು ಯೇಸು ಕ್ರಿಸ್ತನಲ್ಲಿ ಸುಮಧುರವಾದ ಸಂತೈಸುವಿಕೆಯನ್ನು ಅನುಭವಿಸಿದ್ದರಿಂದ ಅವನ ಸಂಕಟಗಳು ಅವನಿಗೆ ಭಾರವೆನಿಸಲಿಲ್ಲ (ವ 5). ಈ ಕಾರಣದಿಂದ ಅವನು ಇತರರನ್ನು ಉತ್ತಮವಾಗಿ ಸಂತೈಸುವವನಾದನು (ವ 4,6). ದೇವರನ್ನು ಹೆಚ್ಚಾಗಿ ಆತುಕೊಳ್ಳುವದನ್ನು ಅವನು ಕಲಿತುಕೊಂಡನು (ವ 9). ವಿಶ್ವಾಸಿಗಳ ಜೀವಿತಗಳಲ್ಲಿ

ಎದುರಾಗುವ ಸಂಕಟಗಳು ನಿಜವಾಗಿಯೂ ನಿತ್ಯತ್ವದಲ್ಲಿ ಹೆಚ್ಚು ಪ್ರಭಾವವನ್ನು ಹೊಂದಿರುತ್ತವೆ ಎಂಬದನ್ನು ಅವನು ಅರಿತುಕೊಂಡನು (4:17). ಇದಲ್ಲದೆ ಅವನ ಸಂಕಟಗಳು (ಮತ್ತು ಅದರ ಪರಿಣಾಮವಾದ ಬಲಹೀನತೆಗಳು) ಅತಿಯಾದಾಗ ತನ್ನಲ್ಲಿರುವ ದೇವರ ಶಕ್ತಿ ದೊಡ್ಡದು ಎಂಬದನ್ನು ಅವನು ಕಲಿತುಕೊಂಡನು (12:9-10). ಹಾಗೆಯೇ ಯೋಬ 3:20 ರ ನೋಟ್ ನೋಡಿರಿ. **3**

**1:3** ಇಲ್ಲಿ ಪೌಲನು ಸಂಕಟಗಳು ಮತ್ತು ಶ್ರಮೆಗಳ ನಿಮಿತ್ತ ಪೌಲನು ದೇವರ ಸ್ವಭಾವದ ಸತ್ಯವನ್ನು ಆಳವಾಗಿ ತಿಳಿದುಕೊಂಡದ್ದನ್ನು ನಾವು ನೋಡಬಹುದು.

*"ಕನಿಕರ"*– ವಿಮೋ 34:6; ಕೀರ್ತನೆ 86:15; 103:13; 111:4; 145:8; ಪ್ರಲಾ 3:22; ಮೀಕ 7:19; ಮತ್ತಾಯ 9:36.

*"ಸಂತೈಸುವಿಕೆ"*– ಅಥವಾ "ಆದರಣೆ" (ಗ್ರೀಕ್ ಪದ ಈ ಎರಡೂ ಅರ್ಥಗಳನ್ನು ಕೊಡುತ್ತದೆ) – ದೇವರು ತನ್ನ ವಾಕ್ಯ ಮತ್ತು ಪ್ರಸನ್ನತೆಯ ಮೂಲಕ ತನ್ನ ಜನರನ್ನು ಸತತವಾಗಿ ಸಂತೈಸುತ್ತಾನೆ ಮತ್ತು ಆದರಿಸುತ್ತಾನೆ – ಕೀರ್ತನೆ 23:4; 119:50; ಯೆಶಾಯ 40:1; 61:2; 66:13; ರೋಮಾ 15:4-5; 2 ಥೆಸ 2:16-17; ಇಬ್ರಿ 6:18. "ಸಂತೈಸುವಾತನು" ಎಂಬ ದೇವರಾತ್ಮನ ಒಂದು ಹೆಸರು ಗ್ರೀಕ್ ಮೂಲದಿಂದಲೇ ಬಂದಿದೆ. ಯೋಹಾನ 14:16 ರ ನೋಟ್ ನೋಡಿರಿ. **4**

**1:4** *"ನಮಗೆ ಸಂಭವಿಸುವ ಎಲ್ಲಾ ಸಂಕಟಗಳಲ್ಲಿ"*– "ಎಲ್ಲಾ" –ರೀತಿಯ ಸಂತೈಸುವಿಕೆಯನ್ನು ಮಾಡುವ ದೇವರು (ವ 3) ನಾನಾ ವಿಧವಾದ ಸಂಕಟಗಳಿಗೆ ಸಂತೈಸುವಿಕೆಯನ್ನು ಕೊಡುತ್ತಾನೆ. ಒಂದುವೇಳೆ ವಿಶ್ವಾಸಿಗಳು ಸಂತೈಸುವಿಕೆಯನ್ನು ನಿರಾಕರಿಸಿದರೆ (ಮತ್ತಾಯ 2:18 ನೋಡಿರಿ) ಅದನ್ನು ಹೊಂದಲು ವಿಫಲರಾಗುವರು. ದೇವರು ಪೌಲನನ್ನು ಸಂತೈಸಿದ್ದು, ತನ್ನ ಸ್ವಂತ ಉದ್ದೇಶಕ್ಕಾಗಿಯಲ್ಲ ಬದಲಾಗಿ ಅವನು ಸಂಕಟಗಳಲ್ಲಿ ಬಿದ್ದಿರುವ ಇತರರನ್ನು ಸಂತೈಸಬೇಕು ಎಂಬ ಕಾರಣದಿಂದ ಎಂಬದನ್ನು ಗಮನಿಸಿರಿ (ವ 6). **5**

**1:5** *"ಕ್ರಿಸ್ತನ ನಿಮಿತ್ತ ಬಾಧೆಗಳು"*– ರೋಮಾ 8:17; ಫಿಲಿಪ್ಪಿ 1:29; 3:10; ಕೊಲೊ 1:24. ಯೇಸು ಕ್ರಿಸ್ತನು ಇತರರ ನಿಮಿತ್ತ ಬಾಧೆಗಳನ್ನು ಅನುಭವಿಸಿದನು ಮತ್ತು ತನ್ನ ಜನರ

ನಿಮಿತ್ತ ಈಗಲೂ ಬಾಧೆಪಡುತ್ತಲೇ ಇದ್ದಾನೆ (ಅಪೊ 9:4-5). ಇತರರಿಗಾಗಿ ಆತನೊಂದಿಗೆ ಸ್ವೇಚ್ಛೆಯಿಂದ ಬಾಧೆಗಳನ್ನು ಅನುಭವಿಸುವವರು ಆತನ ಸಂತೈಸುವಿಕೆ ಮತ್ತು ಆದರಣೆಯನ್ನು ತಿಳಿದುಕೊಳ್ಳುವರು (ಯೋಹಾನ 16:33). 6

**1:6** ಪೌಲನೂ ಇತರರ ಬಗ್ಗೆಯೇ ಯೋಚಿಸುತ್ತಿದ್ದನು ಮತ್ತು ಅವನ ಸಂಕಟಗಳು ಹಾಗೂ ಸಂತೈಸುವಿಕೆಗಳು ಎರಡೂ ಅವರ ನಿಮಿತ್ತವಾಗಿಯೇ ಆಗಿದ್ದವು (1 ಕೊರಿಂಥ 9:19-23; 10:24,33; 2 ತಿಮೊ 2:10). ಅವನ ಮಾದರಿಯನ್ನು ಅನುಸರಿಸುವವರು ಮಾತ್ರ, ಅವನು ದೇವರಿಂದ ಹೊಂದಿಕೊಂಡ ಆದರಣೆಯನ್ನು ಹೊಂದಬಹುದೆಂದು ನಿರೀಕ್ಷಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಶ್ರಮೆಗಳ ಫಲಿತಾಂಶ "ತಾಳೆಯಿಂದ ಸಹಿಸಿಕೊಳ್ಳುವದಾಗಿದೆ" – ರೋಮಾ 5:3-5; ಯಾಕೋಬ 1:2-4; 5:11. 7

**1:7** ಕೊರಿಂಥದಲ್ಲಿದ್ದ ವಿಶಾಸ್ವಿಗಳೂ ಕ್ರಿಸ್ತನ ಬಾಧೆಗಳಲ್ಲಿ ಪಾಲುದಾರರಾಗಿದ್ದರು. ಅವರೂ ಹಿಂಸೆಗಳಿಗೆ ಗುರಿಯಾದರು, ಆದರೆ ಪೌಲನಿಗೆದುರಾದಷ್ಟು ಹಿಂಸೆಗಳು ಅವರಿಗೆ ಎದುರಾಗಲಿಲ್ಲ. ಆದರೆ ಕ್ರಿಸ್ತನೊಂದಿಗೆ ಮತ್ತು ಆತನ ಜನರೊಂದಿಗೆ ಬಾಧೆಗಳಲ್ಲಿ ಭಾಗಿಯಾಗುವ ಮನಸ್ಸುಳ್ಳವರಾಗಿರುವದು ಎಂದರೆ ಕ್ರಿಸ್ತನ ಸಂತೈಸುವಿಕೆ ಹಾಗೂ ಸಂತೋಷದಲ್ಲಿ ಭಾಗಿಯಾಗಲು ಶಕ್ತರಾಗುವದಾಗಿದೆ. 8

**1:8** *"ಆಸ್ಯ"*– ಅಪೊ 16:6; 18:19. ಎಫೆಸವು ಆಸ್ಯ ಸೀಮೆಯ ಪ್ರಮುಖ ಪಟ್ಟಣವಾಗಿತ್ತು.

*"ಅತ್ಯಧಿಕವಾದ ಭಾರ"*– ವ 10; 4:8-9; 6:9; 11:23-29 ರೊಂದಿಗೆ ಹೋಲಿಸಿ ನೋಡಿರಿ. ಅವನಿಗೆ ಎದುರಾದ ಅಪಾಯಗಳು ಮತ್ತು ಕಷ್ಟಗಳಿಂದ ತಪ್ಪಿಸಿಕೊಳ್ಳುವ ಮಾರ್ಗವೇ ಇಲ್ಲದಂಥವುಗಳಾಗಿದ್ದವು. 9

**1:9** *"ಮರಣ"*– ನಾನು ಸಾಯುವ ಸಮಯ ಹತ್ತಿರವಾಗಿದೆ ಎಂಬದಾಗಿ ಅವನಿಗೆ ಅನ್ನಿಸುತ್ತಾ ಇತ್ತು. ಆದರೆ ಅದೂ ಅವನ ಹಿತಕ್ಕಾಗಿಯೇ ಆಗಿತ್ತು (ರೋಮಾ 8:28). ಅವನು ಹಿಂದೆಂದಿಗಿಂತಲೂ ಹೆಚ್ಚಾಗಿ ದೇವರನ್ನು ಆತುಕೊಳ್ಳುವವನಾದನು. ದೇವರು ಸತ್ತವರನ್ನು ಎಬ್ಬಿಸುವವನಾದರೆ ತನ್ನನ್ನು ಅತ್ಯಂತ ಅಪಾಯಕಾರಿಯಾದ ಮರಣದಿಂದಲೂ ಕಾಪಾಡಲು ಶಕ್ತನು ಎಂಬದನ್ನು ಬಲ್ಲವನಾಗಿದ್ದನು. 10

**1:10** ಇದು ಬಹುಶಃ ಅದ್ಭುತವಾದ ಮತ್ತು ಅನಿರೀಕ್ಷಿತವಾದ ಬಿಡುಗಡೆಯಾಗಿರಬಹುದು.

ಇದು ಪೌಲನಿಗೆ ಭವಿಷ್ಯದ ಕುರಿತು ಅಧಿಕವಾದ ಭರವಸೆಯನ್ನು ನೀಡಿತು. 2 ತಿಮೊ 4:18 ರೊಂದಿಗೆ ಹೋಲಿಸಿ ನೋಡಿರಿ. ಹಾಗೆಯೇ 1 ಸಮು 17:34-37 ನೋಡಿರಿ. **11**

**1:11** ಪೌಲನು ಕೊರಿಂಥದಲ್ಲಿದ್ದ ವಿಶ್ವಾಸಿಗಳು ತಮ್ಮ ಕ್ರೈಸ್ತೀಯ ಜೀವಿತದ ಗುಣಮಟ್ಟವನ್ನು ಕೆಡಿಸಿಕೊಂಡದ್ದರಿಂದ ಅವರನ್ನು ಗದರಿಸಿದನು – 1 ಕೊರಿಂಥ 3:1-4; 5:1-2; 6:1. ಆದರೂ ಅವನು ಅವರ ಪ್ರಾರ್ಥನೆಗಳಿಗೆ ಬೆಲೆಯನ್ನು ಕೊಟ್ಟನು ಮತ್ತು ಅವುಗಳು ತನಗೆ ಸಹಾಯವಾಗುವವು ಎಂಬ ಭರವಸೆಯುಳ್ಳವನಾಗಿದ್ದನು (ಫಿಲಿಪ್ಪಿ 1:19; ಫಿಲೆ 1:22 ರೊಂದಿಗೆ ಹೋಲಿಸಿ ನೋಡಿರಿ). ಇದರಿಂದ ನಾವು ಕಲಿತುಕೊಳ್ಳಬೇಕಾದದ್ದು ಏನೆಂದರೆ ಬಲಹೀನರು ಮತ್ತು ಸತತವಾಗಿ ವಿಫಲರಾಗುವ ವಿಶ್ವಾಸಿಗಳ ಪ್ರಾರ್ಥನೆಗಳೂ ದೇವರ ಶಕ್ತಿಯಿಂದ ಕೂಡಿರುತ್ತವೆ. ಇದಲ್ಲದೆ ಪೌಲನು ದೇವರಿಗೆ ಕೃತಜ್ಞತೆ ಸಲ್ಲಿಸುವದು ಅವಶ್ಯವೆಂದು ಬಯಸಿದನು ಎಂಬದನ್ನೂ ಗಮನಿಸಿರಿ (4:15; 9:11-13). **12-14**

**1:12-14** ಕೊರಿಂಥದಲ್ಲಿದ್ದ ಕೆಲವರು ಪೌಲನ ಸತ್ಯಸಂಧತೆ ಮತ್ತು ಯಥಾರ್ಥತೆಯನ್ನು ಪ್ರಶ್ನಿಸುತ್ತಾ ಇದ್ದರು (13:3). ಆದ್ದರಿಂದ ಅವನು ಈ ಮಾತುಗಳನ್ನು ಬರೆದಿದ್ದಾನೆ. ಅವರು ಅವನ ನಿಮಿತ್ತವಲ್ಲ ಬದಲಾಗಿ ಅವರ ನಿಮಿತ್ತವೇ ಆತನಲ್ಲಿ ಭರವಸೆಯನ್ನಿಡುವದು ಅವರಿಗೆ ಪ್ರಾಮುಖ್ಯವಾಗಿತ್ತು. ಅವನ "ಹೆಚ್ಚಳಪಡುವಿಕೆಯು" ನಿಜವಾಗಿಯೂ ಸಮರ್ಥನೆಯಾಗಿತ್ತು, ಆದರೂ ಅವನ ಬಗ್ಗೆಯಲ್ಲ ಬದಲಾಗಿ ಅವನು ಸಾರಿದ ಸುವಾರ್ತೆ ಹಾಗೂ ಅವನ ಅಪೊಸ್ತಲತನದ ಸಮರ್ಥನೆಯಾಗಿತ್ತು. ಈ ಪತ್ರಿಕೆಯಾದ್ಯಂತ 11:13 ರಲ್ಲಿ ಹೇಳಲಾಗಿರುವ ಸುಳ್ಳು ಬೋಧಕರು ದೃಷ್ಟಿಯಲ್ಲಿರುವದನ್ನು ನಾವು ನೋಡಬಹುದು. ಅವರು ಸುಳ್ಳು ಸುವಾರ್ತೆಯನ್ನು ಸಾರುತ್ತಾ ಇದ್ದರು ಮತ್ತು ಅದನ್ನು ಸಮರ್ಥಿಸಿಕೊಳ್ಳಲು ಪೌಲನ ಮೇಲೆ ದಾಳಿ ಮಾಡುತ್ತಾ ಇದ್ದರು. ಸತ್ಯವಾದ ಸುವಾರ್ತೆಯನ್ನು ಸಮರ್ಥಿಸುವ ಸಲುವಾಗಿ ಪೌಲನು ಅವರ ದಾಳಿಗಳಿಗೆ ವಿರುದ್ಧವಾಗಿ ತನ್ನನ್ನು ರಕ್ಷಿಸಿಕೊಳ್ಳಬೇಕಾಯಿತು. ಕೊರಿಂಥದವರ ವಿಷಯವಾಗಿ ನೋಡುವದಾದರೆ ಸುವಾರ್ತೆಯು ಪೌಲನೊಂದಿಗೆ ಉಳಿಯುವದಾಗಿತ್ತು ಅಥವಾ ಬೀಳುವದಾಗಿತ್ತು. ಅವನು ತನ್ನ ವಿಷಯವಾಗಿ ಅವರಿಗೆ ಬರೆದ ಸಂಗತಿಗಳೆಲ್ಲವೂ ಅವರ ಪ್ರಯೋಜನಾರ್ಥಕವಾಗಿಯೇ ಇತ್ತು (12:19). ಆ ಸಮಯದಲ್ಲಿ ಅವರಿಗೆ ಮಾರ್ಗದರ್ಶನ ಕೊಡಲು ಹೊಸ ಒಡಂಬಡಿಕೆಯಾಗಲಿ, ಸುವಾರ್ತೆಯ ಪುಸ್ತಕಗಳಾಗಿ ಯಾವುದೂ ಇರಲಿಲ್ಲ. **12**

**1:12** *"ಹೊಗಳಿಕೊಳ್ಳುವದು"*– ಇದು ಈ ಪತ್ರಿಕೆಯ ಮತ್ತೊಂದು ಪ್ರಾಮುಖ್ಯವಾದ ಧ್ಯೇಯವಾಗಿದೆ. ಆತನು ಈ ಪದವನ್ನು ವಿವಿಧ ರೀತಿಯ ನಾಮಪದ ಹಾಗೂ ಕ್ರಿಯಾಪದ ರೂಪದಲ್ಲಿ 31 ಬಾರಿ ಉಪಯೋಗಿಸಿದ್ದಾನೆ. ಉದಾಹರಣೆಗೆ, 10:8,13; 11:16 ನೋಡಿರಿ. ಇದೇ ಗ್ರೀಕ್ ಪದವನ್ನು ರೋಮಾ 5:2-3; ಮತ್ತು ಫಿಲಿಪ್ಪಿ 3:3 ರಲ್ಲಿ "ಸಂತೋಷಿಸುವದು" ಎಂದು ಭಾಷಾಂತರ ಮಾಡಲಾಗಿದೆ. ಪೌಲನು ಈ ಪತ್ರಿಕೆಯಲ್ಲಿ "ಹೊಗಳಿಕೊಳ್ಳುತ್ತಾ ಇರುವದು" ದೇವರಲ್ಲಿ ಪವಿತ್ರವಾಗಿ ಸಂತೋಷಿಸುವದಕ್ಕೆ ಸಮವಾಗಿದೆ. ಇದು ಪಾಪಿಗಳಾಗಿರುವವರು ಹೊಗಳಿಕೊಳ್ಳುವ ಹೊಗಳಿಕೊಳ್ಳುವಿಕೆಯಲ್ಲ. ಅವರು ತಮ್ಮ ಸ್ವಂತ ಬಲ, ಬುದ್ಧಿವಂತಿಕೆ, ಸಾಮರ್ಥ್ಯ ಇತ್ಯಾದಿ ವಿಷಯಗಳಲ್ಲಿ ಹೊಗಳಿಕೊಳ್ಳುತ್ತಾರೆ. ಪೌಲನು ದೇವರಲ್ಲಿ ಮತ್ತು ದೇವರು ಅವನಲ್ಲಿ ಹೇಗೆ ಕಾರ್ಯಮಾಡಿದನು ಎಂಬ ವಿಷಯದಲ್ಲಿ ಹೊಗಳಿಕೊಂಡನು. ತನ್ನಲ್ಲಿರುವ ಒಳ್ಳೆಯ ವಿಷಯಗಳೆಲ್ಲವೂ ದೇವರಿಂದ ಬಂದವುಗಳು ಮತ್ತು "ದೇವರ ಕೃಪೆಗನುಸಾರವಾದವುಗಳು" –ಎಂಬದನ್ನು ಅವನು ಬಲ್ಲವನಾಗಿದ್ದನು. ರೋಮಾ 7:18; 1 ಕೊರಿಂಥ 1:29,31 ರೊಂದಿಗೆ ಹೋಲಿಸಿ ನೋಡಿರಿ. **14**

**1:14** *"ದಿನ"*– ಯೇಸು ಕ್ರಿಸ್ತನು ಹಿಂದಿರುಗಿ ಬರುವ ದಿನ. ಆಗ ಅವರು ಅವನ ಸಂತೋಷಕ್ಕೆ ಕಾರಣರಾಗಿರುವರು ಎಂಬ ಭರವಸೆ ಅವನಿಗಿತ್ತು. ಫಿಲಿಪ್ಪಿ 4:1; 1 ಥೆಸ 2:19-20 ರೊಂದಿಗೆ ಹೋಲಿಸಿ ನೋಡಿರಿ. **15-24**

**1:15-24** ಕೊರಿಂಥದಲ್ಲಿದ್ದ ಕೆಲವರು ಪೌಲನ ಸತ್ಯಸಂಧತೆ ಮತ್ತು ಯಥಾರ್ಥತೆಯ ವಿಷಯದಲ್ಲಿ ಯಾಕೆ ಸಂದೇಹ ಪಡುತ್ತಾ ಇದ್ದರು ಎಂಬದನ್ನು ಈ ವಾಕ್ಯಗಳು ತಿಳಿಯಪಡಿಸುತ್ತವೆ. ಅವರ ಸಂದೇಹಗಳಿಗೆ ಪೌಲನು ಇಲ್ಲಿ ಉತ್ತರವನ್ನು ಕೊಟ್ಟಿದ್ದಾನೆ. ಪೌಲನು ಅವರಿಗೆ ತಿಳಿಸಿದ್ದ ಪ್ರಕಾರವೇ, ಅಲ್ಲಿಗೆ ಮತ್ತೊಮ್ಮೆ ಹೋಗಬೇಕೆಂದಿದ್ದನು, ಆದರೆ ಕೆಲವು ಉತ್ತಮ ಕಾರಣಗಳಿಂದ ತನ್ನ ಯೋಜನೆಯನ್ನು ಬದಲಾಯಿಸಿಕೊಂಡನು. ಅವರ ವಿರೋಧಿಗಳು ಪೌಲನನ್ನು ನಂಬಲು ಆಗುವದಿಲ್ಲ, ಯಾಕಂದರೆ ಅವನು ಸಾರಿದ ಸುವಾರ್ತೆಯ ವಿಷಯದಲ್ಲಿಯೂ ತನ್ನ ಮನಸ್ಸು ಬದಲಾಯಿಸಿಕೊಳ್ಳಬಹುದು, ಆದ್ದರಿಂದಲೇ ಅವನು ಸಾರಿದ ಸುವಾರ್ತೆಯ ವಿಷಯದಲ್ಲಿ ಸಂದೇಹಪಡಬೇಕು ಎಂದು ಹೇಳುತ್ತಾ ಇದ್ದರು. ಪೌಲನು ತನ್ನ ಪ್ರಖ್ಯಾತಿಗಿಂತ ಹೆಚ್ಚಾಗಿ ಸುವಾರ್ತೆಯ ಪ್ರಖ್ಯಾತಿಯ ಬಗ್ಗೆ ಹೆಚ್ಚಾಗಿ ಚಿಂತಿಸುತ್ತಾ ಇದ್ದನು, ಆದರೆ ಅವರು ಒಟ್ಟಾಗಿ ಕೂಡಿಕೊಂಡಿದ್ದರು.

ಆದ್ದರಿಂದ ಅವನು ಕ್ರಿಸ್ತನ ಸುವಾರ್ತೆಯ ನಿಮಿತ್ತ ತನ್ನ ಪ್ರಖ್ಯಾತಿಯು ಸ್ಪಷ್ಟವಾಗಿರಬೇಕೆಂದು ಬಯಸಿದನು. ಈ ವಿಷಯದಲ್ಲಿ ಅವನು ಕ್ರಿಸ್ತನ ಸೇವಕರೆಲ್ಲರಿಗೆ ಮಾದರಿಯಾಗಿದ್ದಾನೆ. ಕ್ರಿಸ್ತನ ಪ್ರಖ್ಯಾತಿ ಮತ್ತು ನಮ್ಮ ಪ್ರಖ್ಯಾತಿ ಹೇಗೆ ಒಂದಾಗಿದೆ ಎಂಬದನ್ನು ನಾವೆಲ್ಲರೂ ಮನವರಿಕೆ ಮಾಡಿಕೊಳ್ಳಬೇಕು. **15-17**

**1:15-17** ಇದು ಅವನ ಮೂಲ ಯೋಜನೆಯಾಗಿತ್ತು ಆದರೆ ಅದನ್ನು ಬದಲಾಯಿಸಿಕೊಂಡನು (1 ಕೊರಿಂಥ 16:5-7 ರೊಂದಿಗೆ ಹೋಲಿಸಿ ನೋಡಿರಿ). ಅವನು ಯಾವುದೇ ಕಾರಣಗಳಿದ್ದರೂ ತನ್ನ ಮನಸ್ಸು ಬದಲಾಯಿಸಿಕೊಳ್ಳುತ್ತಲೇ ಇರುವನು, ರಕ್ಷಣೆ ಹೊಂದಿರದ ಮನುಷ್ಯರು ಮಾತ್ರವೇ ಹೀಗೆ ಲೌಕಿಕ ರೀತಿಯಲ್ಲಿ ಯೋಚನೆಗಳನ್ನು ಮಾಡುತ್ತಾರೆ ಎಂಬದು ಅವರ ಅಭಿಪ್ರಾಯವಾಗಿತ್ತು. ಅವನು ಚಂಚಲಚಿತ್ತನಾಗಿದ್ದಾನೆ, ತನ್ನ ಮಾತುಗಳ ಪ್ರಕಾರ ನಡೆದುಕೊಳ್ಳುವದಿಲ್ಲ ಎಂಬದಾಗಿ ಯೋಚಿಸುವ ಶೋಧನೆ ಅವರಿಗೆ ಎದುರಾಯಿತು. **18-20**

**1:18-20** ಸುವಾರ್ತೆಯ ನಿಮಿತ್ತ 17 ನೇ ವಚನದಲ್ಲಿ ತಿಳಿಸಲಾಗಿರುವ ಪ್ರಕಾರವೇ ಅವರು ಅವನ ಕುರಿತಾದ ಯಾವುದೇ ವಿಷಯವನ್ನು ನಂಬಬೇಕು ಎಂದು ಪೌಲನು ಹೇಳಿದ್ದಾನೆ. ಆದ್ದರಿಂದ ನಿಮ್ಮ ತಿಳುವಳಿಕೆ ತಪ್ಪು ಎಂಬದನ್ನು ಅವನು ಅವರಿಗೆ ತಿಳಿ ಹೇಳುತ್ತಾ ಇದ್ದಾನೆ. ಅವನ ಸಂದೇಶ ಮತ್ತು ಬೋಧನೆಗಳು ಯಾವಾಗಲೂ ದೃಢ, ನಿಶ್ಚಯ ಮತ್ತು ಸ್ಥಿರವಾಗಿದ್ದವು. ಪ್ರಾಮುಖ್ಯವಾದ ವಿಷಯಗಳ ಬಗ್ಗೆ ಯಾವುದೇ ರೀತಿಯ ಚಂಚಲತನ ಅಥವಾ ಮನಸ್ಸು ಬದಲಾವಣೆ ಇಲ್ಲ. ಇದಲ್ಲದೆ ತಾನು ಸಾರುತ್ತಿರುವ ಯೇಸು ಕ್ರಿಸ್ತನಲ್ಲಿಯೂ ಯಾವುದೇ ರೀತಿಯ ಚಂಚಲತನ ಅಥವಾ ಮನಸ್ಸು ಬದಲಾವಣೆ ಎಂಬದು ಇಲ್ಲ ಎಂಬದನ್ನು ಅವರಿಗೆ ದೃಢಪಡಿಸಿದ್ದಾನೆ. ದೇವರು ಮಾಡಿರುವ ಪ್ರತಿಯೊಂದು ವಾಗ್ದಾನವನ್ನು ಯೇಸು ಕ್ರಿಸ್ತನಲ್ಲಿ ನೆರವೇರಿಸುವನು. 19 ನೇ ವಚನದಲ್ಲಿ ಹೇಳಲಾಗಿರುವ ಸಿಲ್ವಾನನು ಮತ್ತು ಸೀಲನು ಒಬ್ಬನೇ ವ್ಯಕ್ತಿಯಾಗಿದ್ದಾರೆ. **21**

**1:21** ದೇವರ ಸುವಾರ್ತೆ ಮತ್ತು ದೇವರ ಸತ್ಯದ ವಿಷಯದಲ್ಲಿ, ವಿಶ್ವಾಸಿಗಳೆಲ್ಲರೂ ಚಂಚಲವಿಲ್ಲದವರು ಮತ್ತು ಸ್ಥಿರತೆಯುಳ್ಳವರು ಆಗಿರಬೇಕು ಎಂಬದನ್ನು ಪೌಲನು ಚೆನ್ನಾಗಿ ಬಲ್ಲವನಾಗಿದ್ದನು (1 ಕೊರಿಂಥ 15:58; 16:13). ದೇವರು ಮಾತ್ರವೇ ವಿಶ್ವಾಸಿಗಳನ್ನು ಹೀಗೆ ಮಾರ್ಪಡಿಸಲು ಸಾಧ್ಯ (ರೋಮಾ 16:25; 1 ಪೇತ್ರ 5:10).

*"ಅಭಿಷೇಕ"*– "ನನ್ನನ್ನು" ಆತನು ಅಭಿಷೇಕಿಸಿದ್ದಾನೆ ಎಂದು ಪೌಲನು ಹೇಳಿಲ್ಲ ಬದಲಾಗಿ

"ನಮ್ಮನ್ನು" ಎಂದು ಹೇಳಿದ್ದಾನೆ. ದೇವರು ವಿಶ್ವಾಸಿಗಳನ್ನೆಲ್ಲಾ ಅಭಿಷೇಕಿಸುತ್ತಾನೆ – 1 ಯೋಹಾನ 2:20,27. ಆತನು ಅವರನ್ನು ತನ್ನ ಆತ್ಮದಿಂದ ಅಭಿಷೇಕಿಸುತ್ತಾನೆ ಮತ್ತು ರಾಜವಂಶಸ್ಥರಾದ ಯಾಜಕರಾಗಲು ಅವರನ್ನು ಇತರೆ ಮಾನವರಿಂದ ಬೇರ್ಪಡಿಸುತ್ತಾನೆ (ಪ್ರಕ 1:6. ಮತ್ತಾಯ 1:1 ರಲ್ಲಿ ಅಭಿಷೇಕದ ಕುರಿತು ನೋಟ್ ನೋಡಿರಿ. ಲೂಕ 4:18; ಅಪೊ 10:38 ರೊಂದಿಗೆ ಹೋಲಿಸಿ ನೋಡಿರಿ. **22**

**1:22** *"ಮುದ್ರೆ"*– ಎಫೆ 1:13; 4:30; 2 ಥೆಸ 2:13 ರೊಂದಿಗೆ ಹೋಲಿಸಿ ನೋಡಿರಿ. ಮುದ್ರೆಯು ದೇವರ ಆತ್ಮನಾಗಿದ್ದಾನೆ ಮತ್ತು ವಿಶ್ವಾಸಿಗಳಲ್ಲಿ ಆತನ ಪ್ರಸನ್ನತೆಯು ಅವರನ್ನು ದೇವರ ವಿಶೇಷ ಸ್ವಾಸ್ಥ್ಯವನಾಗಿ ಗುರುತಿಸುತ್ತದೆ (1 ಕೊರಿಂಥ 6:19-20; ರೋಮಾ 8:9; ಯೋಹಾನ 17:6,10).

*"ಸಂಚಕಾರ"*– 5:5; ಎಫೆ 1:14 ಮತ್ತು ಈ ನೋಟ್ಸ್ ನೋಡಿರಿ. ದೇವರು ವಿಶ್ವಾಸಿಗಳಿಗೆ ತನ್ನ ಆತ್ಮವನ್ನು ಕೊಡುವದು, ತಾನು ಮಾಡಿರುವ ವಾಗ್ದಾನವನ್ನೂ ಸ್ವಾಸ್ಥ್ಯವಾಗಿ ಕೊಡುವನು ಎಂಬದಕ್ಕೆ ಭರವಸೆಯಾಗಿದೆ (ರೋಮಾ 8:17,23; ಎಫೆ 1:13-14; 1 ಪೇತ್ರ 1:4). ಇದು ದೇವರು ಅವರ ಅಂತಿಮ ರಕ್ಷಣೆಗೆ ಕೊಟ್ಟಿರುವ ಸಂಚಕಾರವಾಗಿದೆ. ದೇವರ ಆತ್ಮನು ನಮ್ಮಲ್ಲಿರುವದು ದೃಢವಾಗಿರುವ ಹಾಗೆಯೇ, ನಾವು ನಾಶವಾಗುವದಿಲ್ಲ ಎಂಬದೂ ದೃಢವಾಗಿದೆ. ಹಾಗೆಯೇ ಯೋಹಾನ 6:37-40; 10:27-29; 17:11-12; ರೋಮಾ 5:9-10; 8:28-29 ಸಹ ನೋಡಿರಿ. **23**

**1:23** ಆತನು ಎಷ್ಟೊಂದು ಪಕ್ವವಾಗಿ ಮಾತನಾಡುತ್ತಾ ಇದ್ದಾನೆ ನೋಡಿರಿ. ಯೇಸು ಕ್ರಿಸ್ತನ ಸುವಾರ್ತೆಯ ಘನತೆಯೇ ಅವನ ಪ್ರಮುಖ ಚಿಂತೆಯಾಗಿತ್ತು. ತಾನು ತನ್ನ ಮನಸ್ಸು ಬದಲಾಯಿಸಿಕೊಂಡದ್ದು ಯಾಕೆ ಎಂಬದಕ್ಕೆ ಕಾರಣವನ್ನು ಆತನು ಇಲ್ಲಿ ಕೊಟ್ಟಿದ್ದಾನೆ. ತನ್ನ ಮಾತಿನಂತೆ ನಡೆದುಕೊಳ್ಳಬೇಕೆಂಬ ಬಯಕೆ ಅವನಿಗಿರಲಿಲ್ಲ ಎಂಬದಾಗಿಯಲ್ಲ ಬದಲಾಗಿ ಆತನು ಅವರ ಬಗ್ಗೆ ಹೆಚ್ಚಾಗಿ ಚಿಂತಿಸುತ್ತಾ ಇದ್ದನು. ಹಾಗೆಯೇ 2:1-4 ನೋಡಿರಿ. ಕೊರಿಂಥದಲ್ಲಿದ್ದ ಸಭೆಯ ಪರಿಸ್ಥಿತಿ ಬಹಳ ಕೆಟ್ಟದಾಗಿದ್ದರಿಂದ ಅವನು ಅಲ್ಲಿಗೆ ಹೋದರೆ ಅವರಿಗೂ ಮತ್ತು ಅವನಿಗೂ ನೋವಾಗುತ್ತಾ ಇತ್ತು ಎಂಬದು ಅವನ ಮಾತಿನ ಅರ್ಥವಾಗಿದೆ. ಅವರಿಗೆ ನೋವಾಗಬೇಕೆಂದು ಆತನು ಬಯಸಲಿಲ್ಲ. 1 ಕೊರಿಂಥ 4:21 ನೋಡಿರಿ. **24**

**1:24** ಅವರು ತಪ್ಪಾಗಿ ಅರ್ಥಮಾಡಿಕೊಳ್ಳುವದು ಅವನಿಗೆ ಬೇಡವಾಗಿತ್ತು. ಅವನು ಅವರ ಮೇಲೆ ಸರ್ವಾಧಿಕಾರ ಮಾಡುವಂಥ ಕ್ರೂರಿಯಾಗಿರಲಿಲ್ಲ. ಅವರು ತಮ್ಮ ನಂಬಿಕೆಯಿಂದಲೇ ನಿಂತಿದ್ದರು, ಅವನಿಗೆ ಅವರ ಮೇಲೆ ಯಾವುದೇ ರೀತಿಯ ಅಧಿಕಾರ ನಡೆಸಲು ಇಷ್ಟ ಇರಲಿಲ್ಲ (13:10). 1 ಪೇತ್ರ 5:3 ರೊಂದಿಗೆ ಹೋಲಿಸಿ ನೋಡಿರಿ.

# 2 1-4

**2:1-4** 1:23 ನೋಡಿರಿ. ಪೌಲನು 3,4 ವಾಕ್ಯಗಳಲ್ಲಿ ಹೇಳುತ್ತಿರುವ ಪತ್ರ 1 ಕೊರಿಂಥ ಪತ್ರಿಕೆಯಾಗಿದೆ ಎಂಬದು ಕೆಲವು ದೈವಪಂಡಿತರ ಆಲೋಚನೆಯಾಗಿದೆ. ಆದರೆ ಇದು ಬೇರೊಂದು ಪತ್ರವಾಗಿದ್ದು, ದೇವರಾತ್ಮನು ಅದನ್ನು ಹೊಸ ಒಡಂಬಡಿಕೆಯಲ್ಲಿ ಸೇರಿಸುವ ಆಯ್ಕೆ ಮಾಡಲಿಲ್ಲ ಎಂಬ ಸಾಧ್ಯತೆಯೂ ಬಹಳವಾಗಿದೆ. **5-10**

**2:5-10** ಒಂದುವೇಳೆ ಪೌಲನು 3,4 ವಾಕ್ಯಗಳಲ್ಲಿ ಮೊದಲನೆ ಕೊರಿಂಥ ಪತ್ರಿಕೆಯ ಬಗ್ಗೆ ಮಾತನಾಡುತ್ತಾ ಇರುವದಾದರೆ, ಈ ವಚನಗಳಲ್ಲಿ ಆತನು ಸೂಚಿಸುತ್ತಿರುವ ವ್ಯಕ್ತಿ 1 ಕೊರಿಂಥ 5:1-5 ರಲ್ಲಿರುವ ವ್ಯಕ್ತಿಯೇ ಆಗಿದ್ದಾನೆ. ಆದರೆ ಪೌಲನು ಇಲ್ಲಿ ಸಂಪೂರ್ಣವಾಗಿಯೇ ಬೇರೆ ವ್ಯಕ್ತಿಯ ಬಗ್ಗೆಯೇ ಮಾತನಾಡುತ್ತಾ ಇದ್ದಾನೆ ಎಂಬದಾಗಿ ಅನ್ನಿಸುತ್ತದೆ – ಅಂದರೆ ಯಾವುದೋ ರೀತಿಯಲ್ಲಿ ಅವನು ಪೌಲನಿಗೆ ವೈಯಕ್ತಿಕವಾಗಿ ಪಾಪ ಮಾಡಿರಬಹುದು. ಇಲ್ಲಿ ಉಪಯೋಗಿಸಲಾಗಿರುವ ಭಾಷೆ ಇದನ್ನು ಸೂಚಿಸುತ್ತದೆ. ಏನೇ ಆದರೂ ಪಾಠ ಮಾತ್ರ ಒಂದೇ ಆಗಿದೆ. ಪಾಪ ಮಾಡಿರುವ ವ್ಯಕ್ತಿ ಸಭೆಯ ಕ್ರಮಶಿಕ್ಷಣವನ್ನು ಅಂಗೀಕರಿಸಿಕೊಂಡು ಪಶ್ಚಾತ್ತಾಪಪಟ್ಟರೆ ಅವನನ್ನು ಕ್ಷಮಿಸಬೇಕು ಮತ್ತು ಸಭೆಗೆ ಸೇರಿಸಿಕೊಳ್ಳಬೇಕು. **6**

**2:6** *"ಶಿಕ್ಷೆ"*–ಎಂದರೆ ಸಭೆಯ ಕ್ರಮಶಿಕ್ಷಣ – ಪಾಪ ಮಾಡಿದವನೊಂದಿಗಿನ ಸಂಪರ್ಕಗಳನ್ನು ಕಡಿದುಕೊಳ್ಳುವದು ಅಥವಾ ಅನ್ಯೋನ್ಯತೆಗೆ ಸೇರಿಸದಿರುವದು ಅಥವಾ ಇವುಗಳಿಗೆ ಸಮಾನವಾದದ್ದು (1 ಕೊರಿಂಥ 5:13; 2 ಥೆಸ 3:17 ರೊಂದಿಗೆ ಹೋಲಿಸಿ ನೋಡಿರಿ). **7-8**

**2:7-8** ಸಭೆಯ ಕ್ರಮಶಿಕ್ಷಣದ ಉದ್ದೇಶ ಸುಮ್ಮನೆ ಶಿಕ್ಷಿಸುವದು ಮಾತ್ರವಲ್ಲ ಬದಲಾಗಿ ಪಾಪ ಮಾಡುವ ಕ್ರೈಸ್ತನನ್ನು ಪಶ್ಚಾತ್ತಾಪಕ್ಕೆ ನಡೆಸುವದಾಗಿದೆ. ಈ ವಚನಗಳು ಸೂಚಿಸುವದೇನೆಂದರೆ ಅವನು ಪಶ್ಚಾತ್ತಾಪಪಟ್ಟನು ಮತ್ತು ತನ್ನ ಪಾಪದ ನಿಮಿತ್ತ

ದುಃಖಿಸುತ್ತಾ ಇದ್ದನು. ಪೌಲನು ಹೇಳುವದೇನೆಂದರೆ, ವಿಶ್ವಾಸಿಗಳು ಇದನ್ನು ನೋಡಬೇಕು ಮತ್ತು ಕ್ರಮಶಿಕ್ಷಣವನ್ನು ಯಾವಾಗ ನಿಲ್ಲಿಸಬೇಕು ಹಾಗೂ ಕ್ಷಮಿಸಲು ಮತ್ತು ಸಂತೈಸಲು ಯಾವಾಗ ಪ್ರಾರಂಭಿಸಬೇಕು ಎಂಬದನ್ನು ತಿಳಿದುಕೊಳ್ಳಬೇಕು. ಕ್ರಮಶಿಕ್ಷಣ ಅನುಭವಿಸುವ ಮತ್ತು ಪಶ್ಚಾತ್ತಾಪಪಡುವ ಮೊದಲು ಕ್ಷಮಿಸಬೇಕು ಹಾಗೂ ಸಂತೈಸಬೇಕು ಎಂಬದಾಗಿ ಆತನು ಹೇಳಿಲ್ಲ. ಕ್ರೈಸ್ತರು ಪಾಪ ಮಾಡುವಾಗ, ಸಭೆಯ ನಾಯಕರು ಅವರೊಂದಿಗೆ ಮೃದುವಾಗಿ ಮತ್ತು ಸುಲಭವಾಗಿ ನಡೆದುಕೊಳ್ಳಬಾರದು, ಹಾಗೆಯೇ ಕ್ರೂರವಾಗಿ ಮತ್ತು ಕಠಿಣವಾಗಿ ನಡೆದುಕೊಳ್ಳಬಾರದು. ಕ್ರಮಶಿಕ್ಷಣವೂ ಇರಬೇಕು ಹಾಗೆಯೇ ಪ್ರೀತಿಯೂ ಇರಬೇಕು. 9

**2:9** *“ವಿಧೇಯರಾಗಿ”*– ತನಗೆ ವಿಧೇಯರಾಗಬೇಕೆಂದು ಆತನು ಹೇಳುತ್ತಾ ಇಲ್ಲ (1:24), ಬದಲಾಗಿ ತನ್ನ ಮೂಲಕ ಕರ್ತನು ಕೊಟ್ಟಿರುವ ಸೂಚನೆಗಳಿಗೆ ವಿಧೇಯರಾಗುವಂತೆ ಹೇಳಿದ್ದಾನೆ. ಈ ಎರಡೂ ಕಾರ್ಯಗಳ ನಡುವೆ ದೊಡ್ಡ ವ್ಯತ್ಯಾಸವಿದೆ. ಕೆಲವು ಕ್ರೈಸ್ತ ನಾಯಕರು ತಮಗೆ ವಿಧೇಯರಾಗಿ ನಡೆದುಕೊಳ್ಳಬೇಕೆಂದು ಬಯಸುತ್ತಾರೆ, ಪೌಲನು ಕರ್ತನಿಗೆ ವಿಧೇಯರಾಗಿ ನಡೆದುಕೊಳ್ಳುವದರ ಬಗ್ಗೆ ಚಿಂತಿಸುತ್ತಾ ಇದ್ದನು. 10

**2:10** ಪೌಲನು ತನಗೆ ವೈಯಕ್ತಿಕವಾಗಿ ತಪ್ಪು ಮಾಡಿದವನನ್ನು ಆಗಲೇ ಕ್ಷಮಿಸಿದ್ದನು. ಈಗ ಅವನು ಪಶ್ಚಾತ್ತಾಪಪಟ್ಟಿದ್ದನು ಮತ್ತು ಪೌಲನು ಅವನ ಪಾಪವನ್ನು ಚಿಕ್ಕ ವಿಷಯವೆಂದು ಪರಿಗಣಿಸುವವನಾಗಿದ್ದನು. ಒಂದುವೇಳೆ ಅವನು 1 ಕೊರಿಂಥ 5:1-5 ವಚನಗಳಲ್ಲಿ ಬರೆಯಲಾಗಿರುವ ವ್ಯಕ್ತಿಯ ಪಾಪವನ್ನು ಸೂಚಿಸುವವನಾಗಿದ್ದರೆ ಇದು ಸಾಧ್ಯವಿಲ್ಲ – ಯಾಕಂದರೆ ಅದು ಸಣ್ಣ ವಿಷಯವಲ್ಲ ಮತ್ತು ಪೌಲನು ಅದನ್ನು ಸಣ್ಣ ವಿಷಯವೆಂದು ಪರಿಗಣಿಸುತ್ತಲೂ ಇರಲಿಲ್ಲ. ಆದರೆ ಪೌಲನು ವೈಯಕ್ತಿಕವಾಗಿ ತನಗೆ ವಿರುದ್ಧವಾಗಿ ಯಾರೇ ತಪ್ಪು ಮಾಡಿದರೂ ಅವರನ್ನು ಸಂತೋಷದಿಂದ ಕ್ಷಮಿಸಲು ಸಿದ್ಧನಾಗಿದ್ದನು. ಈ ರೀತಿಯ ಕ್ಷಮಾಪಣೆಯ ವಿಷಯದಲ್ಲಿ ಮತ್ತಾಯ 6:12,14,15; 18:21-35; ಎಫೆ 4:32; ಕೊಲೊ 3:13 ನೋಡಿರಿ. ಯೇಸು ಕ್ರಿಸ್ತನ ಕಣ್ಣುಗಳು ನನ್ನ ಮೇಲಿದೆ ಮತ್ತು ನಾನು ಇತರರನ್ನು ಕ್ಷಮಿಸಿರುವದಕ್ಕಿಂತ ಹೆಚ್ಚಾಗಿ ಕ್ರಿಸ್ತನು ನನ್ನನ್ನು ಕ್ಷಮಿಸಿದ್ದಾನೆ ಎಂಬದನ್ನು ಪೌಲನು ಬಲ್ಲವನಾಗಿದ್ದನು. 11

**2:11** ವಿಶ್ವಾಸಿಗಳ ಜೀವಿತಗಳನ್ನು ಹಾಳು ಮಾಡುವದು, ಸಭೆಗಳನ್ನು ಒಡೆಯುವದು ಮತ್ತು ಕ್ರಿಸ್ತನಿಗೆ ಅಗೌರವವನ್ನು ತರುವದು ಸೈತಾನನ ಉದ್ದೇಶವಾಗಿದೆ. ಇದನ್ನು

ನೆರವೇರಿಸಲು ಅವನು ಯೋಚನೆಗಳನ್ನು (ಬಹುವಚನ) ಹೊಂದಿದ್ದಾನೆ. ಕ್ರೈಸ್ತರು ಪಾಪ ಮಾಡುವಂತೆ ಅವನು ಪ್ರಯತ್ನಿಸುತ್ತಾನೆ, ನಂತರ ಅವರು ಕ್ಷಮಾಪಣೆಯ ಹತಾಶೆಯಲ್ಲಿ ಜೀವಿಸುವಂತೆ ವಿಷಯಗಳನ್ನು ಸರಿಪಡಿಸಲು ಪ್ರಯತ್ನಿಸುತ್ತಾನೆ. ಅಥವಾ ಅವರು ಪಶ್ಚಾತ್ತಾಪಪಡುವ ಮೊದಲೇ ಸಭೆ ಅವರನ್ನು ಸೇರಿಸಿಕೊಳ್ಳುವಂತೆ ಮಾಡಲು ಪ್ರಯತ್ನಿಸುತ್ತಾನೆ. ಅವನು ಸಭೆಯ ಒಬ್ಬ ಅಥವಾ ಅಧಿಕ ಸದಸ್ಯರ ಮೂಲಕ ಸಮಾಧಾನ ಹಾಗೂ ಸೌಹಾರ್ದತೆಯನ್ನು ಹಾಳು ಮಾಡಲು ಪ್ರಯತ್ನಿಸುತ್ತಾನೆ. ಪಾಪ ಮಾಡುವವರೊಂದಿಗೆ ಸಭೆಯ ನಾಯಕರು ತುಂಬಾ ಸರಳವಾಗಿ ಅಥವಾ ಕ್ರೂರವಾಗಿ ನಡೆದುಕೊಳ್ಳುವಂತೆ ಮಾಡಲು ಪ್ರಯತ್ನಿಸುತ್ತಾನೆ. 1 ಪೂರ್ವ 21:1; ಮತ್ತಾಯ 4:1; ಯೋಹಾನ 8:44 ರಲ್ಲಿ ಸೈತಾನನ ಕುರಿತಾದ ನೋಟ್ಸ್ ನೋಡಿರಿ. 12

**2:12** *"ಬಾಗಿಲು"*– ಅಪೊ 14:27; 1 ಕೊರಿಂಥ 16:9; ಕೊಲೊ 4:3; ಪ್ರಕ 3:8. 13

**2:13** *"ತೀತ"*– ಪೌಲನು ತೀತನನ್ನು ಕೊರಿಂಥಕ್ಕೆ ಕಳುಹಿಸಿದ್ದನು (7:6-7), ಮತ್ತು ಅವನನ್ನು ತ್ರೋವದಲ್ಲಿ ಭೇಟಿಯಾಗಲು ಬೇಕಾದ ಏರ್ಪಾಡುಗಳನ್ನು ಮಾಡಿದ್ದನು. ತೀತನು ಅಲ್ಲಿಗೆ ಬರದೆ ಇದ್ದಾಗ ಕೊರಿಂಥದಲ್ಲಿದ್ದ ಪರಿಸ್ಥಿತಿಯ ಬಗ್ಗೆ ಪೌಲನ ಮನಸ್ಸಿನಲ್ಲಿ ತಳಮಳಗೊಂಡನು. ಅವರ ಮೇಲೆ ಅವನಿಗೆ ಬಹಳ ಪ್ರೀತಿಯಿತ್ತು (ವ 4), ಮತ್ತು ಅವರು ಅವನ ಪತ್ರಿಕೆಗಳಿಗೆ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯಿಸಬೇಕೆಂದು ಅವನು ಎದುರುನೋಡುತ್ತಾ ಇದ್ದನು.

*"ಮಕೆದೊನ್ಯ"*– 1:16. 14

**2:14** ಸಭೆಗಳಲ್ಲಿ ಸಮಸ್ಯೆಗಳು ಮತ್ತು ಲೋಕದಲ್ಲಿ ಹಿಂಸೆಗಳು ಇದ್ದರೂ, ದೇವರು ತನ್ನ ಸೇವಕರನ್ನು ಜಯದಿಂದ ಜಯಕ್ಕೆ ನಡೆಸುತ್ತಾನೆ. ರೋಮಾ 8:37 ರೊಂದಿಗೆ ಹೋಲಿಸಿ ನೋಡಿರಿ. "ಕ್ರಿಸ್ತನ ಅನ್ಯೋನ್ಯತೆಯಲ್ಲಿ" ಮತ್ತು "ಯಾವಾಗಲೂ" ಎಂಬ ಪದಗಳನ್ನು ಗಮನಿಸಿರಿ – ಆತನಿಲ್ಲದೆ ನಾವು ಏನೇ ಮಾಡಿದರೂ ಜಯ ಸಿಗುವದಿಲ್ಲ ಎಂದಿಗೂ ಸಿಗುವದಿಲ್ಲ. ಕೆಲವರು ತಾವಂದುಕೊಳ್ಳುವ ಯಶಸ್ಸನ್ನು ಹೊಂದುತ್ತಾರಾದರೂ, ಅದು ಲೌಕಿಕ ರೀತಿಯ ಯಶಸ್ಸಾಗಿದ್ದು, ದೇವರು ಅದಕ್ಕೆ ಯಾವುದೇ ಬಹುಮಾನವನ್ನು ಕೊಡುವದಿಲ್ಲ.

*"ಸುವಾಸನೆ"*– ಹೃದಯಕ್ಕೆ ಯೇಸು ಕ್ರಿಸ್ತನ ತಿಳುವಳಿಕೆಯು ಅಮೂಲ್ಯವಾದ ಸುವಾಸನೆಯಂತಿರುತ್ತದೆ. ಪೌಲನು ಮತ್ತು ಅವನ ಜೊತೆಸೇವಕರು ತಾವು ಹೋದ

ಕಡೆಗಳಲೆಲ್ಲಾ ಈ ತಿಳುವಳಿಕೆಯನ್ನು ಸಾರುತ್ತಾ ಇದ್ದರು. ನಾವು ಸಾರುತ್ತಾ ಇದ್ದೇವೆಯೇ? 15

**2:15** *"ಪರಿಮಳ"*– ಕ್ರಿಸ್ತನ ಸೇವಕರು ಕ್ರಿಸ್ತನ ತಿಳುವಳಿಕೆಯನ್ನು ರಕ್ಷಣೆ ಹೊಂದಿದವರಿಗೆ ಮತ್ತು ರಕ್ಷಣೆ ಹೊಂದದೆ ಇರುವವರಿಗೆ, ವಿಶ್ವಾಸಿಗಳಿಗೆ ಮತ್ತು ಅವಿಶ್ವಾಸಿಗಳಿಗೆ ಸಮಾನವಾಗಿ ಸಾರುತ್ತಾರೆ. ಈ ರೀತಿಯಾಗಿ ಅವರು ದೇವರಿಗೆ "ಸುಮಧುರ ಪರಿಮಳವಾಗುತ್ತಾರೆ." –ತನ್ನ ದೇಹ ಅಥವಾ ಬಟ್ಟೆಗಳ ಮೇಲಿರುವ ಪರಿಮಳವು ಅವನು ಹೋಗುವ ಕಡೆಯೆಲ್ಲಾ ಸುವಾಸನೆಯಾಗಿರುತ್ತದೆ. ಒಬ್ಬ ವ್ಯಕ್ತಿಯೊಳಗೆ ಯೇಸು ಕ್ರಿಸ್ತನು ಜೀವಿಸುತ್ತಾ ಇರುವದಾದರೆ, ಅವನು ಯೇಸು ಕ್ರಿಸ್ತನ ಬಗ್ಗೆ ಮಾತನಾಡುತ್ತಾ ಇರುವದಾದರೆ ಮತ್ತು ಕ್ರಿಸ್ತನ ಸುವಾರ್ತೆಯನ್ನು ಅವನು ಸಾರುತ್ತಾ ಇರುವದಾದರೆ ಅವನು ಯೇಸು ಕ್ರಿಸ್ತನ ಸುಗಂಧ ಪರಿಮಳವನ್ನೂ ಬೀರುವವನಾಗಿರುತ್ತಾನೆ. ವಿಶ್ವಾಸಿಗಳು ಪಾಪದ ಅಥವಾ ಲೋಕದ ಪರಿಮಳವನ್ನು ಎಂದಿಗೂ ಬೀರುವವರಾಗಿರಬಾರದು. 16

**2:16** ಕ್ರಿಸ್ತನ ಸೇವಕರು ಸುವಾರ್ತೆಯನ್ನು ಸಾರುವಾಗ ಅದನ್ನು ನಂಬುವವರಿಗೆ ಜೀವವು ದೊರೆಯುತ್ತದೆ ಮತ್ತು ನಿರಾಕರಿಸುವವರಿಗೆ ಮರಣವು ಎದುರಾಗುತ್ತದೆ. ಯೋಹಾನ 3:36 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡಲು ನಿರಾಕರಿಸುವವರಿಗೆ ಸುವಾರ್ತೆಯು ಮಾರಣಾಂತಿಕವಾದ ಪರಿಮಳವಾಗಿರುತ್ತದೆ, ಅದರೆ ನಂಬುವವರಿಗೆ ನಿತ್ಯಜೀವವನ್ನು ಕೊಡುವ ಪರಿಮಳವಾಗಿರುತ್ತದೆ.

*"ಯಾರು ಯೋಗ್ಯರು"*– ಯೇಸು ಕ್ರಿಸ್ತನ ತಿಳುವಳಿಕೆಯನ್ನು ಸಾರಲು ಯಾವ ವ್ಯಕ್ತಿಯೂ ತನ್ನಲ್ಲಿ ಬಲವನ್ನು ಹೊಂದಿರುವದಿಲ್ಲ. ಆದರೆ 3:5-6 ನೋಡಿರಿ. ನಮ್ಮನ್ನು ಶಕ್ತರನ್ನಾಗಿ ಮಾಡುವಾತನು ಒಬ್ಬನಿದ್ದಾನೆ. 17

**2:17** *"ಕಲಬೆರಕೆ ಮಾಡುವವರು"*– ನಾವು ಕ್ರಿಸ್ತನ ಸೇವಕರೆಂದು ಹೇಳಿಕೊಂಡು ಕ್ರಿಸ್ತನ ಸುವಾರ್ತೆಯನ್ನು ವೈಯಕ್ತಿಕ ಲಾಭಕ್ಕಾಗಿ ದುರ್ಬಳಕೆ ಮಾಡಿಕೊಳ್ಳುವವರು ಇದ್ದಾರೆ ಎಂಬದು ಪೌಲನಿಗೆ ಗೊತ್ತಿತ್ತು. "ಕಲಬೆರಕೆ" ಎಂಬದಾಗಿ ಭಾಷಾಂತರ ಮಾಡಲಾಗಿರುವ ಪದವು "ಮಿಶ್ರಮಾಡುವದು" ಎಂಬ ಅರ್ಥವನ್ನೂ ಕೊಡುತ್ತದೆ ಅಥವಾ ಎರಡನ್ನೂ ಸೇರಿಸಬಹುದು. ಪ್ರಾಮಾಣಿಕರಲ್ಲದ ವ್ಯಾಪಾರಸ್ಥರು ಅಥವಾ ವರ್ತಕರು ಸಹಜವಾಗಿ ಲಾಭ ಮಾಡುವ ಉದ್ದೇಶದಿಂದ ತಮ್ಮ ಉತ್ಪನ್ನವನ್ನು ಕಲಬೆರಕೆ ಮಾಡುತ್ತಾರೆ. ಕ್ರೈಸ್ತ ಸೇವಕರು ಎಂಬದಾಗಿ ಹೇಳಿಕೊಳ್ಳುವ ಕೆಲವರು ಇದೇ ಮನಸ್ಥಿತಿಯವರಾಗಿದ್ದಾರೆ, ಅವರು ಯೇಸು

ಕ್ರಿಸ್ತನ ಕುರಿತಾದ ಸಂದೇಶವನ್ನು "ಕಲಬೆರಕೆ" –ಮಾಡುತ್ತಾರೆ ಮತ್ತು ಅದರಿಂದ ತಮಗೇನು ದೊರೆಯುತ್ತದೆ ಎಂಬದ ಮೇಲೆಯೇ ಅವರ ಸೇವೆಯು ಆಧಾರವಾಗಿರುತ್ತದೆ – 1 ತಿಮೊ 6:5; ಯೋಹಾನ 12:4-6; 2 ಪೇತ್ರ 2:15 ರೊಂದಿಗೆ ಹೋಲಿಸಿ ನೋಡಿರಿ.

*"ನಿಷ್ಕಪಟಿಗಳು"*– 1:12,18,19.

*"ದೇವರ ಸಮಕ್ಷಮದಲ್ಲಿ"*– ದೇವರ ಕಣ್ಣುಗಳು ಯಾವಾಗಲೂ ನನ್ನ ಮೇಲೆ ಇದೆ ಎಂಬದು ಪೌಲನಿಗೆ ಗೊತ್ತಿತ್ತು, ಆದ್ದರಿಂದ ಅವನು ದೇವರ ವಾಕ್ಯಗಳ ಪ್ರಕಾರ ಜೀವಿಸಲು ಮತ್ತು ಸೇವೆ ಮಾಡಲು ಬಯಸುತ್ತಾ ಇದ್ದನು. ಈ ತಿಳುವಳಿಕೆಯು ಯಾರ ಜೀವಿತದಲ್ಲಾದರೂ ದೊಡ್ಡ ವ್ಯತ್ಯಾಸವನ್ನುಂಟು ಮಾಡುತ್ತದೆ.

# 3₁

**3:1** ಈ ಎರಡು ಪ್ರಶ್ನೆಗಳಿಗೆ "ಇಲ್ಲ" ಎಂಬದೇ ಉತ್ತರವಾಗಿದೆ. ಶಿಫಾರಸ್ಸಿನ ಪತ್ರಗಳಿಗೆ ಯಾವುದೇ ಅವಕಾಶವಿಲ್ಲ ಎಂದು ಪೌಲನು ಹೇಳುತ್ತಾ ಇಲ್ಲ. ಪೌಲನೇ ಕೆಲವೊಮ್ಮೆ ಇತರರನ್ನು ಶಿಫಾರಸ್ಸು ಮಾಡಿದ್ದಾನೆ (8:16-24; ರೋಮಾ 16:1-2; 1 ಕೊರಿಂಥ 16:3,10,11). ಆದರೆ ಇಲ್ಲಿ ನನಗೆ ಅಂಥ ಕಾರ್ಯಗಳ ಅವಶ್ಯಕತೆಯಿಲ್ಲ ಎಂದು ಅವನು ಹೇಳುತ್ತಾ ಇದ್ದಾನೆ. **2-3**

**3:2-3** ಕೊರಿಂಥದಲ್ಲಿದ್ದ ವಿಶ್ವಾಸಿಗಳೇ ಪೌಲನಿಗೆ ಯೋಗ್ಯತಾ ಪತ್ರಗಳಂತಿದ್ದರು. ಅವರನ್ನು ಪತ್ರಕ್ಕೆ ಹೋಲಿಸುತ್ತಾ ಕೆಳಗೆ ಕೊಡಲಾಗಿರುವ ವಿಷಯಗಳನ್ನು ಹೇಳಲಾಗಿದೆ. ಅವುಗಳನ್ನು ಪೌಲನ ಮತ್ತು ಅವನ ಜೊತೆ ಸೇವಕರ ಹೃದಯಗಳ ಮೇಲೆ ಬರೆಯಲಾಗಿವೆ (ಅಂದರೆ, ಪೌಲನು ಮತ್ತು ಇತರರು ಅವರಲ್ಲಿ ನಡೆಯುತ್ತಾ ಇದ್ದ ದೇವರ ಕಾರ್ಯಗಳ ಬಗ್ಗೆ ಅರಿತವರಾಗಿದ್ದರು ಮತ್ತು ಅವರು ಅವರನ್ನು ಬಹಳವಾಗಿ ಪ್ರೀತಿಸುತ್ತಾ ಇದ್ದರು – 7:3). ಪೌಲನ ಹೃದಯದೊಳಗೆ ರಹಸ್ಯವಾದ ಯಾವ ಪತ್ರಗಳೂ ಅಡಕವಾಗಿರಲಿಲ್ಲ ಬದಲಾಗಿ ಯಾರು ಬೇಕಾದರೂ ಆ ಪತ್ರವನ್ನು ಓದಬಹುದಾಗಿತ್ತು (ಪೌಲನ ಸೇವೆಯ ಮೂಲಕ ಅವರಲ್ಲಾದ ಬದಲಾವಣೆಯನ್ನು ಯಾರು ಬೇಕಾದರೂ ಗಮನಿಸಬಹುದಾಗಿತ್ತು). ಆ ಪತ್ರವು ಯೇಸು ಕ್ರಿಸ್ತನ ಪತ್ರವಾಗಿತ್ತು (ಆತನ ಯೋಜನೆ, ಆತನ ಸಂದೇಶ ಅವರಲ್ಲಿ ಬದಲಾವಣೆಯನ್ನು ಉಂಟುಮಾಡಿತ್ತು). ಅವರು ಪೌಲನ ಮತ್ತು ಅವನ ಸಹಾಯಕರ ಪತ್ರವೂ ಆಗಿದ್ದರು (ಯೇಸು ಕ್ರಿಸ್ತನು ಅವರನ್ನು ತನ್ನ ಕೆಲಸದಲ್ಲಿ

ಉಪಯೋಗಿಸಿಕೊಂಡಿದ್ದನು). ಅವರು ದೇವರಾತ್ಮನ ನಿರ್ಮಾಣವಾಗಿದ್ದರು (ಯೋಹಾನ 3:5-8 ರೊಂದಿಗೆ ಹೋಲಿಸಿ ನೋಡಿರಿ). "ಬರವಣಿಗೆ" ಅವರ ಹೃದಯದ ಮೇಲಾಗಿತ್ತು (ಅವರಲ್ಲಾದ ಬದಲಾವಣೆಯು ಕೇವಲ ಬಾಹ್ಯದಲ್ಲಿ ಅಲ್ಲ ಬದಲಾಗಿ ಆಂತರ್ಯದಲ್ಲಿ ಆಗಿತ್ತು – 5:17). ದೇವರು ಕಲ್ಲಿನ ಹಲಗೆಯ ಮೇಲೆ ಬರೆದ ಆಜ್ಞೆಗಳಿಗೆ ಪೌಲನು ಇವೆಲ್ಲವುಗಳನ್ನು ಸೇರಿಸುತ್ತಾ ಇದ್ದಾನೆ. ವಿಮೋ 31:18; 32:15-16 ನೋಡಿರಿ. ಯೆರೆ 31:33-34; ಇಬ್ರಿ 8:10-12 ರೊಂದಿಗೆ ಹೋಲಿಸಿ ನೋಡಿರಿ. ಈಗಲೂ ದೇವಜನರು ದೇವರು "ಪತ್ರಗಳನ್ನು" ನಿರ್ಮಿಸುವ ಸಲುವಾಗಿ ದುಡಿಯುತ್ತಾ ಇದ್ದಾರೆ – ಅಂದರೆ ಯೇಸು ಕ್ರಿಸ್ತನ ಸುವಾರ್ತೆಯ ಮೂಲಕ ಆಳವಾಗಿ ಮತ್ತು ನಿತ್ಯವಾದ ಬದಲಾಗುವ ಜನರೇ ಪತ್ರಗಳಾಗಿದ್ದಾರೆ. ಈ ಕೆಲಸಕ್ಕಿಂತ ದೊಡ್ಡ ಕೆಲಸ ಲೋಕದಲ್ಲಿ ಬೇರೆ ಏನಾದರೂ ಇದೆಯೇ?

**3-11**

**3:3-11** ಈ ವಚನಗಳಲ್ಲಿ ಪೌಲನು ಹಳೆಯ ಒಡಂಬಡಿಕೆಯೊಂದಿಗೆ ಹೊಸ ಒಡಂಬಡಿಕೆಗೆ ಇರುವ ವ್ಯತ್ಯಾಸವನ್ನು ತಿಳಿಸುತ್ತಾ ಇದ್ದಾನೆ. ಹಳೆಯದು ಸೇವೆಯಾಗಿದ್ದು ಮರಣವನ್ನು ಉಂಟುಮಾಡುತ್ತಾ ಇತ್ತು (ವ 6,7) ಆದರೆ ಹೊಸದು ಜೀವವನ್ನು ಉಂಟು ಮಾಡುತ್ತಾ ಇದೆ (ವ 6). ಹಳೆಯದನ್ನು ಕಲ್ಲಿನ ಮೇಲೆ ಬರೆಯಲಾಗಿತ್ತು (ವಿಮೋ 31:18) ಆದರೆ ಹೊಸದನ್ನು ಜನರ ಹೃದಯಗಳ ಮೇಲೆ ಬರೆಯಲಾಗಿದೆ (ವ 3). ಹಳೆಯದ್ದು ಸೇವೆಯಾಗಿದ್ದು ಮನುಷ್ಯರನ್ನು ಶಿಕ್ಷಿಸುತ್ತಾ ಇತ್ತು ಆದರೆ ಹೊಸದು ಅಪರಾಧ ನಿರ್ಣಯವನ್ನು ತೆಗೆದುಹಾಕುತ್ತದೆ ಮತ್ತು ಜನರನ್ನು ನೀತಿವಂತರನ್ನಾಗಿ ಮಾಡುತ್ತದೆ (ವ 9; ರೋಮಾ 3:19-24). ಹಳೆಯದು "ಮರೆಯಾಗುತ್ತಾ ಹೋಗುತ್ತಿದೆ" (ವ 11; ಇಬ್ರಿ 8:13), ಆದರೆ ಹೊಸದು ಶಾಶ್ವತವಾಗಿದೆ (ವ 11). ಕ್ಲುಪ್ತವಾಗಿ ಹೇಳುವದಾದರೆ, ಹಳೆಯ ಒಡಂಬಡಿಕೆಯು ಕೇವಲ ನಿಯಮಗಳು ಮತ್ತು ಆಜ್ಞೆಗಳಾಗಿದ್ದು ಜನರ ಹೃದಯಗಳನ್ನು ಬದಲಾಯಿಸಲು ಆಗದೆ ಇರುವಂಥದ್ದಾಗಿದೆ (ವಿಮೋ 19:5-6ರ ನೋಟ್ ನೋಡಿರಿ) ಆದರೆ ಹೊಸದು ಮಾನವರನ್ನು ಹೊಸಬರನ್ನಾಗಿ ಮಾಡುವ ದೇವರಾತ್ಮನ ಸೇವೆಯನ್ನು ನಡೆಸುತ್ತದೆ (ವ 3,6,8). ಹೀಗೆ ಹಳೆಯದು ಪ್ರಭಾವವನ್ನು ಹೊಂದಿತ್ತಾದರೂ, ಹೊಸದು ಅಧಿಕ ಪ್ರಭಾವವನ್ನು ಹೊಂದಿದೆ (ವ 8-11). ಕೊರಿಂಥದಲ್ಲಿದ್ದ ಕೆಲವರು ಕ್ರೈಸ್ತರಿಗೆ ನೀವು ಮೋಶೆಯ ಧರ್ಮಶಾಸ್ತ್ರವನ್ನು ಪಾಲನೆ ಮಾಡಬೇಕು ಎಂದು ಹೇಳುವ ಮೂಲಕ

ತೊಂದರೆಪಡಿಸುತ್ತಾ ಇದ್ದರು ಎಂಬದಾಗಿ ಅನ್ನಿಸುತ್ತದೆ. ಅಪೊ 15:1-2 ರೊಂದಿಗೆ ಹೋಲಿಸಿ ನೋಡಿರಿ. ಆದದರಿಂದ ಪೌಲನು ಅವನು ಬೋಧಿಸುವ ನಿಯಮಗಳಿಗಿಂತಲೂ ತಾನು ಬೋಧಿಸಿದ ಸುವಾರ್ತೆಯು ಎಷ್ಟು ದೊಡ್ಡದು ಎಂಬದನ್ನು ತೋರಿಸುತ್ತಾ ಇದ್ದಾನೆ. 4

**3:4** ಮೇಲೆ ವಿವರಿಸಲಾಗಿರುವ ಕೆಲಸದಲ್ಲಿ ದೇವರು ತನ್ನನ್ನು ಉಪಯೋಗ ಮಾಡುತ್ತಾ ಇದ್ದಾನೆ ಎಂಬ ದೃಢತೆ ಅವನಿಗಿತ್ತು. ಯೇಸು ಕ್ರಿಸ್ತನೇ ಅವನಿಗೆ ಈ ಭರವಸೆಯನ್ನು ಕೊಟ್ಟನು. 5

**3:5** 2:16 ನೋಡಿರಿ. ಒಬ್ಬನು ದೇವರಿಂದ ಕರೆಯಲ್ಪಟ್ಟು, ಬಲಗೊಂಡಿರದೆ ಹೋದರೆ ಮೇಲೆ ಹೇಳಲಾಗಿರುವ ಕೆಲವು ಅಸಾದ್ಯ ರೀತಿಯಲ್ಲಿ ಕಷ್ಟಕರವಾಗಿರುತ್ತದೆ. ಸೇವೆಯಲ್ಲಿ ಪೌಲನ ಆತ್ಮವಿಶ್ವಾಸವು ತಮ್ಮ ಸಾಮರ್ಥ್ಯಗಳಲ್ಲಿದ್ದ ವಿಶ್ವಾಸವಾಗಿರಲಿಲ್ಲ. ತಾನು ಮಾಡಿದ ಕಾರ್ಯಗಳನ್ನು ಮಾಡಲು ತನ್ನನ್ನು ದೇವರೇ ಬಲಪಡಿಸಿದ್ದಾನೆ ಎಂಬದನ್ನು ಅವನು ಬಲ್ಲವನಾಗಿದ್ದನು (1 ಕೊರಿಂಥ 15:10; ಕೊಲೊ 1:29. ಯೋಹಾನ 15:5 ನೋಡಿರಿ). 6

**3:6** ದೇವರು ತನ್ನ ಕೆಲಸಕ್ಕೆ ಯಾರನ್ನೇ ಕಳುಹಿಸಿದರೂ ಅವನಿಗೆ ದೇವರ ಕೆಲಸವನ್ನು ಮಾಡಲು ದೇವರೇ ನನಗೆ ಬಲವನ್ನು ಕೊಡುತ್ತಾನೆ ಎಂಬ ಆತ್ಮವಿಶ್ವಾಸ ಇರಬೇಕು. ಹೊಸ ಒಡಂಬಡಿಕೆಯ ವಿಷಯದಲ್ಲಿ ಮತ್ತಾಯ 26:28; ಯೆರೆ 31:31-34; ಇಬ್ರಿ 8:6-13ರ ನೋಟ್ಸ್ ನೋಡಿರಿ. ಇಲ್ಲಿ "ಪತ್ರ" ಎಂಬದಾಗಿ ಭಾಷಾಂತರ ಮಾಡಲಾಗಿರುವ ಗ್ರೀಕ್ ಪದ 2,3 ವಚನದಲ್ಲಿರುವ ಪದದ ಅರ್ಥವನ್ನು ಕೊಡುವದಿಲ್ಲ, ಇದರ ಅರ್ಥ ಸಂಪೂರ್ಣವಾಗಿ ಭಿನ್ನವಾಗಿದೆ. ಇಲ್ಲಿ ಪೌಲನು "ಪತ್ರ" ಎಂದರೆ ಹಳೆಯ ಒಡಂಬಡಿಕೆಯ ನಿಯಮಗಳು, ಆದೇಶಗಳು ಮತ್ತು ಕಟ್ಟಳೆಗಳನ್ನು ವಿವರಿಸುತ್ತಾ ಇದ್ದಾನೆ. ಅದರಿಂದ ಮರಣ ಉಂಟಾಗುತ್ತಾ ಇತ್ತು ಯಾಕಂದರೆ ಯಾರೂ ಅದನ್ನು ಸರಿಯಾಗಿ ಪಾಲನೆ ಮಾಡುತ್ತಾ ಇರಲಿಲ್ಲ, ಆದ್ದರಿಂದ ನ್ಯಾಯಯುತವಾಗಿಯೇ ಅದು ಜನರನ್ನು ಮರಣಕ್ಕೆ ಗುರಿಪಡಿಸುತ್ತಾ ಇತ್ತು (ರೋಮಾ 7:9-11; ಗಲಾ 3:10. ಹಾಗೆಯೇ ರೋಮಾ 3:19-20; 4:15; 5:20; 8:3 ನೋಡಿರಿ). ಆದರೆ ಹೊಸ ಒಡಂಬಡಿಕೆಯು ದೇವರಾತ್ಮನ ಮೂಲಕ ಜೀವವನ್ನು ಉಂಟುಮಾಡುತ್ತದೆ (ರೋಮಾ 7:6; 8:2-4,11; ಯೋಹಾನ 3:5-8). 7

**3:7** *"ಮೋಶೆಯ ಮುಖ"*– ವಿಮೋ 34:29-35 ನೋಡಿರಿ. 12

**3:12** ನಿರೀಕ್ಷೆ" – ರೋಮಾ 5:2-5; 8:23-25. ಈ ನಿರೀಕ್ಷೆ, ಭವಿಷ್ಯದಲ್ಲಿ ನಡೆಯುವ ಪ್ರಭಾವವುಳ್ಳ ಕಾರ್ಯಗಳ ಎದುರುನೋಡುವಿಕೆ ಪೌಲನನ್ನು ವರ್ತಮಾನಕಾಲದಲ್ಲಿ ಧೈರ್ಯವುಳ್ಳವನನ್ನಾಗಿ ಮಾಡಿದವು. **13**

**3:13** ವಿಮೋ 34:29-35. ಪ್ರಭಾವದ ದೃಶ್ಯವು ಇಸ್ರಾಯೇಲ್ಯರನ್ನು ಭಯಭೀತರನ್ನಾಗಿ ಮಾಡಿತು. ಹೊಸ ಒಡಂಬಡಿಕೆಯು ಭಯವನ್ನಲ್ಲ ಬದಲಾಗಿ ನಿರೀಕ್ಷೆ, ಧೈರ್ಯ ಹಾಗೂ ಸಂತೋಷವನ್ನು ಉಂಟುಮಾಡುತ್ತದೆ. **14-16**

**3:14-16** ಮೋಶೆ ತನ್ನ ಮುಖದ ಮೇಲೆ ಹಾಕಿಕೊಂಡ ಮುಸುಕಿನಿಂದ ಕೆಲವು ಆತ್ಮೀಕ ಪಾಠಗಳನ್ನು ಆತನು ಈಗ ತಿಳಿಸುತ್ತಾ ಇದ್ದಾನೆ. 14ನೇ ವಚನದಲ್ಲಿ ಆತನು ಇನ್ನೂ ಹಳೆಯ ಒಡಂಬಡಿಕೆಯ ಪ್ರಕಾರ ಜೀವಿಸುತ್ತಿರುವ ಯೆಹೂದ್ಯರು ಮತ್ತು ಯೆಹೂದ್ಯ ಧರ್ಮಕ್ಕೆ ಸೇರಿಕೊಂಡವರ ಬಗ್ಗೆ ಮಾತನಾಡುತ್ತಾ ಇದ್ದಾನೆ. ಅವರ ಮನಸ್ಸುಗಳು ಮಂಕಾಗಿರುತ್ತವೆ, ಅವರ ಹೃದಯಗಳ ಮೇಲೆ ಮುಸುಕು ಇರುತ್ತದೆ (ವ 15). ಅಂದರೆ ಹಳೆಯ ಒಡಂಬಡಿಕೆಯಲ್ಲಿ ಅವರು ಏನು ಓದುತ್ತಾರೋ ಅದರ ಬಗ್ಗೆ ಅವರಿಗೆ ಸ್ಪಷ್ಟವಾದ ತಿಳುವಳಿಕೆ ಇಲ್ಲ ಎಂಬದಾಗಿದೆ. 4:3-4 ನೋಡಿರಿ. ಯೇಸು ಕ್ರಿಸ್ತನು ಯೋಹಾನ 5:39-40,46,47 ರಲ್ಲಿ ಯೆಹೂದ್ಯರಿಗೆ ಹೇಳಿರುವ ಮಾತುಗಳನ್ನು ಹೋಲಿಸಿ ನೋಡಿರಿ. ಯೇಸು ಕ್ರಿಸ್ತನು ಮಾತ್ರವೇ ಅಂಧಕಾರದ "ಮುಸುಕನ್ನು" ಮತ್ತು ತಪ್ಪು ತಿಳುವಳಿಕೆಗಳನ್ನು ತೆಗೆದುಹಾಕುವನು ಹಾಗೂ ಜನರು ದೇವರ ಕುರಿತಾದ ಸತ್ಯವನ್ನು ಹಾಗೂ ದೇವರನ್ನು ತಿಳಿದುಕೊಳ್ಳುವಂತೆ ಮಾಡುವನು (ವ 14,16; ಮತ್ತಾಯ 11:27; ಯೋಹಾನ 8:12,31,32; 14:6). **17**

**3:17** ತಂದೆ ಮತ್ತು ಕುಮಾರನು ಒಬ್ಬನೇ ಆಗಿರುವ ಪ್ರಕಾರವೇ ಕರ್ತನಾದ ಯೇಸು ಕ್ರಿಸ್ತನು ಮತ್ತು ದೇವರಾತ್ಮನು ಒಂದೇ ಆಗಿದ್ದಾರೆ (ಯೋಹಾನ 10:30; 14:9). ದೇವರಾತ್ಮನನ್ನು ರೋಮಾ 8:9 ರಲ್ಲಿ ಕ್ರಿಸ್ತನ ಆತ್ಮ ಎಂದು ಕರೆಯಲಾಗಿದೆ. ಮತ್ತಾಯ 3:16-17 ರಲ್ಲಿ ತ್ರಯೇಕತ್ವದ ಕುರಿತಾದ ನೋಟ್ಸ್ ನೋಡಿರಿ.

*"ಬಿಡುಗಡೆ"*– ದೇವರಾತ್ಮನು ಅನೇಕ ರೀತಿಯ ಬಿಡುಗಡೆಗಳನ್ನು ಕೊಡುತ್ತಾನೆ: ಧರ್ಮಶಾಸ್ತ್ರದಿಂದ (ರೋಮಾ 7:4,6; ಗಲಾ 5:18), ಹೆದರಿಕೆಯಿಂದ (ರೋಮಾ 8:15),

ಪಾಪದಿಂದ (ರೋಮಾ 6:14,18). ಯೋಹಾನ 8:36 ರೊಂದಿಗೆ ಹೋಲಿಸಿ ನೋಡಿರಿ. **18**

**3:18** *"ದೃಷ್ಟಿಸುವದು"*– ವಿಶ್ವಾಸಿಗಳೆಲ್ಲರೂ ಈಗ ಕ್ರಿಸ್ತನಲ್ಲಿ ದೇವರ ಪ್ರಭಾವವನ್ನು ನೋಡುವವರಾಗಿದ್ದಾರೆ (4:6). ಅಂದರೆ ಅವರಿಗೆ ಅದರ ಕುರಿತಾದ ಆತ್ಮೀಕ ತಿಳುವಳಿಕೆ ಇರುತ್ತದೆ, ಅದರ ವಿಷಯದಲ್ಲಿ ಮನೋನೇತ್ರಗಳು ತೆರೆಯಲ್ಪಡುತ್ತವೆ. ಆದರೆ ಅವೆಲ್ಲವನ್ನು ಗುಣಮಟ್ಟವಲ್ಲದ ದರ್ಪಣದಲ್ಲಿ ನೋಡಿದಂತೆ ಇರುತ್ತದೆ. 1 ಕೊರಿಂಥ 13:12 ರೊಂದಿಗೆ ಹೋಲಿಸಿ ನೋಡಿರಿ. ಈಗ ಕೇವಲ ಪ್ರತಿಬಿಂಬ ಮಾತ್ರವೇ ಕಾಣಿಸುತ್ತದೆ, ಆದರೆ ವಿಶ್ವಾಸಿಗಳು ಯೇಸು ಕ್ರಿಸ್ತನನ್ನು ಮುಖಾಮುಖಿಯಾಗಿ ನೋಡುವಾಗ ಮಾತ್ರವೇ ಇಡೀ ವಾಸ್ತವ ಕಾಣಿಸುತ್ತದೆ. ಆದರೆ ಈಗ ವಿಶ್ವಾಸಿಗಳೆಲ್ಲರೂ ಬದಲಾಗಿದ್ದಾರೆ. "ಸಾರೂಪ್ಯಕ್ಕೆ ಬದಲಾಗುವದು" –ಎಂಬದಾಗಿ ಭಾಷಾಂತರ ಮಾಡಲಾಗಿರುವ ಗ್ರೀಕ್ ಪದವನ್ನು ನಾವು ಹೊಸ ಒಡಂಬಡಿಕೆಯಲ್ಲಿ ಕೇವಲ ನಾಲ್ಕು ಸಲ ಮಾತ್ರವೇ ನೋಡಬಹುದಾಗಿದೆ – ಇಲ್ಲಿ, ಮತ್ತಾಯ 17:2; ಮಾರ್ಕ 9:2 ಮತ್ತು ರೋಮಾ 12:2 ರಲ್ಲಿ. ಇದು ಹೊರಗೆ ಕಾಣಿಸುವ ಆಂತರ್ಯದ ಬದಲಾವಣೆಯನ್ನು ಸೂಚಿಸುತ್ತದೆ. ಯೇಸು ಕ್ರಿಸ್ತನ ವಿಷಯದಲ್ಲಿ ಆತನು ಆಂತರ್ಯದಲ್ಲಿ ಏನಾಗಿದ್ದನೋ ಅದರ ಬಲಾವಣೆಯು ಬಾಹ್ಯದಲ್ಲಿ ವ್ಯಕ್ತವಾಯಿತು. ಆದರೆ ವಿಶ್ವಾಸಿಗಳ ವಿಷಯದಲ್ಲಿ ಇದು ಆಂತರ್ಯ ಹಾಗೂ ಬಾಹ್ಯ ಎರಡು ಆಗಿದೆ, ಮೊದಲು ಆಂತರ್ಯ ನಂತರ ಬಾಹ್ಯ. ಮತ್ತು ಇದು ಕ್ರಮೇಣವಾಗಿ ಸಾಗುವ ವಿಧಾನವಾಗಿದೆ – "ಪ್ರಭಾವದಿಂದ ಅಧಿಕ ಪ್ರಭಾವ." ಕೀರ್ತನೆ 84:7; ಜ್ಞಾನೋ 4:18 ರೊಂದಿಗೆ ಹೋಲಿಸಿ ನೋಡಿರಿ. ಇಲ್ಲಿ ಮತ್ತು ಈಗ ದೇವರು ಅವರನ್ನು ಹೆಚ್ಚೆಚ್ಚಾಗಿ ಕ್ರಿಸ್ತನ ಹಾಗೆ ಮಾಡುತ್ತಾ ಇದ್ದಾನೆ. ಅಂತಿಮವಾಗಿ, ಆತನ ಬರೋಣದ ಸಮಯದಲ್ಲಿ, ಅವರು ಸಂಪೂರ್ಣವಾಗಿ ಆತನಂತಾಗುತ್ತಾರೆ (ರೋಮಾ 8:29; 1 ಯೋಹಾನ 3:1-2). ವಿಧಾನವು ಈಗ ಬಹಳ ನಿಧಾನವಾಗಿರಬಹುದು, ಹೀಗಾಗುವದೆಂದು ನಂಬಲು ವಿಶ್ವಾಸಿಗೆ ಬಹಳ ಕಷ್ಟವಾಗುತ್ತಾ ಇರಬಹುದು. ಆದರೆ ಇದು, ದೇವರ ನಿಜವಾದ ಮಕ್ಕಳೆಲ್ಲರ ಜೀವಿತದಲ್ಲಿಯೂ ನೆರವೇರುವದು.

# 4 1

**4:1** ಹೊಸ ಒಡಂಬಡಿಕೆಯಲ್ಲಿರುವ ದೇವರ ಸೇವಕರು ಪೂರ್ಣ ಪ್ರಭಾವದ ಸೇವೆಯನ್ನು

ಹೊಂದಿದ್ದಾರೆ, ಅದು ಮೋಶೆಯ ಸೇವೆಗಿಂತಲೂ ದೊಡ್ಡದಾಗಿದೆ (3:9). ಅವರು ಅಪರಾಧಿಗಳೆಂದು ನಿರ್ಣಯಿಸುವ ಧರ್ಮಶಾಸ್ತ್ರದ ಸೇವಕರಲ್ಲ ಬದಲಾಗಿ ಕಾಪಾಡುವ ದೇವರ ಕೃಪೆಯ ಸೇವಕರಾಗಿದ್ದಾರೆ. ಅವರು ವೈಯಕ್ತಿಕ ಸಾಧನೆಗಳ ನಿಮಿತ್ತವಲ್ಲ ಬದಲಾಗಿ ದೇವರ ಕರುಣೆಯ ನಿಮಿತ್ತ ಈ ಸೇವೆಯನ್ನು ಹೊಂದಿದ್ದಾರೆ (1 ಕೊರಿಂಥ 15:10; 1 ತಿಮೊ 1:13-14). ಆದದರಿಂದ ಪೌಲನು ಹೇಳುವದೇನೆಂದರೆ, ನನಗೆದುರಾದ ಎಲ್ಲಾ ಸಮಸ್ಯೆಗಳು, ಅಪಾಯಗಳು ಮತ್ತು ಸಂಕಟಗಳ ನಡುವೆಯೂ ನಾವು ನಿರಾಸೆಗೊಳ್ಳಲು ಹಾಗೂ ಸೋಗು ಹೋಗಲು ನಿರಾಕರಿಸುತ್ತೇನೆ (ವ 16. 1 ಕೊರಿಂಥ 15:58; ಲೂಕ 18:1 ರೊಂದಿಗೆ ಹೋಲಿಸಿ ನೋಡಿರಿ). 2

**4:2** 1:12; 2:17 ನೋಡಿರಿ. ಪೌಲನು ತನ್ನ ನಿಷ್ಕಪಟತನದ ಬಗ್ಗೆ ಹೇಳುತ್ತಲೇ ಇದ್ದಾನೆ ಯಾಕಂದರೆ ಕೊರಿಂಥದಲ್ಲಿದ್ದ ಕೆಲವರು ಅದನ್ನು ಅಲ್ಲಗಳೆಯುತ್ತಾ ಇದ್ದರು ಮತ್ತು ಒಂದುವೇಳೆ ಅವರೇನಾದರೂ ತನ್ನ ಅಪೊಸ್ತಲತನದ ಮೇಲೆ ನಂಬಿಕೆಯನ್ನು ಕಳೆದುಕೊಂಡರೆ ಸಭೆಯಲ್ಲಿ ದೊಡ್ಡ ಸಮಸ್ಯೆಗಳು ಎದುರಾಗುವವು ಎಂಬದನ್ನು ಅವನು ಬಲ್ಲವನಾಗಿದ್ದನು. 3

**4:3** 3:14-16 ನೋಡಿರಿ. ಇಲ್ಲಿ ಪೌಲನು ಅಪನಂಬಿಕೆಯುಳ್ಳವರಾಗಿರುವ ಯೆಹೂದ್ಯರ ಬಗ್ಗೆ ಮಾತ್ರವಲ್ಲ ಬದಲಾಗಿ ಪ್ರತಿಯೊಂದು ದೇಶದಲ್ಲಿರುವ ಅವಿಶ್ವಾಸಿಗಳ ಬಗ್ಗೆ ಮಾತನಾಡುತ್ತಾ ಇದ್ದಾನೆ. 4

**4:4** *“ಈ ಪ್ರಪಂಚದ ದೇವರು”*– ಅಂದರೆ ಸೈತಾನನು. ಯೋಹಾನ 12:31; 16:11 ರೊಂದಿಗೆ ಹೋಲಿಸಿ ನೋಡಿರಿ. ಅವನನ್ನು “ದೇವರು” –ಎಂದು ಕರೆಯಲಾಗಿದೆ ಯಾಕಂದರೆ ಅವನು ಆರಾಧನೆಯನ್ನು ಬಯಸುತ್ತಾನೆ ಮತ್ತು ಅದನ್ನು ಮಾಡಿಸಿಕೊಳ್ಳುತ್ತಾನೆ ಹಾಗೂ ಈ ಪ್ರಪಂಚದ ಕತ್ತಲೆಯ ರಂಗದಲ್ಲಿ ಅವನು ಆಳ್ವಿಕೆ ಮಾಡುವವನಾಗಿದ್ದಾನೆ (ಎಫೆ 6:12). 1 ಪೂರ್ವ 21:1; ಮತ್ತಾಯ 4:1-10; ಯೋಹಾನ 8:44 ರಲ್ಲಿ ಸೈತಾನನ ಕುರಿತಾದ ನೋಟ್ಸ್ ನೋಡಿರಿ).

*“ಮನಸ್ಸನ್ನು ಮಂಕು ಮಾಡಿದ್ದಾನೆ”*– ಅಂದರೆ ಸೈತಾನನು ಜನರು ದೇವರ ಸತ್ಯಗಳನ್ನು ಅರ್ಥಮಾಡಿಕೊಳ್ಳದಂತೆ ಮಾಡುತ್ತಾನೆ ಮತ್ತು ಅವರು ಆತ್ಮೀಕ ದೃಷ್ಟಿಯಿಲ್ಲದವರಾಗುವಂತೆ ಮಾಡಲು ಪ್ರಯತ್ನಿಸುತ್ತಾನೆ. ಆದರೆ ಅವನು ಈ ಕಾರ್ಯವನ್ನು ಅವರ ಸಹಕಾರದಿಂದಲೇ ಮಾಡುತ್ತಾನೆ (ಯೋಹಾನ 3:19-20; 2 ಥೆಸ

2:10-11).

*“ಯೇಸು ಕ್ರಿಸ್ತನ ಪ್ರಭಾವವನ್ನು ತೋರುವ ಸುವಾರ್ತೆ”*– ಸುವಾರ್ತೆಯು ದೇವರ ಮತ್ತು ಆತನ ಅಭಿಷಿಕ್ತನಾಗಿರುವ ಕರ್ತನಾದ ಯೇಸು ಕ್ರಿಸ್ತನ ಪ್ರಭಾವವನ್ನು ಪ್ರಕಟಪಡಿಸುತ್ತದೆ (ಯೋಹಾನ 12:23).

*“ದೇವರ ಪ್ರತಿರೂಪ”*– ಇಬ್ರಿ 1:3; ಫಿಲಿಪ್ಪಿ 2:6; ಕೊಲೊ 1:15; 2:9; ಯೋಹಾನ 1:14,18; 12:45; 14:9. ಆತನು ಕಣ್ಣಿಗೆ ಕಾಣದಿರುವ ಆಕಾರದಲ್ಲಿರುವ ದೇವರಾಗಿದ್ದಾನೆ.

*“ಅವರ ಮೇಲೆ ಪ್ರಕಾಶವು ಉದಯವಾಗಬಾರದೆಂದು”*– ಅಥವಾ “ಅವರು ನೋಡಬಾರದೆಂದು” ಎಂಬದಾಗಿಯೂ ಭಾಷಾಂತರ ಮಾಡಬಹುದು. 5

**4:5** ಈ ಪತ್ರಿಕೆಯಲ್ಲಿ ಪೌಲನು ತನ್ನ ಅಪೊಸ್ತಲತನಕ್ಕೆ ವಿರುದ್ಧವಾಗಿ ದಾಳಿಗಳನ್ನು ಎದುರಿಸಬೇಕಾಗಿದೆ, ಆದ್ದರಿಂದಲೇ ಅವನು ತನ್ನ ಬಗ್ಗೆ ಹೆಚ್ಚಾಗಿ ಮಾತನಾಡಿದ್ದಾನೆ. ಆದರೆ ಅವೆಲ್ಲವೂ ಅವರ ನಿಮಿತ್ತವಾಗಿದೆಯೇ ಹೊರತು ಅವನ ನಿಮಿತ್ತವಲ್ಲ (1:12-24 ರ ನೋಟ್ಸ್ ನೋಡಿರಿ). ನಾನೇ ರಕ್ಷಣೆಗೆ ಮಾರ್ಗ ಎಂದು ಅವನು ತನ್ನ ಕುರಿತು ಬೋಧನೆ ಮಾಡಲಿಲ್ಲ. ಸುವಾರ್ತೆಯನ್ನು ಅವನು ಕಂಡು ಹಿಡಿದಿರಲಿಲ್ಲ. ತಾನು ಪ್ರಸಿದ್ಧನು ಎಂಬದಾಗಿ ಅವನು ಅಂದುಕೊಂಡಿರಲಿಲ್ಲ ಬದಲಾಗಿ ಕ್ರಿಸ್ತನ ನಿಮಿತ್ತ ಇತರರ ಸೇವಕರು ಎಂಬದಾಗಿ ಅಂದುಕೊಂಡಿದ್ದನು (1 ಕೊರಿಂಥ 3:5-7; 9:19-23). ಅವನು ತನಗಿಂತಲೂ ಪ್ರಸಿದ್ಧನಾಗಿರುವ ಯೇಸು ಕ್ರಿಸ್ತನ ಬಗ್ಗೆ ಬೋಧಿಸುವವನಾಗಿದ್ದನು. ಆತನು ಭೂಪರಲೋಕಗಳ ಕರ್ತನು ಎಂಬದಾಗಿ ಅವನು ಪ್ರಕಟಿಸಿದ್ದಾನೆ. ಲೂಕ 2:11; ರೋಮಾ 10:9; 1 ಕೊರಿಂಥ 8:6; 12:3; ಅಪೊ 2:36; ಫಿಲಿಪ್ಪಿ 2:10-11 ರೊಂದಿಗೆ ಹೋಲಿಸಿ ನೋಡಿರಿ. 6

**4:6** ಆದಿಯಲ್ಲಿ ದೇವರು ಸೃಷ್ಟಿಸಿದ ಬೆಳಕನ್ನು (ಆದಿ 1:1-3 ನೋಡಿರಿ) ಕ್ರಿಸ್ತನಲ್ಲಿರುವ ವಿಶ್ವಾಸಿಗಳ ಹೃದಯಗಳಲ್ಲಿ ದೇವರು ಬೆಳಗುವಂತೆ ಮಾಡುವ ಬೆಳಕಿನೊಂದಿಗೆ ಹೋಲಿಸಿದ್ದಾನೆ. ದೇವರು ಅವರ ಮನೋನೇತ್ರಗಳನ್ನು ತೆರೆಯುತ್ತಾನೆ ಆದ್ದರಿಂದ ಅವರು ಸತ್ಯದ ಜ್ಞಾನವನ್ನು ಹೊಂದುತ್ತಾರೆ. ಇದಕ್ಕೂ ಮೊದಲು ಅವರ ಮನಸ್ಸುಗಳು, ಉಳಿದವರ ಮನಸ್ಸುಗಳ ಹಾಗೆ, ಕತ್ತಲೆಯಲ್ಲಿ ಗೊಂದಲದಿಂದ ತುಂಬಿಕೊಂಡಿತ್ತು. ಎಫೆ 1:18; ಅಪೊ

26:18; ಯೋಹಾನ 8:12; ಮತ್ತಾಯ 6:22-23; 11:27; 16:17; 1 ಕೊರಿಂಥ 2:11-16 ರೊಂದಿಗೆ ಹೋಲಿಸಿ ನೋಡಿರಿ. ದೇವರು ಕೊಡುವ ದೇವಪ್ರಭಾವವೆಂಬ ಪ್ರಕಾಶ ಏನು ಎಂಬದನ್ನು ನೋಡಿಕೊಳ್ಳೋಣ. ಅವರು ದೇವರೆಂದು ತಿಳಿದುಕೊಳ್ಳುವ ಮಾನವರ ತಪ್ಪಾದ ಬೋಧನೆಗಳಿಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ಆ ಬೋಧನೆಯು ಸೈತಾನನು ಸೃಷ್ಟಿಸಿರುವ ಘೋರವಾದ ಕಲ್ಪನೆಯಾಗಿದೆ. ಮಾನವರು ದೇವರಲ್ಲ, ದೇವರಾಗಲು ಆಗುವದೂ ಇಲ್ಲ, ಒಂದುವೇಳೆ ನಾವೇ ದೇವರು ಎಂದು ಮಾನವರೇನಾದರೂ ಅಂದುಕೊಂಡರೆ ಅವರು ಘೋರವಾದ ಗುಂಡಿಯೊಳಗೆ ಬೀಳುವವರಾಗಿದ್ದಾರೆ. ನಿಜವಾದ ದೇವಪ್ರಭಾವವೆಂಬ ಪ್ರಕಾಶದಲ್ಲಿ ದೇವರ ಪ್ರಭಾವವು ಯೇಸು ಕ್ರಿಸ್ತನಲ್ಲಿದೆ ನಮ್ಮಲ್ಲಿ ಇಲ್ಲ ಎಂಬದನ್ನು ಜನರನ್ನು ಅರ್ಥಮಾಡಿಕೊಳ್ಳುವಂತೆ ದೇವರು ಅವರನ್ನು ಬಲಪಡಿಸುತ್ತಾನೆ (ಇಬ್ರಿ 1:3). ಪೌಲನಿಗೆ ದಮಸ್ಕದ ದಾರಿಯಲ್ಲಿ ದೇವಪ್ರಭಾವವೆಂಬ ಪ್ರಕಾಶದ ಅನುಭವವಾಯಿತು (ಅಪೊ 9:3-9). ನಮ್ಮಲ್ಲಿ ಬಹುತೇಕರಿಗೆ ತಕ್ಷಣದಲ್ಲಿ ಅತ್ಯಂತ ನಾಟಕೀಯವಾದ ಅನುಭವಗಳು ಆಗುವದಿಲ್ಲ. ಆದರೆ ಪ್ರತಿಯೊಬ್ಬ ವಿಶ್ವಾಸಿಯು ಆತ್ಮೀಕ ದೃಷ್ಟಿ ಮತ್ತು ಬೆಳಕನ್ನು ಹೊಂದಿದ್ದಾನೆ ಹಾಗೂ ಬೆಳಕಿನ ಮಗುವಾಗಿದ್ದಾನೆ (ಯೋಹಾನ 12:36; ಎಫೆ 5:8; 1 ಥೆಸ 5:5).

*"ಮುಖದಲ್ಲಿ"*– 3:13 ರೊಂದಿಗೆ ಹೋಲಿಸಿ ನೋಡಿರಿ. ಹಳೆಯ ಒಡಂಬಡಿಕೆಯ ಪ್ರಭಾವವು, ಮೋಶೆಯ ಮುಖದಲ್ಲಿ ಸಂಕೇತವಾಗಿ ಪ್ರಕಾಶಿಸುತ್ತಾ ಇತ್ತು, ಆದರೆ ಅದು ಶಾಶ್ವತವಾಗಿರದೆ ತಾತ್ಕಾಲಿಕವಾಗಿತ್ತು. ಹೊಸ ಒಡಂಬಡಿಕೆಯ ಸ್ಥಾಪಕನಾದ ಯೇಸು ಕ್ರಿಸ್ತನ ಮುಖದಲ್ಲಿರುವ ಪ್ರಭಾವವು, ಎಂದಿಗೂ ಗತಿಸುವದಿಲ್ಲ. 7

**4:7** *"ನಿಕ್ಷೇಪ"*– ಯೇಸು ಕ್ರಿಸ್ತನಲ್ಲಿರುವ ದೇವರ ಪ್ರಭಾವದ ತಿಳುವಳಿಕೆಯು ಅತ್ಯಂತ ದೊಡ್ಡ ನಿಕ್ಷೇಪವಾಗಿದೆ. ಕೀರ್ತನೆ 19:10; 119:72,127; ಜ್ಞಾನೋ 2:1-5 ರೊಂದಿಗೆ ಹೋಲಿಸಿ ನೋಡಿರಿ. "ನಿಕ್ಷೇಪ" –ಎಂದು ಹೇಳುವ ಮೂಲಕ ಪೌಲನು ತನಗೆ ಒಪ್ಪಿಸಲಾಗಿರುವ ಸುವಾರ್ತಾ ಸೇವೆಯ ಬಗ್ಗೆ ಮಾತನಾಡಿದ್ದಾನೆ. ಅವನ ದೃಷ್ಟಿಯಲ್ಲಿ ಇದುವೂ ಪ್ರಭಾವವುಳ್ಳ ವಿಷಯವಾಗಿತ್ತು (ಎಫೆ 3:8).

*"ಮಣ್ಣಿನ ಘಟಗಳು"*– ಅವನು ಮಾನವನ ದುರ್ಬಲ ಸ್ವಭಾವ, ದೇಹ, ಪ್ರಾಣ, ಹೃದಯ ಮತ್ತು ಮನಸ್ಸುಗಳನ್ನು ಬಗ್ಗೆ ಮಾತನಾಡುತ್ತಾ ಇದ್ದಾನೆ. ಇವೆಲ್ಲವೂ ಮಣ್ಣಿನಿಂದ

ಮಾಡಿದ ಮಡಿಕೆಗೆ ಸಮಾನವಾಗಿವೆ. ನಿಕ್ಷೇಪವು ನಿಜವಾಗಿಯೂ ದೊಡ್ಡದಾಗಿದೆ, ಆದರೆ ಅದಿರುವ ಮಡಿಕೆಗಳು ದುರ್ಬಲವಾಗಿವೆ ಮತ್ತು ಹೊಲಿಸಲು ಆಗದಂಥ ಆಕರ್ಷಣೆ ಇಲ್ಲದವುಗಳಾಗಿವೆ. ಈ ನಿಕ್ಷೇಪವನ್ನು ಇತರರಿಗೆ ಕೊಡುವ ಅಧಿಕಾರ, ಹೊಸ ಒಡಂಬಡಿಕೆಯ ಸಮರ್ಥ ಸೇವಕರಾಗುವದು (3:6), ಸಂಪೂರ್ಣವಾಗಿ ದೇವರ ಶಕ್ತಿಯಾಗಿದೆ ಎಂಬದನ್ನು ಇದು ತಿಳಿಸುತ್ತದೆ. ಅಪೊ 1:4-5,8 ರೊಂದಿಗೆ ಹೋಲಿಸಿ ನೋಡಿರಿ. **8-12**

**4:8-12** ಈ ವಚನಗಳಲ್ಲಿ ಪೌಲನು "ಮಣ್ಣಿನ ಘಟಗಳ" ದುರ್ಬಲತೆಯನ್ನು ತೋರಿಸುತ್ತಾ ಇದ್ದಾನೆ – "ಇಕ್ಕಟ್ಟು", "ಸಂಕಟ", "ಹಿಂಸೆ", "ದೆಸೆಗೆಡುವಿಕೆ" ಮತ್ತು "ಮರಣ". ಆದರೆ ದೇವರ ಕಾರ್ಯವು ಅವರಲ್ಲಿ ನಡೆಯುತ್ತಾ ಇರುವದನ್ನು ಸಹ ಆತನು ತಿಳಿಸಿದ್ದಾನೆ – "ಕೈಬಿಡಲ್ಪಡುವದಿಲ್ಲ", "ಪ್ರಾಣ ನಷ್ಟಪಡುವದಿಲ್ಲ". ಒಂದುವೇಳೆ ದೇವರ ಶಕ್ತಿಯು "ಮಣ್ಣಿನ ಘಟಗಳಲ್ಲಿ" ಕಾರ್ಯ ಮಾಡದೆ ಇರುವದಾದರೆ, ಅವರಿಂದ ಏನೂ ಸಾಧನೆ ಮಾಡಲು ಆಗುವದಿಲ್ಲ ಮತ್ತು ಅವರು ಕೂಡಲೇ ನಾಶವಾಗುತ್ತಾರೆ. **11**

**4:11** *"ಮರಣ"*– 1:8-9 ನೋಡಿರಿ. ಕರ್ತನಾದ ಯೇಸು ಕ್ರಿಸ್ತನು ಸಹ ಪೌಲನಿಗೆ ಎದುರಾದ ಸಂಕಟಗಳು ಮತ್ತು ಹಿಂಸೆಗಳನ್ನು ಎದುರಿಸಿದನು. ಪೌಲನು "ಯೇಸು ಕ್ರಿಸ್ತನ ನಿಮಿತ್ತ" (ವ 11) ಎಲ್ಲವನ್ನೂ ಎದುರಿಸಿದನು – ನಿಜವಾಗಿ ಹೇಳುವದಾದರೆ, "ಕರ್ತನಾದ ಯೇಸು ಕ್ರಿಸ್ತನು ಅವನೊಳಗೆ ಸಾಯುವವನಾಗಿದ್ದನು." –ಇದರ ಅರ್ಥ ಪೌಲನಿಗೆ ಸತತವಾಗಿ ಅಪಾಯಗಳು ಹಾಗೂ ಕಷ್ಟಗಳು ಎದುರಾಗುತ್ತಾ ಇದ್ದವು (11:23-27), ಅವನು ತನ್ನನ್ನು ನಿರಾಕರಿಸಿಕೊಂಡಿದ್ದನು (ಮತ್ತಾಯ 10:38-39; ಲೂಕ 9:23 ರೊಂದಿಗೆ ಹೋಲಿಸಿ ನೋಡಿರಿ) ಮತ್ತು ಯೇಸು ಕ್ರಿಸ್ತನಿಗಾಗಿ ಮಾತ್ರವೇ ಜೀವಿಸುತ್ತಾ ಇದ್ದನು (ಗಲಾ 2:20). ವೈಯಕ್ತಿಕ ಯೋಜನೆಗಳು ಮತ್ತು ಆಕಾಂಕ್ಷೆಗಳು, ಅವನ ಸ್ವಂತ ಇಷ್ಟಗಳು ಮತ್ತು ಇಷ್ಟವಿಲ್ಲದವುಗಳು, ಸಂತೈಸುವಿಕೆಗಳು, ಸಂತೋಷಗಳು – ಇವುಗಳಲ್ಲಿ ಯಾವುದಕ್ಕೂ ಅವನ ಹೃದಯದಲ್ಲಿ ಸ್ಥಳವಿರಲಿಲ್ಲ, ಇವುಗಳಿಗೆ ಅವನ ಗುರುವಿನ ಹೃದಯದಲ್ಲಿಯೂ ಸ್ಥಳವಿರಲಿಲ್ಲ. ಇದುವೇ ಜೀವನದ, ಆತ್ಮೀಕ ಜೀವನದ ಮಾರ್ಗ ಎಂದು ಪೌಲನು ತಿಳಿದುಕೊಂಡನು, ಇದಕ್ಕಾಗಿಯೇ ಯೇಸು ಕ್ರಿಸ್ತನು ಅವನ ಜೀವಿತದೊಳಗೆ ಕಾರ್ಯಮಾಡುತ್ತಾ ಇದ್ದನು (ವ 11). ಕೊರಿಂಥದಲ್ಲಿದ್ದ ವಿಶ್ವಾಸಿಗಳ ಹಾಗೆ ಆತ್ಮೀಕ ಜೀವಿತವು ಇತರರಿಗೂ

ದೊರೆಯುತ್ತದೆ ಎಂಬ ಅರ್ಥವನ್ನು ಇದು ಕೊಡುತ್ತದೆ (ವ 12). ಇಲ್ಲಿ ನಿಜವಾದ ತತ್ವವನ್ನು ನೋಡಬಹುದು – ಇತರರ ಆತ್ಮೀಕ ಜೀವಿತಗಳಿಗೆ ಸಾಧನರಾಗಿರುವವರು ತಮ್ಮ ಸ್ವಂತ ಮರಣವನ್ನು ಅನುಭವಿಸುವವರಾಗಿರಬೇಕು. ಯೋಹಾನ 12:24-26 ನೋಡಿರಿ. ಇದಕ್ಕೆ ಮನಸ್ಸು ಮಾಡದೆ ಇರುವವರು ತಾವು ಯಶಸ್ಸಿನಲ್ಲಿದ್ದೇವೆ ಅಂದುಕೊಳ್ಳಬಹುದು, ಆದರೆ ಅದು ದೇವರ ದೃಷ್ಟಿಯಲ್ಲಿ ಯಶಸ್ಸಾಗಿರುವದಿಲ್ಲ. **13-14**

**4:13-14** ಕೀರ್ತನೆ 116:10. ಎಲ್ಲಾ ರೀತಿಯ ಸಂಕಟಗಳು ಮತ್ತು ಅಪಾಯಗಳ ನಡುವೆಯೂ ಯೇಸು ಕ್ರಿಸ್ತನ ಸೇವೆಗೆ ಪೌಲನು ಬರಲು ಕಾರಣವೇನು? ಅವನು ದೇವರಲ್ಲಿ ನಂಬಿಕೆಯನ್ನಿಟ್ಟನು ಆದದರಿಂದ ಮೌನವಾಗಿರಲು ಆಗಲಿಲ್ಲ. ಇದಲ್ಲದೆ ಆಶೀರ್ವದಿಸಲ್ಪಟ್ಟ ಭವಿಷ್ಯದ ದೃಢತೆಯು ಅವನಿಗಿತ್ತು. ವಿಶ್ವಾಸಿಗಳ ಭವಿಷ್ಯದ ಪುನರುತ್ಥಾನವು ಅವನು ಮುಂದುವರೆಯುವಂತೆ ಮಾಡಿದ ದೊಡ್ಡ ನಿರೀಕ್ಷೆಯಾಗಿದೆ (ರೋಮಾ 8:23-25; 1 ಕೊರಿಂಥ 15:49-58). **15**

**4:15** ಪೌಲನ ಶ್ರಮೆಗಳು ಮತ್ತು ಅನುಭವಗಳು ಇತರರ ಹಿತಕ್ಕಾಗಿ ಆಗಿದ್ದವು. ಮತ್ತು ಇದುವೇ ಅವನ ಬಯಕೆಯಾಗಿತ್ತು – ಕೊಲೊ 1:24; 1 ಕೊರಿಂಥ 10:33; 2 ತಿಮೊ 2:10. ದೇವರ ಸೇವಕನಾಗಿರುವವನಲ್ಲಿ ಇಂತಹ ಮನೋಭಾವನೆ ಇರುವದಾದರೆ ಅದು ದೊಡ್ಡ ಸಹಾಯಕವಾಗಿರುತ್ತದೆ! ಇತರರಿಗೆ ದೊಡ್ಡ ಆಶೀರ್ವಾದವಾಗಿರುತ್ತದೆ! ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುವ ಬಗ್ಗೆ ಪೌಲನಿಗಿರುವ ಬಯಕೆಯನ್ನು ಮತ್ತೊಮ್ಮೆ ನೋಡಿರಿ – 1:11; 9:11-13. **16**

**4:16** ಈ ಅಧ್ಯಾಯದ ಕೆಲವು ಧ್ಯೇಯಗಳ ಸಂಕ್ಷಿಪ್ತ ಸಾರಾಂಶ.

*"ಕಳವಳಗೊಳ್ಳಬೇಡಿರಿ"*– ವ 1.

*"ವ್ಯರ್ಥಮಾಡುತ್ತಾ ಇದ್ದಾರೆ"*– ವ 7-12.

*"ಹೊಸದಾಗಿ ಮಾಡುತ್ತಾನೆ"*– ವ 10,11. ಅವನು ಅನುದಿನ ಮರಣವನ್ನು ಅನುಭವಿಸುತ್ತಾ ಇದ್ದನು (1 ಕೊರಿಂಥ 15:31), ಆದರೆ ದೇವರು ಅವನಿಗೆ ಅನುದಿನದ ಜೀವಿತವನ್ನು ಕೊಡುತ್ತಾ ಇದ್ದನು. **17**

**4:17** *"ಸಂಕಟ"*– ಅವನ ಕಷ್ಟಗಳು ಮತ್ತು ಸಮಸ್ಯೆಗಳನ್ನು – ವ 8-10; 1:8; 11:23-27 ರಲ್ಲಿ ನೋಡಿರಿ. ಪೌಲನು ಅವುಗಳನ್ನು "ಹಗುರವಾದವುಗಳು" –ಎಂದು

ಕರೆದಿದ್ದಾನೆ. ಭವಿಷ್ಯದ ಬಹುಮಾನಗಳಿಗೆ ಹೋಲಿಸಿದರೆ ಅವುಗಳು ಪ್ರಾಮುಖ್ಯವಲ್ಲ ಎಂಬದು ಅವನ ಮಾತಿನ ಅರ್ಥವಾಗಿದೆ. ಹೀಗಿರುವಾಗ ನಾವು ನಮ್ಮ ಸಣ್ಣಪುಟ್ಟ ಕಷ್ಟಗಳ ಬಗ್ಗೆ ಏನು ಹೇಳಬೇಕು? ನಾವು ನಮ್ಮನ್ನೇ ಅಯ್ಯೋಪಾಪ ಅಂದುಕೊಳ್ಳಬೇಕೇ ಮತ್ತು ದೂರುಗಳನ್ನು ಮಾಡಬೇಕೇ? ಈ ವಿಷಯದಲ್ಲಿ ಪೌಲನಿಗಿದ್ದ ತಿಳುವಳಿಕೆ ನಮಗೆ ಇಲ್ಲದೆ ಇದ್ದರೆ ಹೀಗೆ ಮಾಡಲು ಆಗುವದಿಲ್ಲ.

*"ಕ್ಷಣಮಾತ್ರ"*– ಪೌಲನು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡ ಕೆಲವು ದಿನಗಳ ನಂತರವೇ ಅವನಿಗೆ ಸಮಸ್ಯೆಗಳು ಪ್ರಾರಂಭವಾದವು ಮತ್ತು ಅವನು ಸಾಯುವ ತನಕ ಅಂದರೆ ಅನೇಕ ವರ್ಷಗಳು ಮುಂದುವರೆದವು. ಆದರೆ ಪೌಲನ ದೃಷ್ಟಿಕೋನದಲ್ಲಿ ಅವೆಲ್ಲವುಗಳು ನಿತ್ಯತ್ವಕ್ಕೆ ಹೋಲಿಸಿದರೆ ಕೇವಲ ಕ್ಷಣಮಾತ್ರವಾಗಿದ್ದವು. ನಮ್ಮೆಲ್ಲರಿಗೂ ಇದೇ ರೀತಿಯ ದೃಷ್ಟಿಕೋನ ಇರಬೇಕು.

*"ಪ್ರತಿಫಲವನ್ನು ಉಂಟುಮಾಡುತ್ತವೆ"*– ಕ್ರಿಸ್ತನ ನಿಮಿತ್ತದ ಕಷ್ಟಗಳು ನಿಜವಾಗಿಯೂ ಅವುಗಳನ್ನು ಅನುಭವಿಸುವವರ ಹಿತಕ್ಕಾಗಿಯೇ ಕಾರ್ಯಮಾಡುತ್ತವೆ. ವಿಶ್ವಾಸಿಗಳಿಗೆ ದೊರೆಯುವ ಪ್ರಭಾವವನ್ನು ಹೊಂದಲು ಅವುಗಳು ಸಹಾಯ ಮಾಡುತ್ತವೆ. ರೋಮಾ 8:17-18,28 ರೊಂದಿಗೆ ಹೋಲಿಸಿ ನೋಡಿರಿ. **18**

**4:18** ಈ ಕಾರಣದಿಂದಲೇ ಪೌಲನು ತನಗೆದುರಾದ ಎಲ್ಲಾ ಕಾರ್ಯಗಳನ್ನು ಸಹಿಸಿಕೊಂಡನು, ಈ ಕಾರಣದಿಂದಲೇ ಕಷ್ಟಗಳು ಅವನ ದೃಷ್ಟಿಗೆ ತಾತ್ಕಾಲಿಕ ಹಾಗೂ ಹಗುರವಾದವುಗಳಾಗಿದ್ದವು. ಆದರೆ ನಾವು ಕಣ್ಣಿಗೆ ಕಾಣದವುಗಳ ಮೇಲೆ ನಮ್ಮ ದೃಷ್ಟಿಯನ್ನು ಇಡಲು ಹೇಗೆ ಸಾಧ್ಯ? ದೇವರು ಕೊಡುವ ಆತ್ಮೀಕ ತಿಳುವಳಿಕೆ (ವ 6) ಮತ್ತು ನಂಬಿಕೆಯಿಂದ ಕಣ್ಣಿಗೆ ಕಾಣದಿರುವ ನಿತ್ಯವಾದ ದೇವರ ಕಾರ್ಯವನ್ನು ಸತ್ಯವೆಂದು ನಾವು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ (ಇಬ್ರಿ 11:1). 5:7 ರಲ್ಲಿ ಇದೇ ವಿಷಯವನ್ನು ಅವನು ಬೇರೊಂದು ರೀತಿಯಲ್ಲಿ ವ್ಯಕ್ತಪಡಿಸಿದ್ದಾನೆ. ನಾವು ನಮ್ಮ ಶಾರೀರಿಕ ಕಣ್ಣುಗಳಿಂದಲೇ ನಮ್ಮ ಲೋಕವನ್ನು, ನಮ್ಮ ಕಷ್ಟ ಹಾಗೂ ಸಮಸ್ಯೆಗಳನ್ನು ನೋಡುತ್ತೇವೆ. ನಮ್ಮ ನಂಬಿಕೆ ಹಾಗೂ ಆತ್ಮೀಕ ತಿಳುವಳಿಕೆಯ ಕಣ್ಣುಗಳಿಂದ ನಾವು ಯೇಸು ಕ್ರಿಸ್ತನ ಮುಖವನ್ನು (4:6) ಮತ್ತು ನಿತ್ಯತೆಯನ್ನು ನೋಡಬಹುದು. ಕಣ್ಣಿಗೆ ಕಾಣದಿರುವ ನಿತ್ಯವಾದ ಕಾರ್ಯಗಳ ಮೇಲೆ ನಮ್ಮ ದೃಷ್ಟಿಯನ್ನಿಟ್ಟು ನಾವು ನಮ್ಮ ಜೀವಿತವನ್ನು ಜೀವಿಸುವಾಗ, ಯಾವ ರೀತಿ ಜೀವಿಸುತ್ತೇವೆ ಎಂಬದರ ಮೇಲೆ ಅಗಾಧವಾದ ಪ್ರಭಾವ ಉಂಟಾಗುತ್ತದೆ.

## 5 1-10

**5:1-10** ಪೌಲನು ಈಗ 4:18 ರಲ್ಲಿ ತಿಳಿಸಿರುವ ಕೆಲವು ಕಣ್ಣಿಗೆ ಕಾಣದ ನಿತ್ಯವಾದ ಕಾರ್ಯಗಳ ಬಗ್ಗೆ ಮಾತನಾಡುತ್ತಾ ಇದ್ದಾನೆ – ನಿತ್ಯವಾದ ಮನೆ (ವ 1-4), ಕರ್ತನೊಂದಿಗೆ ಮನೆಯಲ್ಲಿರುವದು (ವ 8), ಮತ್ತು ಅಂತಿಮ ನ್ಯಾಯತೀರ್ಪು ಹಾಗೂ ಬಹುಮಾನಗಳು (ವ 10). ಇವುಗಳ ಮೇಲೆ ಅವನು "ತನ್ನ ಕಣ್ಣುಗಳನ್ನು ಇಟ್ಟಿದ್ದಾನೆ". 1

**5:1** *"ನಾವು ಬಲ್ಲೆವು"*– ಪೌಲನು ಇಲ್ಲಿ ಊಹೆಯ ಬಗ್ಗೆ ಮಾತನಾಡುತ್ತಾ ಇಲ್ಲ. ಅದು ದೇವರು ಪ್ರಕಟಪಡಿಸಿರುವ ಸತ್ಯದ ಮೇಲೆ ಆಧಾರವಾಗಿರುವ ತಿಳುವಳಿಕೆಯಾಗಿತ್ತು. "ಭೂಮಿಯ ಮೇಲಿರುವ ಮನೆ" –ಎಂದರೆ ನಮ್ಮ ಶರೀರಗಳು (ವ 4). ಅವುಗಳು ಸಾಯುತ್ತವೆ – ಒಂದುವೇಳೆ ಯೇಸು ಕ್ರಿಸ್ತನು ಹಿಂದಿರುಗಿ ಬರುವ ಮುನ್ನ ಮರಣ ಬಂದರೆ (1 ಕೊರಿಂಥ 15:51-52). ಆದರೆ "ದೇವರಿಂದ ಉಂಟಾಗುವ ಒಂದು ಕಟ್ಟಡ", "ನಿತ್ಯವಾಗಿರುವಂಥ ಮನೆ" ಎಂಬದಾಗಿ ಆತನು ಹೇಳಿರುವ ಮಾತಿನ ಅರ್ಥವೇನು? ಈ ಅರ್ಥದ ವಿಷಯದಲ್ಲಿ ಭಿನಾಭಿಪ್ರಾಯಗಳು ಇವೆ. ಯೋಹಾನ 14:2 ರಲ್ಲಿ ಹೇಳಲಾಗಿರುವ ತಂದೆಯ ಮನೆಯನ್ನು ಅವನು ಸೂಚಿಸುತ್ತಾ ಇರಬಹುದು. ಹಾಗೆಯೇ ಇಬ್ರಿ 11:10; 13:14; ಪ್ರಕ 21:10-27; ಲೂಕ 16:9 ನೋಡಿರಿ. ಅಥವಾ ಯೇಸು ಕ್ರಿಸ್ತನ ಎರಡನೇ ಬರೋಣದ ಸಮಯದಲ್ಲಿ ವಿಶ್ವಾಸಿಗಳಿಗೆ ದೊರೆಯುವ ಪುನರುತ್ಥಾನದ ದೇಹಗಳು ಪೌಲನ ಮಾತಿನ ಅರ್ಥವಾಗಿರಬಹುದು (1 ಕೊರಿಂಥ 15:35-53). ಒಂದುವೇಳೆ "ಗುಡಾರವು" ನಮ್ಮ ಸದ್ಯದ ದೇಹವಾಗಿದ್ದರೆ, "ಮನೆ" ನಮ್ಮ ಭವಿಷ್ಯದ ದೇಹವಾಗಿದೆ, ಅದು ಗುಡಾರದ ಹಾಗೆ ತಾತ್ಕಾಲಿಕವಲ್ಲ. 2

**5:2** *"ನರಳಾಟ"*– ರೋಮಾ 8:23 ನೋಡಿರಿ. ಅಲ್ಲಿ ಗೋಳಾಟವು "ನಮ್ಮ ದೇಹಗಳ ವಿಮೋಚನೆಗಾಗಿ" ನಡೆಯುತ್ತದೆ. ಆದ್ದರಿಂದ ಇಲ್ಲಿ ಅದುವೇ ಆತನ ಅರ್ಥವಾಗಿರಬಹುದು.

*"ಧರಿಸಿಕೊಳ್ಳುವಿಕೆ"*–ಎಂಬದು ಸಹ ಒಬ್ಬ ವ್ಯಕ್ತಿ ತನ್ನ ಮೇಲೆ ಅಥವಾ ತನ್ನ ಆತ್ಮದ ಮೇಲೆ ಹಾಕಿಕೊಳ್ಳುವದನ್ನು ಸೂಚಿಸುತ್ತದೆ ಮತ್ತು ಪರಲೋಕದಲ್ಲಿ ಶಾಶ್ವತವಾಗಿ ನೆಲೆಸುವದಕ್ಕೆ ಸಮಾನವಾಗಿರುವ ಪಟ್ಟಣವು ಬೇರೆ ಯಾವುದೂ ಇಲ್ಲ. 3

**5:3** ಇಲ್ಲಿ "ಬೆತ್ತಲೆ" ಎಂಬದು ದೇಹವಿಲ್ಲದ ಆತ್ಮವನ್ನು ಸೂಚಿಸುತ್ತದೆ. **4**

**5:4** ಇದರ ಅರ್ಥ ವಿಶ್ವಾಸಿಗಳು ಸದ್ಯದ ದೇಹದಿಂದ ತಪ್ಪಿಸಿಕೊಳ್ಳಲು ಗೋಳಾಡುವದಿಲ್ಲ, ಬದಲಾಗಿ ಹೊಸ ಶರೀರಕ್ಕಾಗಿ ಗೋಳಾಡುತ್ತಾರೆ ಎಂಬದಾಗಿದೆ. "ಧರಿಸಿಕೊಳ್ಳುತ್ತೇವೆ" ಮತ್ತು "ಮರ್ತ್ಯವಾದದ್ದು ನುಂಗಿಹೋಗಿ ಜೀವವೊಂದೇ ಉಳಿಯುತ್ತದೆ" ಎಂಬ ಎರಡು ಪದಗಳು 1 ಕೊರಿಂಥ 15:54 ರಲ್ಲಿ ನಮ್ಮ ದೇಹಗಳ ಪುನರುತ್ಥಾನದ ಬಗ್ಗೆ ಪೌಲನು ಹೇಳಿರುವ ಮಾತುಗಳು ಸಮಾನವಾದವುಗಳಾಗಿವೆ. **5**

**5:5** ವಿಶ್ವಾಸಿಗಳು ದೇವರ ನಿರ್ಮಾಣವಾಗಿದ್ದಾರೆ, ನೂತನ ಸೃಷ್ಟಿಗಳಾಗಿದ್ದಾರೆ (ವ 17; ಎಫೆ 2:10). ನಮ್ಮ ಮೇಲೆ ಪರಲೋಕದ "ನಿವಾಸವನ್ನು" ಹಾಕಬೇಕೆಂಬ ಕಾರಣಕ್ಕಾಗಿಯೇ ಆತನು ನಮ್ಮನ್ನು ಉಂಟುಮಾಡಿದ್ದಾನೆ (ವ 2) – ಈ ವಾಸಸ್ಥಳವು ಪರಲೋಕಕ್ಕೆ ಹೊಂದಿಕೊಳ್ಳುವದಾಗಿದೆ. ಯೋಹಾನ 6:39-40 ನೋಡಿರಿ.

*"ಸಂಚಕಾರ"*– ಅಥವಾ "ಹೂಡಿಕೆ" ಅಥವಾ "ಭರವಸೆ". ಇದರ ಮೂಲ ಅರ್ಥ ಶ್ರದ್ಧೆಯ ಹಣ – ಮುಂಗಡವಾಗ ಹಣ ಪಾವತಿಸುವದು, ಖರೀದಿಯ ಉಳಿದ ಹಣ ನಂತರದಲ್ಲಿ ಕೊಡುವದು. ಹಾಗೆಯೇ 1:22; ಮತ್ತು ಎಫೆ 1:14 ನೋಡಿರಿ. ದೇವರು ಈ ಸಂಚಕಾರವನ್ನು ಎಲ್ಲಾ ವಿಶ್ವಾಸಿಗಳಿಗೂ ಕೊಡುವವನಾಗಿದ್ದು ತಾನು ಅವರಿಗೆ ಮಾಡಿರುವ ಎಲ್ಲಾ ವಾಗ್ದಾನಗಳನ್ನು ನೆರವೇರಿಸುತ್ತಾನೆ ಮತ್ತು ಅವರನ್ನು ಅವರ ಭವಿಷ್ಯದ ಸ್ವಾಸ್ತ್ಯಕ್ಕೆ ನಡೆಸುತ್ತಾನೆ ಎಂಬದಕ್ಕೆ ಗುರುತಾಗಿದೆ. ದೇವರು ತನ್ನ ಮನಸ್ಸು ಬದಲಾಯಿಸಿಕೊಳ್ಳುತ್ತಾನೆ ಮತ್ತು ತನ್ನ ಸಂಚಕಾರವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾನೆ ಎಂಬದಾಗಿ ನಾವು ಯೋಚಿಸಲು ಯಾವುದೇ ಕಾರಣವಿಲ್ಲ. ತನ್ನ ಸ್ವಂತ ಆತ್ಮವನ್ನೇ ನಮಗೆ ಕೊಟ್ಟಿರುವದರಿಂದ ಭವಿಷ್ಯದಲ್ಲಿ ಕೊಡುವದಾಗಿ ವಾಗ್ದಾನ ಮಾಡಿರುವ ಆಶೀರ್ವಾದಗಳನ್ನು ಆತನು ಹಿಡಿದಿಟ್ಟುಕೊಳ್ಳುವದಿಲ್ಲ. **6-8**

**5:6-8** ಪೌಲನ ಆತ್ಮವಿಶ್ವಾಸ ಮತ್ತು ತಿಳುವಳಿಕೆಯ ಫಲಿತಾಂಶವು ದೇವರ ಪ್ರಕಟನೆಯಿಂದ ಬಂದಿತ್ತು, ಇದನ್ನು ವಿಶ್ವಾಸಿಗಳೆಲ್ಲರೂ ಹೊಂದಬಹುದಾಗಿದೆ. 1 ಕೊರಿಂಥ 2:9-16 ರೊಂದಿಗೆ ಹೋಲಿಸಿ ನೋಡಿರಿ. ನಾವು ಭೋಲೋಕದಲ್ಲಿ ದೇಹಧಾರಿಗಳಾಗಿರುವಾಗ ಕರ್ತನು ನಮ್ಮ ಜೊತೆಯಲ್ಲಿ ಇಲ್ಲ ಎಂಬದನ್ನು ಆತನು ಈ ವಚನಗಳಲ್ಲಿ ಹೇಳುತ್ತಾ ಇಲ್ಲ. ಆತನು ಎಲ್ಲಾ ವಿಶ್ವಾಸಿಗಳೊಂದಿಗೆ ಇದ್ದಾನೆ ಎಂಬದು ನಮಗೆ ಗೊತ್ತಿದೆ – 13:5; ಮತ್ತಾಯ

28:20; ಯೋಹಾನ 17:20-23. ಆದರೆ ವಿಶ್ವಾಸಿಗಳು ಇನ್ನೂ ಕರ್ತನೊಂದಿಗೆ ಇಲ್ಲ – ಅಂದರೆ ಆತನ ಈಗಿನ ಪರಲೋಕದ ಪ್ರಸನ್ನತೆಯಲ್ಲಿ ಇಲ್ಲ. ಪೌಲನು ಹೇಳುವದೇನೆಂದರೆ ಅವರು ಸತ್ತ ನಂತರ ಆತನ ಪ್ರಸನ್ನತೆಗೆ ಹೋಗುತ್ತಾರೆ. ಹಾಗೆಯೇ ಫಿಲಿಪ್ಪಿ 1:23-24 ನೋಡಿರಿ. ಲೂಕ 23:46; ಯೋಹಾನ 17:24 ರೊಂದಿಗೆ ಹೋಲಿಸಿ ನೋಡಿರಿ. 7

**5:7** 4:18 ನೋಡಿರಿ. 9

**5:9** ವಿಶ್ವಾಸಿಗಳು ಯೇಸು ಕ್ರಿಸ್ತನ ಪ್ರಸನ್ನತೆಯನ್ನು ಅನುಭವಿಸುವವರಾದ್ದರಿಂದ ಮತ್ತು ಕ್ರಿಸ್ತನೊಂದಿಗೆ ಶಾಶ್ವತವಾಗಿ ಇರುವವರಾದ್ದರಿಂದ, ಅವರು ಯಾವ ರೀತಿ ಜೀವಿಸುತ್ತಾರೋ ಅದರ ಮೇಲೆ ಅಗಾಧವಾದ ಪ್ರಭಾವವು ಇರಬೇಕು. ಪೌಲನು ಹೇಳುವದೇನೆಂದರೆ ಅದು ಅವನ ಜೀವಿಸುವ ರೀತಿಯ ಮೇಲೆ ದೊಡ್ಡ ಪ್ರಭಾವವನ್ನು ಬೀರಿದೆ. ಬದುಕಿರಲಿ ಅಥವಾ ಸತ್ತಿರಲಿ ಎಲ್ಲದಕ್ಕಿಂತ ಹೆಚ್ಚಾಗಿ ಯೇಸು ಕ್ರಿಸ್ತನಿಗೆ ಮೆಚ್ಚಿಕೆಯಾಗಿರಬೇಕು ಎಂಬದೇ ಅವನ ಬಯಕೆಯಾಗಿತ್ತು. ಯೇಸು ಕ್ರಿಸ್ತನನ್ನು ಮೆಚ್ಚಿಸುವವರು, ತಮ್ಮನ್ನು ಮೆಚ್ಚಿಸಿಕೊಳ್ಳಬೇಕು ಎಂಬ ಗುರಿಯನ್ನು ಹೊಂದಿರುವದಿಲ್ಲ, ಬದಲಾಗಿ ಯೇಸು ಕ್ರಿಸ್ತನ ಪ್ರಭಾವ ಮತ್ತು ಇತರರ ಹಿತಕ್ಕಾಗಿ ಜೀವಿಸುವವರಾಗಿರುತ್ತಾರೆ. ವ 15; 1 ಕೊರಿಂಥ 9:19-23; 10:31 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನನ್ನು ಮೆಚ್ಚಿಸಲು ಇಷ್ಟಪಡದೆ ಇರುವವರು ದೇವರ ನಿಜವಾದ ಸೇವಕರಲ್ಲ. 10

**5:10** ರೋಮಾ 14:10-12; 2:6; 1 ಕೊರಿಂಥ 3:13-15. ವಿಶ್ವಾಸಿಗಳು ಪ್ರತಿಫಲಗಳಿಗೆ ಯೋಗ್ಯವಾದ ಕಾರ್ಯಗಳಿಗೆ ತಕ್ಕ ಪ್ರತಿಫಲಗಳನ್ನು ಹೊಂದುತ್ತಾರೆ ಮತ್ತು ಯೇಸು ಕ್ರಿಸ್ತನಿಗೆ ಮೆಚ್ಚಿಕೆಯಿಲ್ಲದ ಕಾರ್ಯಗಳಿಗೆ ಒಳಗಾದರೆ ಅದಕ್ಕೂ ತಕ್ಕ ಪ್ರತಿಫಲಗಳನ್ನು ಹೊಂದುತ್ತಾರೆ. 11

**5:11** *“ಕರ್ತನ ಭಯ”*– ಪೌಲನ ಮಾತಿನ ಅರ್ಥ ಭಕ್ತಿ ಮತ್ತು ಶ್ರದ್ಧೆ. ರೋಮಾ 3:18; ಆದಿ 20:11; ಕೀರ್ತನೆ 34:11-14; 111:10; ಜ್ಞಾನೋ 1:7 ನೋಡಿರಿ. ಮುಂಬರುವ ನ್ಯಾಯತೀರ್ಪಿನ ಕುರಿತಾದ ಆಲೋಚನೆಗಳು ಅವನ ಮನಸ್ಸಿನೊಳಗೆ ಬಂದವು. ಇದುವೇ ಅವನ ಸೇವೆಯನ್ನು ಬಹಳವಾಗಿ ಪ್ರೇರೇಪಿಸುತ್ತಾ ಇತ್ತು. 12

**5:12** 1:12-14; 3:1-3. ಈ ವಚನದಲ್ಲಿ ಅವನು ಮತ್ತೊಮ್ಮೆ ಕೊರಿಂಥದಲ್ಲಿರುವ ತನ್ನ ವಿರೋಧಿಗಳನ್ನು ಸೂಚಿಸುತ್ತಾ ಇದ್ದಾನೆ (11:13-15). ಅಲ್ಲಿದ್ದ ವಿಶ್ವಾಸಿಗಳು

ಅವನಲ್ಲಿ ಹೆಚ್ಚಳಪಡಬೇಕೆಂದು ಅವನು ಬಯಸಿದನು ಅಂದರೆ, ಅವನು ನಿಜವಾದ ಅಪೊಸ್ತಲನು ಹಾಗೂ ದೇವರ ಸತ್ಯಗಳ ಬೋಧಕರು ಎಂದು ಅವರು ಭರವಸೆಯುಳ್ಳವರಾಗಿರಬೇಕೆಂದು ಬಯಸಿದನು. ಆಗ ಕೇವಲ ಬಾಹ್ಯದ ಕಾರ್ಯಗಳ ಹೆಚ್ಚಳಪಡುವ ಸುಳ್ಳು ಬೋಧಕರಿಗೆ ಅವರು ಸರಿಯಾಗಿ ಉತ್ತರ ಹೇಳಲು ಆಗುತ್ತಾ ಇತ್ತು. 13

**5:13** ಅವನ ವಿರೋಧಿಗಳಿಗೆ ಅವನಿಗೆ ಹುಚ್ಚು ಹಿಡಿದಿದೆ ಎಂದು ಹೇಳಿದರೇ? ಅವನು ಕೆಲವೊಮ್ಮೆ ಬುದ್ಧಿಯಿಲ್ಲದವನಾಗಿ ನಡೆದುಕೊಳ್ಳುತ್ತಾ ಇದ್ದಾನೆ ಎಂದು ಅಲ್ಲಿದ್ದ ವಿಶ್ವಾಸಿಗಳು ಹೇಳಿದರೇ? (ಮಾರ್ಕ 3:21; ಅಪೊ 26:24; 1 ಕೊರಿಂಥ 4:10 ರೊಂದಿಗೆ ಹೋಲಿಸಿ ನೋಡಿರಿ). ಅವನು ಏನೇ ಆಗಿದ್ದರೂ, ಅವನ ನಡತೆ ಅವರಿಗೆ ಹೇಗೆ ಕಂಡು ಬಂದರೂ, ಅವೆಲ್ಲವೂ ದೇವರಿಗಾಗಿ ಮತ್ತು ಅವರಿಗಾಗಿ ಆಗಿತ್ತೇ ಹೊರತು ಅವನಿಗಾಗಿಯಲ್ಲ ಎಂದು ಅವರು ತಿಳಿದುಕೊಳ್ಳಬೇಕೆಂದು ಬಯಸಿದನು. ಯೋಹಾನ 2:17 ರೊಂದಿಗೆ ಹೋಲಿಸಿ ನೋಡಿರಿ. 14

**5:14** 11ನೇ ವಚನದಲ್ಲಿರುವದಕ್ಕಿಂತ ದೊಡ್ಡದಾಗಿರುವ ಅವನ ಸೇವೆಯ ಪ್ರೇರಣೆಯನ್ನು ನಾವು ಇಲ್ಲಿ ನೋಡಬಹುದು. ಅವನು ದೇವರಿಗಾಗಿ ಮತ್ತು ಇತರರ ಒಳಿತಿಗಾಗಿ ಎಲ್ಲವನ್ನೂ ಮಾಡಲು ಹೇಗೆ ಸಾಧ್ಯ? ಯೇಸು ಕ್ರಿಸ್ತನ ಪ್ರೀತಿಯ ತಿಳುವಳಿಕೆ, ತನ್ನ ಹೃದಯದಲ್ಲಿ ಅದರ ಅನುಭವ (ರೋಮಾ 5:5) ಪ್ರೇರಣಾಶಕ್ತಿಯಾಗಿದ್ದು ಅವನನ್ನು ದೇವರ ಕೆಲಸದಲ್ಲಿ ಮುನ್ನಡೆಸಿತು. (ಲೂಕ 12:50 ರೊಂದಿಗೆ ಹೋಲಿಸಿ ನೋಡಿರಿ, ಅಲ್ಲಿಯೂ ಇದೇ ಗ್ರೀಕ್ ಪದವನ್ನು ಉಪಯೋಗಿಸಲಾಗಿದೆ). ಎಲ್ಲಾ ವಿಶ್ವಾಸಿಗಳಲ್ಲಿ ಇರುವ ಹಾಗೆ ಯೇಸು ಕ್ರಿಸ್ತನು ಅವನೊಳಗೆ ಇದ್ದನು ಮತ್ತು ಯೇಸು ಕ್ರಿಸ್ತನ ಪ್ರೀತಿಯು ಅವನೊಳಗೆ ಇತ್ತು. ಅವನು ಸಂಪೂರ್ಣವಾಗಿ ಯೇಸು ಕ್ರಿಸ್ತನಿಗೆ ಅಧೀನನಾಗಿದ್ದರಿಂದ, ಯೇಸು ಕ್ರಿಸ್ತನ ಪ್ರೀತಿಗೂ ಸಂಪೂರ್ಣವಾಗಿ ಅಧೀನನಾಗಿದ್ದನು. ಕ್ರಿಸ್ತನ ಪ್ರೀತಿ ಎಂದು ಹೇಳುವಾಗ, ಕ್ರಿಸ್ತನಿಗೆ ಅವನ ಮೇಲೆ ಇದ್ದ ಪ್ರೀತಿಯನ್ನು ಮಾತ್ರ ಸೂಚಿಸುವದಿಲ್ಲ ಬದಲಾಗಿ ಎಲ್ಲಾ ಮನುಷ್ಯರ ಮೇಲೆ ಯೇಸು ಕ್ರಿಸ್ತನಿಗಿರುವ ಪ್ರೀತಿಯನ್ನು ಸೂಚಿಸುತ್ತದೆ. 1 ಯೋಹಾನ 4:10,19 ರೊಂದಿಗೆ ಹೋಲಿಸಿ ನೋಡಿರಿ. ಗಲಾ 2:20 ನೋಡಿರಿ.

*"ಒತ್ತಾಯ ಮಾಡುತ್ತದೆ"*– ಗ್ರೀಕ್ ಪದದ ಅರ್ಥ "ಒಟ್ಟಾಗಿಸುತ್ತದೆ", "ಆಧಾರವಾಗಿದೆ",

“ಒಟ್ಟುಗೂಡಿಸುತ್ತದೆ”, “ಬಲವಂತಮಾಡುತ್ತದೆ”, “ಸ್ವಾಧೀನಪಡಿಸುತ್ತದೆ’, “ಉತ್ತೇಜನಪಡಿಸುತ್ತದೆ”, “ಪ್ರೇರೇಪಿಸುತ್ತದೆ”. ಯೇಸು ಕ್ರಿಸ್ತನ ಪ್ರೀತಿಯು ಈ ಎಲ್ಲಾ ಕಾರ್ಯಗಳನ್ನು ಮಾಡಿಸುತ್ತದೆ ಎಂಬದರಲ್ಲಿ ಯಾವುದೇ ಸಂದೇಹವಿಲ್ಲ ಆದರೆ ಬಹುಶಃ ಇಲ್ಲಿ ಅದರ ಅರ್ಥ “ಬಲವಂತಮಾಡುತ್ತದೆ” ಅಥವಾ “ಉತ್ತೇಜನಪಡಿಸುತ್ತದೆ” ಮತ್ತು “ಪ್ರೇರೇಪಿಸುತ್ತದೆ”.

*“ಎಲ್ಲರಿಗೋಸ್ಕರ ಒಬ್ಬನು ಸತ್ತದ್ದರಿಂದ”*– ಯೇಸು ಕ್ರಿಸ್ತನು ಮಾನವರೆಲ್ಲರಿಗಾಗಿ ಸತ್ತನು. ಅವರೆಲ್ಲರೂ ತಮ್ಮ ಪಾಪದ ನಿಮಿತ್ತ ಸಾಯಲು ಅರ್ಹರಾಗಿದ್ದರು. ಆತನು ಅವರ ಸ್ಥಾನದಲ್ಲಿ ತನ್ನ ಪ್ರಾಣವನ್ನು ಕೊಟ್ಟನು (ವ 19; ಯೋಹಾನ 1:29; 3:16; 1 ತಿಮೊ 2:6; ಇಬ್ರಿ 2:9; 1 ಪೇತ್ರ 3:18; 1 ಯೋಹಾನ 2:2). ಆದ್ದರಿಂದ ದೇವರ ದೃಷ್ಟಿಯಲ್ಲಿ ಎಲ್ಲರೂ ಸತ್ತವರಾಗಿದ್ದರು – ಅಂದರೆ ಯೇಸು ಕ್ರಿಸ್ತನು ಸತ್ತಾಗ ಎಲ್ಲರೂ ಸತ್ತು ಹೋದರು. ಮಾನವರ ಬದಲೀ ವ್ಯಕ್ತಿ ಮತ್ತು ಪ್ರತಿನಿಧಿಗೆ ಏನಾಯಿತೋ ಅವೆಲ್ಲವೂ ಮಾನವರಿಗೂ ಆಯಿತು. ಇದರ ಅರ್ಥ ಮಾನವರೆಲ್ಲರೂ ರಕ್ಷಣೆ ಹೊಂದಿದ್ದಾರೆ ಎಂಬದಲ್ಲ. ಯೇಸು ಕ್ರಿಸ್ತನು ಜನರಿಗಾಗಿ ಪ್ರಾಣ ಕೊಟ್ಟದ್ದರಿಂದ ಜನರೆಲ್ಲರೂ ರಕ್ಷಣೆ ಹೊಂದಿಲ್ಲ – ಅವರು ದೇವರೊಂದಿಗೆ ಸಮಾಧಾನವಾಗಬೇಕು (ವ 20). ಅವರು ಪಶ್ಚಾತ್ತಾಪಪಡಬೇಕು ಮತ್ತು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡಬೇಕು (ಲೂಕ 13:3; ಯೋಹಾನ 3:36; 8:24; ಅಪೊ 17:30). ಅವರು ಆತನ ಮರಣದಲ್ಲಿ “ದೀಕ್ಷಾಸ್ನಾನ” ತೆಗೆದುಕೊಳ್ಳಬೇಕು (ರೋಮಾ 6:3). ಇಲ್ಲವಾದರೆ ಯಾರಿಗೂ ರಕ್ಷಣೆ ಸಿಗುವದಿಲ್ಲ. ದೇವರು ಮಾನವರೆಲ್ಲರನ್ನು ಕ್ಷಮಿಸುವಂತೆ ಯೇಸು ಕ್ರಿಸ್ತನ ಮರಣವು ಸಾಧ್ಯವನ್ನಾಗಿಸಿದೆ, ಆದರೆ ಯೇಸು ಕ್ರಿಸ್ತನ ಮೂಲಕ ಕ್ಷಮಾಪಣೆಗಾಗಿ ಆತನ ಕಡೆಗೆ ತಿರುಗಿಕೊಳ್ಳುವವರು ಮಾತ್ರವೇ ರಕ್ಷಣೆ ಹೊಂದುತ್ತಾರೆ. “ಎಲ್ಲರಿಗೋಸ್ಕರ ಒಬ್ಬನು ಸತ್ತನು” ಎಂಬದರ ಮತ್ತೊಂದು ವ್ಯಾಖ್ಯಾನವೇನೆಂದರೆ, ದೇವರು ಯಾರನ್ನು ಆತನಿಗೆ ಒಪ್ಪಿಸಿದನೋ ಅವರೆಲ್ಲರಿಗಾಗಿ ಯೇಸು ಕ್ರಿಸ್ತನು ಸತ್ತನು (ಯೋಹಾನ 6:37; 17:6). ಅನೇಕ ಪಂಡಿತರು ಈ ವ್ಯಾಖ್ಯಾನದ ಪರ ವಹಿಸಿದ್ದಾರೆ (ಆದರೆ ಈ ನೋಟ್ಸ್ ಗಳ ಗ್ರಂಥಕರ್ತರು ಇದರ ಪರ ವಹಿಸಿಲ್ಲ). ನಾವು ಯಾವುದೇ ವ್ಯಾಖ್ಯಾನವನ್ನು ತೆಗೆದುಕೊಂಡರೂ ಒಂದು ವಿಷಯ ಮಾತ್ರ ಸ್ಪಷ್ಟವಾಗಿದೆ – ಆತನಲ್ಲಿ ನಂಬಿಕೆಯಿಡುವವರಿಗೆ ಮಾತ್ರವೇ ಆತನ ಮರಣದಿಂದ ದೊರೆಯುವ ನಿತ್ಯವದ ಪ್ರಯೋಜನಗಳು ದೊರೆಯುತ್ತವೆಯೇ ಹೊರತು ಎಲ್ಲಾ ಮನುಷ್ಯರಿಗೆ ದೊರೆಯುವದಿಲ್ಲ. **15**

**5:15** ಇಲ್ಲಿ ನಾವು ಯೇಸು ಕ್ರಿಸ್ತನ ಮರಣದ ಒಂದು ಮಹಾ ಉದ್ದೇಶವನ್ನು ನೋಡಬಹುದು – ಸ್ವಾರ್ಥವೆಂಬ ಬಂಧನದಲ್ಲಿ ಸಿಕ್ಕಿಕೊಂಡು ಅದಕ್ಕನುಸಾರ ಜೀವಿಸುತ್ತಿರುವ ಜನರ ಸ್ವಾರ್ಥವೆಂಬ ಬಂಧನವನ್ನು ಮುರಿದು ಅವರನ್ನು ಯೇಸು ಕ್ರಿಸ್ತನ ಕಡೆಗೆ ಗಮನಹರಿಸಿ ಜೀವಿಸುವವರಾಗುವಂತೆ ಮಾಡುವದು. ಹಾಗೆಯೇ ರೋಮಾ 14:9. ಪೌಲನ ವಿಷಯದಲ್ಲಿ ಈ ಫಲಿತಾಂಶವನ್ನು ನಾವು ನೋಡಬಹುದು (ವ 9). ನಮ್ಮಲ್ಲಿಯೇ ಇದೇ ಪ್ರಭಾವವನ್ನು ನಾವು ನೋಡಬಹುದೇ? ಒಂದುವೇಳೆ ಇಲ್ಲವೆಂದರೆ, ನಾವು ಆತನನ್ನು ತಿಳಿದುಕೊಳ್ಳುತ್ತೇವೆಯೇ? ನಮ್ಮ ನಂಬಿಕೆಯು ಯಥಾರ್ಥವಾಗಿದೆಯೇ? ಆತನ ಮರಣದಲ್ಲಿ ದೀಕ್ಷಾಸ್ನಾನ ಹೊಂದಿದ್ದೇವೆ ಎಂದರೆ ಆತನ ಪುನರುತ್ಥಾನದಲ್ಲಿಯೂ ದೀಕ್ಷಾಸ್ನಾನ ಹೊಂದಿದ್ದೇವೆ ಎಂಬದಾಗಿದೆ. ಇದರ ಅರ್ಥ ಸಂಪೂರ್ಣವಾಗಿ ಹೊಸದಾಗಿ ಜೀವಿಸುವ ವಿಧಾನವಾಗಿದೆ (ವ 17; ರೋಮಾ 6:4-7). ಸ್ವಾರ್ಥದಿಂದ ಜೀವಿಸುವದು ಸಂಪೂರ್ಣ ನಾಶನವಾಗಿದೆ. ಯೇಸು ಕ್ರಿಸ್ತನಿಗಾಗಿ ಜೀವಿಸುವದು ಸಂಪೂರ್ಣವಾದ ಆಶೀರ್ವಾದವಾಗಿದೆ. ಮತ್ತಾಯ 10:37-39; ಲೂಕ 9:23; 14:26 ನೋಡಿರಿ. 16

**5:16** ಪೌಲನು ಯೇಸು ಕ್ರಿಸ್ತನ ವಿಶ್ವಾಸಿಯಾಗುವ ಮೊದಲು, ಆತ್ಮೀಕ ತಿಳುವಳಿಕೆಯಿಲ್ಲದವನಾಗಿ, ಯೇಸು ಕ್ರಿಸ್ತನನ್ನೂ ಸೇರಿ, ಇತರರನ್ನು ಹೊರಗಿನ ಕಾರ್ಯಗಳ ಮೇಲೆ ಅಳೆಯುತ್ತಾ ಇದ್ದನು. ಯೋಹಾನ 8:15 ರೊಂದಿಗೆ ಹೋಲಿಸಿ ನೋಡಿರಿ. ಆದರೆ ಯೇಸು ಕ್ರಿಸ್ತನ ಮರಣದ ಅರ್ಥವನ್ನು ತಿಳಿದುಕೊಳ್ಳುವದು ಹೊರಗಿನ ವಿಷಯಗಳ ಮೇಲೆ ತೀರ್ಪು ಮಾಡುವದನ್ನು ಬದಲಾಯಿಸಿತು. ಪ್ರತಿಯೊಬ್ಬರನ್ನು ಯೇಸು ಕ್ರಿಸ್ತನ ಸಂಬಂಧದ ಮೇರೆಗೆ ನೋಡುವಂತೆ ಅದು ಮಾಡುತ್ತದೆ. 17

**5:17** *"ಹೀಗಿರಲಾಗಿ"*–ಎಂಬ ಪದ ಹಿಂದಿನ ವಾಕ್ಯದೊಂದಿಗೆ ಸಂಬಂಧವನ್ನು ಹೊಂದಿದೆ. ಯೇಸು ಕ್ರಿಸ್ತನಲ್ಲಿರುವ ವ್ಯಕ್ತಿ ನೂತನಸೃಷ್ಟಿಯಾಗಿದ್ದಾನೆ. ಆದದರಿಂದ ಸಹಜವಾಗಿ ಯೇಸು ಕ್ರಿಸ್ತನ ಬಗ್ಗೆ, ಇತರರ ಬಗ್ಗೆ ಮತ್ತು ತನ್ನ ಬಗ್ಗೆ ಅವನಿಗಿರುವ ಆಲೋಚನೆಯು ಸಂಪೂರ್ಣವಾಗಿ ಬದಲಾಗುತ್ತದೆ.

*"ಕ್ರಿಸ್ತನಲ್ಲಿ"*– ಯೋಹಾನ 17:20-21; ರೋಮಾ 6:3,5; 8:1; 1 ಕೊರಿಂಥ 1:1; 12:12; ಎಫೆ 1:1,4 ನೋಡಿರಿ. "ನೂತನ ಸೃಷ್ಟಿಯು" ಆತ್ಮೀಕ ಜನನದ ಬಗ್ಗೆ ಮಾತನಾಡುತ್ತದೆ (ಯೋಹಾನ 1:12-13; 3:3-8; ತೀತ 3:5; 1 ಪೇತ್ರ 1:23). ಇದನ್ನು

ಅನುಭವಿಸಿರುವವರು ಹಿಂದಿನಂತೆ ಇರುವದಿಲ್ಲ. ಸ್ವಾರ್ಥಕ್ಕಾಗಿ ಜೀವಿಸುವ ಮತ್ತು ಇತರರು ಹಾಗೂ ಯೇಸು ಕ್ರಿಸ್ತನ ವಿಷಯದಲ್ಲಿ ಲೋಕದನುಸಾರ ತೀರ್ಪು ಮಾಡುವ ಕಾರ್ಯಗಳು ಹೋಗುತ್ತವೆ. ಹಳೆಯ ಯೋಚನೆಗಳು ಮತ್ತು ಉದ್ದೇಶಗಳು ಹಾಗೂ ತತ್ವಗಳು ಹೋಗುತ್ತವೆ. ಹೊಸ ಸತ್ಯ, ಅದಕ್ಕನುಸಾರ ಜೀವಿಸಲು ಬೇಕಾದ ಹೊಸ ಬಲ ಮತ್ತು ಹೊಸ ಬಯಕೆಗಳು ಹಾಗೂ ಉದ್ದೇಶಗಳು ಹೃದಯದೊಳಗೆ ಪ್ರವೇಶಿಸುತ್ತವೆ. ಇದು ಕೇವಲ ಪೌಲನಂಥವರಿಗೆ ಮಾತ್ರವಲ್ಲ ಬದಲಾಗಿ ಯೇಸು ಕ್ರಿಸ್ತನಲ್ಲಿರುವ "ಎಲ್ಲರಿಗೂ" ಅನ್ವಯವಾಗುತ್ತದೆ ಎಂಬದನ್ನು ಎಚ್ಚರಿಕೆಯಿಂದ ತಿಳಿದುಕೊಳ್ಳೋಣ. 18

**5:18** *"ದೇವರಿಂದಲೇ"*– ಯೋಹಾನ 1:13; ಎಫೆ 2:10; 4:24; ಯಾಕೋಬ 1:18. ಜನರು ಹೊಸ ಹಾಳೆಯನ್ನು ತಿರುವಿ ಹಾಕಬಹುದು ಆದರೆ ತಮ್ಮಲ್ಲಿಯೇ ಹೊಸ ಜೀವವನ್ನು ಸೃಷ್ಟಿಸಿಕೊಳ್ಳಲು ಆಗುವದಿಲ್ಲ. ಇದು ಕೇವಲ ಕಷ್ಟವಲ್ಲ, ಅಸಾಧ್ಯವಾಗಿದೆ. ಮೊದಲನೆಯ ಸೃಷ್ಟಿಯಂತೆಯೇ (ಆದಿ 1:1) ಇದನ್ನು ಮಾಡಲು ಅವರಿಂದ ಆಗುವದೇ ಇಲ್ಲ.

*"ಸಮಾಧಾನ"*– ವೈರಿಗಳನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳುವದು, ಮತ್ತು ಬೇರ್ಪಡುವಿಕೆ ಹಾಗೂ ವೈರತ್ವಕ್ಕೆ ಕಾರಣವಾಗಿರುವದನ್ನು ತೆಗೆದುಹಾಕುವದಾಗಿದೆ. ಪಾಪವು ಜನರನ್ನು ದೇವರ ವೈರಿಗಳನ್ನಾಗಿ ಮಾಡಿದೆ (ರೋಮಾ 5:10; ಕೊಲೊ 1:21). ಅವರ ಪಾಪಗಳ ನಿಮಿತ್ತ ದೇವರ ಕೋಪ ಅವರ ಮೇಲಿತ್ತು (ರೋಮಾ 1:18. ಸಂಖ್ಯಾ 25:3; ಕೀರ್ತನೆ 90:7-11; ಯೋಹಾನ 3:36 ರ ನೋಟ್ಸ್ ನೋಡಿರಿ). ಜನರನ್ನು ತನ್ನೊಂದಿಗೆ ಸಮಾಧಾನಪಡಿಸಿಕೊಳ್ಳುವ ಸಲುವಾಗಿ ಆತನು ಕೋಪಿಸಿಕೊಳ್ಳುವಂತೆ ಮತ್ತು ಆತನಿಂದ ಬೇರ್ಪಡುವಂತೆ ಮಾಡಿದ ಕಾರ್ಯವನ್ನು ಬಗೆಹರಿಸಿಕೊಳ್ಳಲು ಮುಂದಾದನು. ಲೋಕದಾದ್ಯಂತವಿರುವ ತನ್ನ ಜನರ ಪಾಪಗಳಿಗಾಗಿ ಪ್ರಾಣವನ್ನು ಕೊಡಲು ತನ್ನ ಒಬ್ಬನೇ ಮಗನನ್ನು ಕಳುಹಿಸುವ ಮೂಲಕ ಈ ಕಾರ್ಯವನ್ನು ಮಾಡಿದನು (ವ 14 ರ ಸೂಚನೆಯನ್ನು ನೋಡಿರಿ). ದೇವರು "ಯೇಸು ಕ್ರಿಸ್ತನ ಮೂಲಕ" ಜನರನ್ನು ತನ್ನೊಂದಿಗೆ ಸಮಾಧಾನಪಡಿಸಿಕೊಂಡಿದ್ದಾನೆ – ಎಫೆ 2:16; ಕೊಲೊ 1:20,22. ಈ ಕಾರ್ಯವನ್ನು ಮಾಡಿದವನಾಗಿ ಆತನು ಸುವಾರ್ತೆಯನ್ನು ಸಾರಲು ತನ್ನ ಸೇವಕರನ್ನು ಎಲ್ಲಾ ಕಡೆಗಳಿಗೂ ಕಳುಹಿಸುತ್ತಾನೆ. "ಸಮಾಧಾನವಿಷಯವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ" ಎಂಬದರ ಅರ್ಥ ಇದುವೇ ಆಗಿದೆ. 19

**5:19** ತನ್ನ ಸೇವಕರು ಪ್ರಕಟಪಡಿಸಬೇಕಾಗಿರುವ ಸಮಾಧಾನದ ಸಂದೇಶವನ್ನು ದೇವರು

ಅವರಿಗೆ ಇಲ್ಲಿ ತಿಳಿಸಿದ್ದಾನೆ. 18ನೇ ವಚನದಲ್ಲಿ ಪೌಲನು ಹೇಳುವದೇನೆಂದರೆ ದೇವರು "ನಮ್ಮನ್ನು" ಸಮಾಧಾನಪಡಿಸಿದ್ದಾನೆ. ಈಗ ಅವನು ದೇವರು ಲೋಕವನ್ನು "ಸಮಾಧಾನಪಡಿಸುವದರ" ಬಗ್ಗೆ ಮಾತನಾಡುತ್ತಾ ಇದ್ದಾನೆ. ಇದು ಭೂತಕಾಲದಲ್ಲಿ ಇದೆ. ಯೇಸು ಕ್ರಿಸ್ತನ ಮರಣದ ಮೂಲಕ ದೇವರು ತನ್ನ ಹಾಗೂ ಭೂಮಿಯ ಮೇಲೆ ಯಾರಿಗೆ ಬೇಕೋ ಅವರಿಗೆ ನಿತ್ಯವಾದ ಸ್ನೇಹಕ್ಕೆ ಬೇಕಾದ ಅಡಿಪಾಯವನ್ನು ಹಾಕಿದ್ದಾನೆ. ಆತನು ಮಾನವರ ಪಾಪವನ್ನು ಅವರಿಗೆ ವಿರುದ್ಧವಾಗಿ ಎಣಿಸಲಿಲ್ಲ. ಆತನ ಅವರ ಪಾಪಗಳನ್ನು ತೆಗೆದು ಯೇಸು ಕ್ರಿಸ್ತನ ಮೇಲೆ ಹಾಕಿದನು (ವ 21; ಯೋಹಾನ 1:29; ಯೆಶಾಯ 53:5-6). ಇದರ ಅರ್ಥ ಎಲ್ಲರೂ ರಕ್ಷಣೆ ಹೊಂದಿದ್ದಾರೆ ಎಂಬದಾಗಿಯಲ್ಲ. ಇದರ ಅರ್ಥ ಆತನ ಬಳಿಗೆ ಬರುವವರೆಲ್ಲರೂ ರಕ್ಷಣೆ ಹೊಂದುವರು ಎಂಬದಾಗಿದೆ. ಜನ ರಕ್ಷಣೆ ಹೊಂದಬೇಕಾದರೆ ದೇವರು ಅವರಿಗಾಗಿ ಏನು ಮಾಡಿದ್ದಾನೋ ಅದನ್ನು ಅಂಗೀಕರಿಸಿಕೊಳ್ಳಬೇಕು ಮತ್ತು ಯೇಸು ಕ್ರಿಸ್ತನಲ್ಲಿ ತಮ್ಮ ಭರವಸೆಯನ್ನು ಇಡಬೇಕು. ಒಂದುವೇಳೆ ಭರವಸೆಯಿಡಲಿಲ್ಲವೆಂದರೆ ಅವರು ನಾಶವಾಗುತ್ತಾರೆ (ಯೋಹಾನ 3:16,36). **20**

**5:20** ಸಮಾಧಾನಪಡಿಸುವ ಕಾರ್ಯದಲ್ಲಿ ದೇವರ ಪಾತ್ರವು ಎರಡು ರೀತಿಯದ್ದಾಗಿದೆ – ನಮ್ಮ ಪಾಪಗಳಿಗಾಗಿ ಸಾಯಲು ಆತನು ತನ್ನ ಮಗನನ್ನು ಕಳುಹಿಸಿದನು ಮತ್ತು ಈ ಸತ್ಯವನ್ನು ಸಾರಲು ಆತನು ತನ್ನ ಸೇವಕರನ್ನು ಎಲ್ಲಾ ಕಡೆಗಳಿಗೆ ಕಳುಹಿಸುತ್ತಾನೆ. ಆದರೆ ಜನರೂ ತಮ್ಮ ಪಾತ್ರವನ್ನು ನಿಭಾಯಿಸಬೇಕು – "ದೇವರೊಂದಿಗೆ ಸಮಾಧಾನರಾಗಬೇಕು." ಇದರ ಅರ್ಥ ದೇವರು ಕ್ರಿಸ್ತನಲ್ಲಿ ಈಗಾಗಲೇ ಸಿದ್ಧಮಾಡಿರುವ ಸಮಾಧಾನವನ್ನು ಹೊಂದಿಕೊಳ್ಳಬೇಕು. ಇದು ಪಶ್ಚಾತ್ತಾಪಪಟ್ಟು, ಯೇಸು ಕ್ರಿಸ್ತನ ಸುವಾರ್ತೆಯನ್ನು ನಂಬುವದಕ್ಕೆ ಸಮಾನವಾಗಿದೆ ಎಂಬ ಅರ್ಥವನ್ನು ಕೊಡುತ್ತದೆ. ಪೌಲ (ಮತ್ತು ಸುವಾರ್ತೆ ಸಾರಲು ದೇವರು ಯಾರನ್ನೇ ಕಳುಹಿಸಿದರೂ ಅವರೆಲ್ಲರೂ) ಯೇಸು ಕ್ರಿಸ್ತನ "ರಾಯಭಾರಿಗಳಾಗಿದ್ದಾರೆ". ರಾಯಭಾರಿ ಎಂದರೆ ಮತ್ತೊಬ್ಬನನ್ನು ಅಥವಾ ಮತ್ತೊಬ್ಬರನ್ನು ಪ್ರತಿನಿಧಿಸಲು ಮತ್ತೊಂದು ಸ್ಥಳಕ್ಕೆ ಹೋಗುವವನು. ಅವನು ತನ್ನ ಸ್ವಂತ ಅಧಿಕಾರದ ಮೇರೆಗೆ ಮಾತನಾಡುವದಿಲ್ಲ ಅಥವಾ ಕ್ರಿಯೆ ಮಾಡುವದಿಲ್ಲ. ತನ್ನನ್ನು ಕಳುಹಿಸಿದವನು ಏನು ಹೇಳುತ್ತಾನೋ ಅದನ್ನೇ ಆತನು ಮಾತನಾಡುತ್ತಾನೆ. ಯೇಸು ಕ್ರಿಸ್ತನು ಪರಲೋಕದಲ್ಲಿದ್ದಾನೆ, ಆದರೆ ಆತನ ರಾಯಭಾರಿಗಳು ಭೂಲೋಕದಲ್ಲಿ ಆತನ ನಾಮದಲ್ಲಿ ಮಾತನಾಡುತ್ತಾ ಇದ್ದಾರೆ ಹಾಗೂ ಆತನ ಸಂದೇಶವನ್ನು ತಿಳಿಸುತ್ತಾ ಇದ್ದಾರೆ. ಅವರ ಮೂಲಕ ಯೇಸು ಕ್ರಿಸ್ತನು ಜನರೊಂದಿಗೆ ಮನವಿ ಮಾಡುತ್ತಾ ಇದ್ದಾನೆ, ಬೇಡಿಕೊಳ್ಳುತ್ತಾ ಇದ್ದಾನೆ ("ನಿಮ್ಮನ್ನು" ಎಂಬ ಪದ ಗ್ರೀಕ್ ಭಾಷೆಯ ಈ ವಾಕ್ಯದಲ್ಲಿ ಇಲ್ಲ. ಪೌಲನು ಈ

ಪತ್ರಿಕೆಯನ್ನು ಬರೆಯುತ್ತಿರುವ ಕೊರಿಂಥದ ವಿಶ್ವಾಸಿಗಳು ಆಗಲೇ ಸಮಾಧಾನ ಹೊಂದಿದ್ದರು). ಜನರು ರಕ್ಷಣೆ ಹೊಂದಲು ದೇವರು ಹೇಗೆ ಬೇಡುತ್ತಾ ಇದ್ದಾನೆ ಎಂಬದನ್ನು ನೋಡಿರಿ. ಯೆಹೆಜ್ಕೇಲ 18:30-32 ರೊಂದಿಗೆ ಹೋಲಿಸಿ ನೋಡಿರಿ. 21

**5:21** ಇಲ್ಲಿ ನಾಲ್ಕು ಪ್ರಮುಖ ಸತ್ಯಗಳನ್ನು ನಾವು ನೋಡಬಹುದು. ಮೊದಲನೆಯದು, ಯೇಸು ಕ್ರಿಸ್ತನು ಪಾಪವಿಲ್ಲದವನಾಗಿದ್ದಾನೆ (ಯೋಹಾನ 8:46; ಇಬ್ರಿ 4:15; 7:26; 1 ಪೇತ್ರ 2:22; 1 ಯೋಹಾನ 3:5). ಎರಡನೆಯದು, ದೇವರು ಅವನನ್ನು ಪಾಪಸ್ವರೂಪಿಯನ್ನಾಗಿ ಮಾಡಿದನು – ಅಂದರೆ, ದೇವರು ಇಡೀ ಲೋಕದ ಪಾಪವನ್ನು ಆತನ ಮೇಲೆ ಹಾಕಿದನು ಮತ್ತು ಯೇಸು ಕ್ರಿಸ್ತನ ಎಲ್ಲಾ ಅಪರಾಧಗಳನ್ನು ಹೊತ್ತುಕೊಂಡು ಅದಕ್ಕೆ ಕ್ರಯವನ್ನು ಪಾವತಿಸಿದನು. ಆತನೇ ಪಾಪ ಮಾಡಿರುವದಾಗಿ ದೇವರು ಅದನ್ನು ಎಣಿಸಿದನು. ಮಾನವನ ಪ್ರತಿಯೊಂದು ಪಾಪ, ಘೋರವಾಗಿರುವಂಥದ್ದು, ಭ್ರಷ್ಟವಾಗಿರುವಂಥದ್ದು ಮತ್ತು ಹಾಳಾಗಿರುವಂಥದ್ದು ಹಾಗೂ ಇತರೆ ರೀತಿಯ ಪಾಪವನ್ನೆಲ್ಲಾ ದೇವರ ಪವಿತ್ರನಾದ ಮಗನ ಮೇಲೆ ಹಾಕಲಾಯಿತು (ಇದರ ಬಗ್ಗೆ ಯೋಚಿಸಿರಿ!). ಮೂರನೆಯದು, ಇದು "ನಮಗೋಸ್ಕರ" (ವ 14; 1 ಪೇತ್ರ 3:18; 1 ಯೋಹಾನ 4:10). ದೇವರು ನಮ್ಮ ಪಾಪಗಳನ್ನು ಯೇಸು ಕ್ರಿಸ್ತನ ಲೆಕ್ಕಕ್ಕೆ ಹಾಕಿದನು ಆದದರಿಂದ ನಮ್ಮ ಲೆಕ್ಕಕ್ಕೆ ಏನೂ ಬರಲಿಲ್ಲ. ನಾಲ್ಕನೆಯದು, ಇದರಲ್ಲಿ ದೇವರ ಉದ್ದೇಶವೇನೆಂದರೆ ವಿಶ್ವಾಸಿಗಳೆಲ್ಲರೂ ಯೇಸು ಕ್ರಿಸ್ತನಲ್ಲಿ ನೀತಿವಂತರಾಗಬೇಕು ಎಂಬದಾಗಿದೆ. ಇದು ನೀತಿವಂತರನ್ನಾಗಿ ಮಾಡುವದರ (ರೋಮಾ 3:21-26), ಮತ್ತು ಯೇಸು ಕ್ರಿಸ್ತನೊಂದಿಗೆ ದೊರೆಯುವ ಐಕ್ಯತೆಯ ಬಗ್ಗೆ ಮಾತನಾಡುತ್ತದೆ (ಯೋಹಾನ 17:20-23; ರೋಮಾ 6:3-8; ಎಫೆ 1:1,4). ಯೇಸು ಕ್ರಿಸ್ತನೇ ದೇವರ ನೀತಿಯಾಗಿದ್ದಾನೆ (1 ಕೊರಿಂಥ 1:30; ರೋಮಾ 3:21-24; ಅಪೊ 3:14). ವಿಶ್ವಾಸಿಗಳು ಆತನೊಂದಿಗೆ ಐಕ್ಯವಾಗಿದ್ದಾರೆ, ಆದ್ದರಿಂದ ಆತನಲ್ಲಿ ನೀತಿವಂತರಾಗುತ್ತಾರೆ ಮತ್ತು ದೇವರ ದೃಷ್ಟಿಯಲ್ಲಿ ಯೇಸು ಕ್ರಿಸ್ತನು ಏನಾಗಿದ್ದಾನೋ, ವಿಶ್ವಾಸಿಗಳೂ ಅದೇ ಆಗಿದ್ದಾರೆ.

# 6 1

**6:1** *"ಆತನೊಂದಿಗೆ ಕೆಲಸ ನಡಿಸುವವರು"*– 5:20; 1 ಕೊರಿಂಥ 3:9. ದೇವರ ಕೃಪೆ

ಎಂದರೆ 5:21 ರಲ್ಲಿ ವಿವರಿಸಲಾಗಿರುವ ದೇವರ ಕೃಪೆಯಾಗಿದೆ. ಅದನ್ನು "ವ್ಯರ್ಥವಾಗಿ" –ಅಂಗೀಕರಿಸಿಕೊಳ್ಳುವದೆಂದರೆ ಅದನ್ನು ಕೇಳಿಸಿಕೊಳ್ಳುವದು ಮತ್ತು ತಿಳಿದುಕೊಳ್ಳುವದು ಆದರೆ ಅದರ ವಿಷಯದಲ್ಲಿ ಏನೂ ಮಾಡದೆ ಇರುವದಾಗಿದೆ. ಇದಲ್ಲದೆ ಜೀವನದ ಮೇಲೆ ಯಾವುದೇ ಪ್ರಭಾವ ಬೀರದ ರೀತಿಯಲ್ಲಿ ಮತ್ತು ಅದರ ಫಲಿತಾಂಶವಾಗಿ ರಕ್ಷಣೆ ಸಿಗದ ವಿಧದಲ್ಲಿ ಅದನ್ನು ಅಂಗೀಕರಿಸಿಕೊಳ್ಳುವದಾಗಿದೆ. ಈ ವಿಷಯಕ್ಕೆ ಆದ್ಯತೆಯನ್ನು ಕೊಡುವ ಸಲುವಾಗಿ ಅವನು ಯೆಶಾಯ 49:8 ವಾಕ್ಯವನ್ನು ತಿಳಿಸಿದ್ದಾನೆ. ಇಂದೇ ರಕ್ಷಣೆಯ ದಿನ – ದೇವರ ಕೃಪೆಯ ಇಡೀ ಯುಗವನ್ನು ಯೇಸು ಕ್ರಿಸ್ತನಲ್ಲಿ ಪ್ರಕಟಪಡಿಸಲಾಗಿದೆ. **3-10**

**6:3-10** ಪೌಲನು ತನ್ನ ಸೇವೆಯನ್ನು ಕಾಪಾಡಿಕೊಳ್ಳುವ ಕಾರ್ಯವನ್ನು ಮುಂದುವರೆಸುತ್ತಾ ಇದ್ದಾನೆ. 1:12-14 ನೋಡಿರಿ. ಇದಕ್ಕೆ ಆತನು ಪ್ರಾಮುಖ್ಯತೆಯನ್ನು ಕೊಡುತ್ತಾ ಇರುವದು, ಕೊರಿಂಥದ ಸಭೆಯಲ್ಲಿರುವ ಕೆಲವರು ಅಥವಾ ಅನೇಕರು, ಅವನನ್ನು ಯೇಸು ಕ್ರಿಸ್ತನ ರಾಯಭಾರಿಯೆಂದು ತಿರಸ್ಕರಿಸುವರೇನೋ ಮತ್ತು ಸುಳ್ಳು ಬೋಧಕರ ತಪ್ಪಾದ ಸುವಾರ್ತೆಯನ್ನು ಅಂಗೀಕರಿಸುತ್ತಾರೇನೋ ಎಂಬ ಭಯವನ್ನು ತೋರಿಸುತ್ತದೆ. ಆದ್ದರಿಂದ ಅವನು ಅವರ ಮುಂದೆ ತನ್ನ ಸ್ವಭಾವ ಹಾಗೂ ಅನುಭವಗಳನ್ನು ವ್ಯಕ್ತಪಡಿಸುತ್ತಾ ಇದ್ದಾನೆ. ಅವನು ನಿಜವಾಗಿಯೂ ದೇವರ ಸೇವಕನು ಎಂಬದನ್ನು ಅವುಗಳೇ ಸಾಬೀತುಪಡಿಸುತ್ತವೆ. **3**

**6:3** ಅಲ್ಲಿದ್ದ ಕೆಲವರು ಪೌಲನ ಸೇವೆಯನ್ನು ಕಡೆಗಣಿಸಲು ನಿರ್ಧರಿಸಿಕೊಂಡಿದ್ದರು. ಆದ್ದರಿಂದ ತಾನೇ ಅದನ್ನು ಕಡೆಗಣಿಸಬಾರದು ಎಂಬದಾಗಿ ಅವನೂ ನಿರ್ಧರಿಸಿಕೊಂಡನು. **4-5**

**6:4-5** 1:8; 4:8-9; 11:23-29; 1 ಕೊರಿಂಥ 4:9-13 ರೊಂದಿಗೆ ಹೋಲಿಸಿ ನೋಡಿರಿ. ಅವರು ತಾಳ್ಮೆಯಿಂದ ಅಂಥ ಕಾರ್ಯಗಳನ್ನು ಸಹಿಸಿಕೊಂಡದ್ದು, ಅವರು ನಿಜವಾಗಿಯೂ ಯೇಸು ಕ್ರಿಸ್ತನ ಸೇವಕರು ಎಂಬದನ್ನು ತೋರಿಸುವದಾಗಿತ್ತು. ಸುಳ್ಳು ಬೋಧಕರ ಜೀವಿತಗಳನ್ನು ಕೊರಿಂಥದಲ್ಲಿದ್ದವರು ಅಂಗೀಕರಿಸಿಕೊಂಡದ್ದು ನಿಜವಾಗಿಯೂ ದೊಡ್ಡ ಪ್ರಮಾದವಾಗಿದೆ ಮತ್ತು ಅಲ್ಲಿದ್ದ ಕ್ರೈಸ್ತರು ಇವುಗಳನ್ನು ತಮ್ಮ ಸ್ವಂತ ಕಣ್ಣುಗಳಿಂದ ನೋಡಿದ್ದರು. **6-7**

**6:6-7** ಈಗ ಅವನು ದೇವರ ಸೇವೆಯಲ್ಲಿ ಪ್ರಕಟಪಡಿಸಿದ ಗುಣಲಕ್ಷಣಗಳು ಮತ್ತು ಅಧಿಕಾರದ ಬಗ್ಗೆ ಮಾತನಾಡುತ್ತಾ ಇದ್ದಾನೆ. ಈ ಕಾರ್ಯಗಳನ್ನು ಯೇಸು ಕ್ರಿಸ್ತನ ಪ್ರತಿಯೊಬ್ಬ ಸೇವಕನು ಹೊಂದಿರಬೇಕು ಮತ್ತು ಅಭಿವೃದ್ಧಿಪಡಿಸಿಕೊಳ್ಳಬೇಕು. ತನ್ನ

ಜೀವಿತದಲ್ಲಿದ್ದ ಅಂಥ ಆತ್ಮೀಕ ಫಲ ತಾನು ಸುಳ್ಳು ಪ್ರವಾದಿಯಲ್ಲ ಬದಲಾಗಿ ದೇವರ ಸೇವಕ ಎಂಬದಕ್ಕೆ ಪುರಾವೆಯಾಗಿದೆ ಎಂದು ಅವನು ಹೇಳುತ್ತಿದ್ದಾನೆ. ಮತ್ತಾಯ 7:16-20 ರೊಂದಿಗೆ ಹೋಲಿಸಿ ನೋಡಿರಿ. **7**

**6:7** *"ಆಯುಧ"*– ಅಥವಾ "ಸರ್ವಾಯುಧಗಳು" –ಎಂಬದಾಗಿಯೂ ಇದನ್ನು ಭಾಷಾಂತರ ಮಾಡಬಹುದು – 10:4; ಎಫೆ 6:11-17. ಅವನ ಆಯುಧಗಳು ಕಪಟ ಮತ್ತು ವಂಚನೆ, ಕ್ರೂರತನ ಮತ್ತು ಒರಟುತನ ಇಲ್ಲದೆ, ನೀತಿಯುಳ್ಳವುಗಳಾಗಿದ್ದವು. ನೀತಿಯುಳ್ಳ ದೇವರು ಅವುಗಳನ್ನು ಕೊಟ್ಟಿದ್ದನು ಮತ್ತು ಪೌಲನು ಅವುಗಳನ್ನು ನೀತಿಯಿಂದ ಉಪಯೋಗಿಸಿದನು (1:12). **8-10**

**6:8-10** ಜನರು ಅವನ ಬಗ್ಗೆ ಏನೇ ಹೇಳಿದರೂ, ಎಷ್ಟೇ ಕಷ್ಟಗಳು ಎದುರಾದರೂ, ಅವನ ಭಾವನೆಗಳು ಏನೇ ಇದ್ದರೂ, ಬಡತನವಿದ್ದರೂ ಯೋಚಿಸದೆ ಅವನು ಕರ್ತನ ಸೇವೆಯಲ್ಲಿ ಮುಂದೆ ಸಾಗಿದನು. ಎಲ್ಲಾ ಪರಿಸ್ಥಿತಿಗಳಲ್ಲಿಯೂ 5:14 ಅವನ ವಿಷಯದಲ್ಲಿ ಸತ್ಯವಾಗಿದೆ ಎಂಬದನ್ನು ಅವನು ಸಾಬೀತುಪಡಿಸುತ್ತಾ ಇದ್ದನು. **10**

**6:10** *"ದುಃಖಪಡುವವರಾಗಿದ್ದರೂ"*– 2:4; 5:4; ರೋಮಾ 9:2-3. ಈ ಲೋಕದಲ್ಲಿ, ಸಭೆಯಲ್ಲಿ ಮತ್ತು ಯೇಸು ಕ್ರಿಸ್ತನ ಸೇವಕರನ್ನು ದುಃಖಪಡುವವರನ್ನಾಗಿ ಮಾಡಲು ಖಂಡಿತವಾಗಿಯೂ ಅನೇಕ ಕಾರಣಗಳಿವೆ. ದುಃಖದಲ್ಲಿದ್ದರೂ, ಪೌಲನು ತನ್ನ ಹೃದಯದಲ್ಲಿ ಯಾವಾಗಲೂ ಸಂತೋಷದ ಬುಗ್ಗೆಯನ್ನು ಅನುಭವಿಸುತ್ತಾ ಇದ್ದನು – 2:3; 7:4; ರೋಮಾ 5:11; 4:17; ಗಲಾ 5:22.

*"ಬಡವರು"*– ಅಪೊ 3:6; ಲೂಕ 6:20; 1 ತಿಮೊ 6:6-9 ರೊಂದಿಗೆ ಹೋಲಿಸಿ ನೋಡಿರಿ. ಪೌಲನಿಗೆ ಅನೇಕ ಆತ್ಮೀಕ ವರಗಳು ಹಾಗೂ ಸಾಮರ್ಥ್ಯಗಳು ಇದ್ದವು, ಒಂದುವೇಳೆ ಅವನು ಬಯಸಿದ್ದರೆ ಬಹಳ ಹಣ ಸಂಪಾದನೆ ಮಾಡಬಹುದಾಗಿತ್ತು. ಆದರೆ ತನ್ನ ತಲೆಯಿಡುವಷ್ಟು ಜಾಗವೂ ಇಲ್ಲದ ಯೇಸು ಕ್ರಿಸ್ತನನ್ನು ಹಿಂಬಾಲಿಸುವ ಆಯ್ಕೆಯನ್ನು ಅವನು ಮಾಡಿಕೊಂಡನು (ಮತ್ತಾಯ 8:20). ಆದದರಿಂದ ಅವನು ಅನೇಕರನ್ನು ಹಣ ಮತ್ತು ಆಸ್ತಿಯಲ್ಲಿ ಅಲ್ಲ ಬದಲಾಗಿ ನಿತ್ಯವಾದ ಆಶೀರ್ವಾದಗಳಲ್ಲಿ "ಐಶ್ವರ್ಯವಂತರನ್ನಾಗಿ" ಮಾಡಿದನು. 8:9 ರೊಂದಿಗೆ ಹೋಲಿಸಿ ನೋಡಿರಿ.

*"ಏನೂ ಇಲ್ಲದವರೂ", "ಎಲ್ಲಾ ಇದ್ದವರೂ"*– ಫಿಲಿಪ್ಪಿ 3:8; ಮತ್ತಾಯ 19:27; 1

ಕೊರಿಂಥ 3:21-22 ರೊಂದಿಗೆ ಹೋಲಿಸಿ ನೋಡಿರಿ. **11-13**

**6:11-13** ಹೃದಯವು ವಿಶಾಲವಾಗುವದು ಎಂದರೆ ಹೃದಯದೊಳಗೆ ಸ್ಥಳಾವಕಾಶ ಮಾಡುವದಾಗಿದೆ. ಅದು ಪ್ರೀತಿ ಮತ್ತು ಕಾಳಜಿಯನ್ನು ವ್ಯಕ್ತಪಡಿಸುತ್ತದೆ – 7:2-3. ಸಹಜವಾಗಿ ಕ್ರೈಸ್ತರ ಹೃದಯಗಳು ಇಕ್ಕಟ್ಟಾಗಿರುತ್ತವೆ ಮತ್ತು ಕಿರಿದಾಗಿರುತ್ತವೆ. ಅವರಿಗೆ ಸಂಬಂಧಿಸಿದ ಕಾರ್ಯಗಳಿಗೆ ಮಾತ್ರವೇ ಅವರೊಳಗೆ ಅವಕಾಶ ಇರುತ್ತವೆ. ಫಿಲಿಪ್ಪಿ 2:4,21 ರೊಂದಿಗೆ ಹೋಲಿಸಿ ನೋಡಿರಿ. **14-18**

**6:14-18** ಪೌಲನು ಈಗ ಅತ್ಯಂತ ಪ್ರಾಮುಖ್ಯವಾಗಿರುವ ಸತ್ಯವನ್ನು ವ್ಯಕ್ತಪಡಿಸಿದ್ದಾನೆ – ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳು ದೇವರಿಗೆ ವಿಶೇಷ ಜನರಾಗಿದ್ದಾರೆ ಮತ್ತು ಅವರು ಅದರ ಪ್ರಕಾರವೇ ನಡೆದುಕೊಳ್ಳಬೇಕು. ಧರ್ಮೋ 7:3-6; 1 ಪೇತ್ರ 2:9-12; ಯೋಹಾನ 17:6-10,17-19 ರೊಂದಿಗೆ ಹೋಲಿಸಿ ನೋಡಿರಿ. 14ನೇ ವಚನವು ಎಲ್ಲಾ ವಿಶ್ವಾಸಿಗಳಿಗೆ ಎಲ್ಲಾ ಸಮಯಗಳಲ್ಲಿಯೂ ಹಾಗೂ ಸ್ಥಳಗಳಲ್ಲಿಯೂ ಅನ್ವಯವಾಗುವಂಥ ತತ್ವವನ್ನು ಕೊಡುತ್ತದೆ. ಅವರು ಅವಿಶ್ವಾಸಿಗಳೊಂದಿಗೆ ಯಾವುದೇ ರೀತಿಯ ಹತ್ತಿರದ ಸಂಬಂಧದಲ್ಲಿ ಇರಬಾರದು.

*"ಸೇರಿಸಿಕೊಂಡಿದ್ದಾನೆ"*– ಅಂದರೆ ಹುದುವಾದ ಗುರಿ ಮತ್ತು ಕೆಲಸದಲ್ಲಿ ನಾವು ಒಟ್ಟಾಗಿ ಸೇರಿದ್ದೇವೆ ಎಂಬ ಅರ್ಥವಾಗಿದೆ. ಧರ್ಮೋ 22:10 ನೋಡಿರಿ. ವಿಶ್ವಾಸಿಗಳು ಯೇಸು ಕ್ರಿಸ್ತನ ನೊಗವನ್ನು ಹೊತ್ತುಕೊಂಡಿದ್ದಾರೆ (ಮತ್ತಾಯ 11:28-29), ಆದ್ದರಿಂದ ಯೇಸು ಕ್ರಿಸ್ತನನ್ನು ನಿರಾಕರಿಸುವವರೊಂದಿಗೆ ಅವರು ಸೇರಬಾರದು. ಇದು ಖಂಡಿತವಾಗಿಯೂ ವಿಶ್ವಾಸಿಗಳು ಹಾಗೂ ಅವಿಶ್ವಾಸಿಗಳ ನಡುವೆ ಮದುವೆಯನ್ನು ನಿಷೇಧಿಸುತ್ತದೆ (ಹಾಗೆಯೇ 1 ಕೊರಿಂಥ 7:39; ಎಜ್ರ 9:1-2; ನೆಹೆ 13:23-27; ಮಲಾಕಿ 2:12 ಸಹ ನೋಡಿರಿ). ಹಾಗೆಯೇ ಸುಳ್ಳು ಸುವಾರ್ತೆಯನ್ನು ಬೋಧಿಸುವ ಸುಳ್ಳು ಬೋಧಕರು ಅಥವಾ ಸತ್ಯವೇದದ ಕೆಲವು ಮೂಲಭೂತ ಸತ್ಯಗಳನ್ನು ಅಲ್ಲಗಳೆಯುವವರೊಂದಿಗೆ ಸೇರಬಾರದು ಎಂಬದನ್ನೂ ಹೇಳುತ್ತದೆ. ಪೌಲನು ಖಂಡಿತವಾಗಿಯೂ ಅವಿಶ್ವಾಸಿಗಳು ಕೆಲಸ ಮಾಡುವ ಸ್ಥಳದಲ್ಲಿ ವಿಶ್ವಾಸಿಗಳು ಕೆಲಸ ಮಾಡಬಾರದು ಅಥವಾ ಅವಿಶ್ವಾಸಿಗಳನ್ನು ಕೆಲಸಕ್ಕೆ ಕರೆಯಬಾರದು ಎಂಬದಾಗಿ ಹೇಳಿಲ್ಲ. ಇದಲ್ಲದೆ ಅವರು ಅವಿಶ್ವಾಸಿಗಳೊಂದಿಗಿನ ಎಲ್ಲಾ ಸಂಪರ್ಕಗಳನ್ನು ಕಡಿದುಕೊಳ್ಳಬೇಕು ಎಂಬದು ಇದರ ಅರ್ಥವಲ್ಲ (1 ಕೊರಿಂಥ 5:9-10). ಪೌಲನೇ

ಅವಿಶ್ವಾಸಿಗಳನ್ನು ಯೇಸು ಕ್ರಿಸ್ತನಿಗಾಗಿ ಗೆಲ್ಲುವ ಸಲುವಾಗಿ ಅವರ ಸಹವಾಸದಲ್ಲಿದ್ದನು (1 ಕೊರಿಂಥ 9:19-23. ಮತ್ತಾಯ 11:19 ರೊಂದಿಗೆ ಹೋಲಿಸಿ ನೋಡಿರಿ). ಆದರೆ ಇಲ್ಲಿ ಅವಿಶ್ವಾಸಿಗಳೊಂದಿಗೆ ಹತ್ತಿರದ ಅನ್ಯೋನ್ಯತೆ ಮತ್ತು ಹುದುವಾದ ಗುರಿಗಳನ್ನು ಅಂದರೆ ಸತ್ಯವೇದದ ತತ್ವಗಳೊಂದಿಗೆ ರಾಜಿಕೊಳ್ಳುವಂಥ ಸಂಬಂಧವನ್ನು ಅಥವಾ ಯೇಸು ಕ್ರಿಸ್ತನೊಂದಿಗೆ ವಿಶ್ವಾಸಿಗಳಿಗಿರುವ ಅನ್ಯೋನ್ಯತೆಗೆ ತೊಂದರೆಪಡಿಸುವ ಕಾರ್ಯಗಳನ್ನು ನಿಷೇಧಿಸಿದ್ದಾನೆ. ಈ ತತ್ವಕ್ಕೆ ವಿರುದ್ಧವಾಗಿ ಯಾವ ವಿಶ್ವಾಸಿಯಾದರೂ ನಡೆದುಕೊಂಡರೆ ಅವನು ತೊಂದರೆಯನ್ನು ಆಹ್ವಾನಿಸುವವನಾಗಿದ್ದಾನೆ. ವಿಶ್ವಾಸಿಗಳು ಅವಿಶ್ವಾಸಿಗಳೊಂದಿಗೆ ಸೇರುವದು ಎಷ್ಟು ಮೂರ್ಖತನವಾಗಿದೆ ಮತ್ತು ತಪ್ಪಾಗಿದೆ ಎಂಬದನ್ನು ತೋರಿಸಲು ಪೌಲನು 14-16 ವಚನಗಳಲ್ಲಿ ಪೌಲನು ಐದು ಪ್ರಶ್ನೆಗಳನ್ನು ಕೇಳಿದ್ದಾನೆ. ಕಾರ್ಯಗಳು ಮತ್ತು ವ್ಯಕ್ತಿಗಳು ತಮ್ಮಲ್ಲಿ ಹುದುವಾದ ವಿಷಯಗಳು ಇಲ್ಲದಿರುವಾಗ ಸಮಾನತೆ ಇರುವ ಹಾಗೆ ನಡೆದುಕೊಳ್ಳಬಾರದು. ತನ್ನ ಜನರು ಎಲ್ಲಾ ರೀತಿಯ ದುಷ್ಟತನ ಮತ್ತು ದುಷ್ಟರಿಂದ ದೂರವಿರಬೇಕು ಎಂಬದು ದೇವರು ಕೊಟ್ಟಿರುವ ಆಜ್ಞೆಯಾಗಿದೆ (ವ 17). **15**

**6:15** *“ಬೆಳಕು”*– ವಿಶ್ವಾಸಿಗಳು ಬೆಳಕಿನಲ್ಲಿದ್ದಾರೆ, ಬೆಳಕನ್ನು ಪ್ರೀತಿಸುತ್ತಾರೆ ಮತ್ತು ಬೆಳಕಿನ ಮಕ್ಕಳಾಗಿದ್ದಾರೆ (ಮತ್ತಾಯ 5:14; ಯೋಹಾನ 3:21; 8:12; ಎಫೆ 5:8; 1 ಥೆಸ 5:5). ಅವಿಶ್ವಾಸಿಗಳ ಪರಿಸ್ಥಿತಿಯು ಇವೆಲ್ಲವುಗಳಿಗೆ ವಿರುದ್ಧವಾಗಿರುತ್ತದೆ (ಯೋಹಾನ 3:19; ಎಫೆ 6:12; 1 ಯೋಹಾನ 2:9,11). ಹೀಗಿರುವಾಗ ಅವರು ಇಂಥ ಕಾರ್ಯಗಳಲ್ಲಿ ಭಾಗಿಯಾಗಬೇಕೇ?

*“ಬೆಲಿಯಲ್”*– ಈ ಹೆಸರು ಇಬ್ರಿಯ ಪದದಿಂದ ಬಂದಿದ್ದು ಅರ್ಹತೆಯಿಲ್ಲದವನು ಮತ್ತು ದುಷ್ಟನು ಎಂಬದು ಇದರ ಅರ್ಥವಾಗಿದೆ. ಪೌಲನು ಈ ಹೆಸರನ್ನು ಸೈತಾನನಿಗೆ ಉಪಯೋಗಿಸಿದ್ದಾನೆ. ವಿಶ್ವಾಸಿಗಳು ಯೇಸು ಕ್ರಿಸ್ತನಿಗೆ ಸೇರಿದ್ದಾರೆ, ಅವಿಶ್ವಾಸಿಗಳು ಸೈತಾನನಿಗೆ ಸೇರಿದ್ದಾರೆ (ಎಫೆ 2:2; ಯೋಹಾನ 8:44). ಹೀಗಿರುವಾಗ ವಿಶ್ವಾಸಿಗಳು ಅವಿಶ್ವಾಸಿಗಳೊಂದಿಗೆ ಸೇರುವದರ ಬಗ್ಗೆ ಕನಸು ಕಾಣುವದಾದರೂ ಹೇಗೆ? **16**

**6:16** ವಿಶ್ವಾಸಿಗಳು ದೇವರ ಆಲಯವಾಗಿದ್ದಾರೆ (1 ಕೊರಿಂಥ 3:16; 6:19; ಎಫೆ 2:21-22). ಅವಿಶ್ವಾಸಿಗಳು ನಿಜವಾದ ವಿಗ್ರಹಗಳನ್ನು ಅಥವಾ ಮನಸ್ಸಿನಲ್ಲಿ ವಿಗ್ರಹಗಳನ್ನು ಆರಾಧಿಸುವವರಾಗಿದ್ದಾರೆ (ಎಫೆ 5:5) ಅಥವಾ ತಮ್ಮನ್ನೇ ವಿಗ್ರಹಗಳನ್ನಾಗಿ

ಮಾಡಿಕೊಳ್ಳುತ್ತಾರೆ. ಹೀಗಿರುವಾಗ ಸಂಪೂರ್ಣವಾದ ವ್ಯತ್ಯಾಸವಿರುವ ಇಬ್ಬರಿಬ್ಬರ ನಡುವೆ ಹೊಂದಾಣಿಕೆಯಿರಲು ಹೇಗೆ ಸಾಧ್ಯ? ದೇವರ ಆಲಯವಾಗಿದ್ದೇವೆ ಎಂಬ ಅರ್ಥವನ್ನು ವಿವರಿಸಲು ಪೌಲನು ಹಳೆಯ ಒಡಂಬಡಿಕೆಯ ಕೆಲವು ವಚನಗಳನ್ನು ಉಪಯೋಗಿಸಿದ್ದಾನೆ – ಯಾಜಕ 26:11-12; ಯೆರೆ 32:38; ಯೆಹೆಜ್ಕೇಲ 37:27. **17-18**

**6:17-18** ಈ ಭಾಗಕ್ಕೆ ಯುಕ್ತವಾದ ಮುಕ್ತಾಯವನ್ನು ಕೊಡುವ ಸಲುವಾಗಿ ಪೌಲನು ಹಳೆಯ ಒಡಂಬಡಿಕೆಯ ವಚನಗಳನ್ನು ಸೂಚಿಸಿದ್ದಾನೆ. ಅವನು ನಿರ್ದಿಷ್ಟವಾಗಿ ಯಾವ ಒಂದು ವಚನವನ್ನೂ ತಿಳಿಸಿಲ್ಲ ಬದಲಾಗಿ ಯೆಶಾಯ 52:11-12; 2 ಸಮು 7:14; ಯೆರೆ 31:9; ಯೆಶಾಯ 43:6 ವಚನಗಳು ಆತನ ಮನಸ್ಸಿನಲ್ಲಿದ್ದವು ಅನ್ನಿಸುತ್ತದೆ. ಸಂಪೂರ್ಣವಾಗಿ ಪರಿಶುದ್ಧ ಜನರಾಗಿರಲು ಬಯಸುವವರ ಎದುರಿನಲ್ಲಿ ಆತನು ಇಟ್ಟಿರುವ ಮಹದಾದ ಸಂಗತಿಗಳನ್ನು ನೋಡಿರಿ. ಅವರು ಲೋಕದ ಅನ್ಯೋನ್ಯತೆ ಮತ್ತು ಸಂತೋಷಗಳನ್ನು ಕಳೆದುಕೊಳ್ಳುತ್ತಾರೆ ಆದರೆ ಸರ್ವಶಕ್ತನಾದ ದೇವರ ಅನ್ಯೋನ್ಯತೆಯನ್ನು ಪಡೆದುಕೊಳ್ಳುತ್ತಾರೆ. ಅನೇಕ ಜನರು ಎರಡನ್ನೂ ಹೊಂದಲು ಬಯಸುತ್ತಾರೆ ಆದರೆ ಅದು ಅಸಾಧ್ಯ (ಯಾಕೋಬ 4:4).

# 7 1

**7:1** ದೇವರ ಮಹದಾದ ವಾಗ್ದಾನಗಳು ನಾವು ಅವುಗಳನ್ನು ಕೇಳುವ ಮೊದಲೇ ಇದ್ದೇವು ಎಂಬ ರೀತಿಯಲ್ಲಿ ನಮಗೆ ಅನ್ನಿಸಬಾರದು. ದೇವರು ನಮಗೆ ತನ್ನ ವಾಕ್ಯವನ್ನು ಕೊಡುತ್ತಾನೆ ಮತ್ತು ತನ್ನ ಕೃಪೆಯನ್ನು ತೋರಿಸುತ್ತಾನೆ ಯಾಕಂದರೆ ನಾವು ಅವುಗಳಿಗೆ ವಿಧೇಯರಾಗಬೇಕು ಮತ್ತು ಪರಿಶುದ್ಧರಾಗಬೇಕು ಹಾಗೂ ಆತನು ಬಯಸುವಂತೆಯೇ ಪ್ರತ್ಯೇಕಿಸಲ್ಪಟ್ಟವರು ಮತ್ತು ಸಂತೋಷವುಳ್ಳ ಜನರಾಗಬೇಕು. ರೋಮಾ 12:1-2; 1 ಕೊರಿಂಥ 15:58; ಎಫೆ 4:1; ಕೊಲೊ 3:1; ತೀತ 2:11-14 ರೊಂದಿಗೆ ಹೋಲಿಸಿ ನೋಡಿರಿ. ಇಲ್ಲಿ ಯೇಸು ಕ್ರಿಸ್ತನ ರಾಯಭಾರಿಯು ನಮಗೆ ಹೇಳುವದೇನೆಂದರೆ ನಾವು ಪರಿಶುದ್ಧತೆಯಲ್ಲಿ ಸಂಪೂರ್ಣರಾಗುವ ಗುರಿಯ ಬಗ್ಗೆ ಯೋಚಿಸಬೇಕು (ಹಾಗೆಯೇ 13:9,11 ನೋಡಿರಿ. "ಪರಿಪೂರ್ಣತೆಯ" ಬಗ್ಗೆ ಮತ್ತಾಯ 5:48 ನೋಟ್ ನೋಡಿರಿ). ಆತನು ಖಂಡಿತವಾಗಿಯೂ ನಾವು ಅರ್ಧ ಅಥವಾ ಮುಕ್ಕಾಲು ಭಾಗ ಮಾತ್ರವೇ ಪರಿಶುದ್ಧರಾಗಿರಬೇಕೆಂದು ಆತನು ಹೇಳಿಲ್ಲ – ಯಾಕಂದರೆ ಅದು ಅರ್ಧ ಅಥವಾ ಮುಕ್ಕಾಲು ಭಾಗ ಅಪರಿಶುದ್ಧತೆಯನ್ನು ಪ್ರೋತ್ಸಾಹಪಡಿಸುವದಕ್ಕೆ

ಸಮಾನವಾಗಿದೆ. ಯೇಸು ಕ್ರಿಸ್ತನು ಈ ಲೋಕದ ಮೇಲೆ ಜೀವಿಸಿದ ಹಾಗೆಯೇ ಪರಿಶುದ್ಧರಾಗಿ ಜೀವಿಸಬೇಕೆಂಬದು ನಮ್ಮ ಗುರಿಯಾಗಿದೆ. ಸಂಪೂರ್ಣತೆಯ ಗುರಿಯನ್ನು ಹೊಂದಿರುವದು ಮತ್ತು ಅದನ್ನು ಸಾಧಿಸುವದು ಖಂಡಿತವಾಗಿಯೂ ಸಮವಲ್ಲ. ಆತ್ಮೀಕವಾಗಿ ಹೇಳುವದಾದರೆ, ಲೋಕವು ಮಲಿನಗೊಂಡಿರುವ ಸ್ಥಳವಾಗಿದೆ ಮತ್ತು ಅದರೊಳಗೆ ಜೀವಿಸುವ ವಿಶ್ವಾಸಿಗಳು ಸುಲಭವಾಗಿ ಮಲಿನಗೊಳ್ಳುವ ಸಾಧ್ಯತೆಯಿದೆ. ಯೋಹಾನ 13:10 ನೋಡಿರಿ. ಹಾಗೆಯೇ ವಿಶ್ವಾಸಿಗಳು ಪಾಪದ ಸ್ವಭಾವವುಳ್ಳವರಾಗಿದ್ದರೆ ಅದು ಸುಲಭವಾಗಿ ಅವರಿಗೆ ಉರುಳಾಗಿರುತ್ತದೆ. ರೋಮಾ 7:18; ಗಲಾ 5:16-17; 1 ಯೋಹಾನ 1:8 ನೋಡಿರಿ. "ಪರಿಪೂರ್ಣತೆ" ಮುಂದುವರೆಯುವ ವಿಧಾನವನ್ನು ಸೂಚಿಸುತ್ತದೆ. ಈಗ ನಡೆಯುತ್ತಿರುವ ಪರಿಪೂರ್ಣತೆಯ ಕಾರ್ಯವನ್ನು ಒಂದು ಕ್ಷಣದಲ್ಲಿ ಮಾಡಲು ಆಗುವದಿಲ್ಲ. ಪವಿತ್ರತೆಯನ್ನು ಸಿದ್ಧಿಗೆ ತರುವ ಕಾರ್ಯವನ್ನು ವಿಶ್ವಾಸಿಗಳು ತಾವೇ ಮಾಡುವದನ್ನು ಈ ವಾಕ್ಯದಲ್ಲಿ ನೋಡಿರಿ – ಅದು ಯಾವುದೋ ಅಭ್ಯಾಸವಾಗಿದ್ದು ಅವರು ನಿಷ್ಕ್ರಿಯವಾಗಿ ಅದನ್ನು ಹೊಂದಿಲ್ಲ. 1 ಕೊರಿಂಥ 9:27; ಕೊಲೊ 3:5; 1 ಯೋಹಾನ 3:3 ರೊಂದಿಗೆ ಹೋಲಿಸಿ ನೋಡಿರಿ. ಖಂಡಿತವಾಗಿಯೂ ಅಂಥ ಕಾರ್ಯವನ್ನು ನಮ್ಮ ಸ್ವಂತ ಬಲದಿಂದ ಮಾಡಲು ಆಗುವದಿಲ್ಲ – ರೋಮಾ 8:13; ಗಲಾ 5:16. ಯೋಹಾನ 17:17-19 ರಲ್ಲಿ ಶುದ್ಧೀಕರಣದ ಮತ್ತು ಯಾಜಕ 20:7 ರಲ್ಲಿ "ಪರಿಶುದ್ಧತೆಯ" ನೋಟ್ ನೋಡಿರಿ.

*"ದೇವರ ಭಯ"*– 5:11; 1 ಪೇತ್ರ 1:17 ನೋಡಿರಿ. ದೇವರ ಭಯವು ನಮ್ಮೊಳಗೆ ಪವಿತ್ರತೆಯನ್ನು ಸಿದ್ಧಿಗೆ ತರುವ ಕಾರ್ಯದಲ್ಲಿ ಬಹಳ ಪ್ರಾಮುಖ್ಯವಾಗಿದೆ (ಯೋಬ 28:28; ಕೀರ್ತನೆ 34:11-14). **2-3**

**7:2-3** 6:11-13 ನೋಡಿರಿ. **4**

**7:4** *"ಸಂತೋಷ"*– ಈ ಸಂದರ್ಭದಲ್ಲಿ ಅವನ ಸಂತೋಷಕ್ಕೆ ಕಾರಣವೇನೆಂದರೆ ಕೊರಿಂಥದಲ್ಲಿದ್ದ ವಿಶ್ವಾಸಿಗಳು ನಂಬಿಕೆಯಲ್ಲಿ ದೃಢವಾಗಿದ್ದರು ಮತ್ತು ದೇವರ ವಾಕ್ಯಗಳಿಗೆ ವಿಧೇಯರಾಗಲು ಪ್ರಯತ್ನಿಸುತ್ತಾ ಇದ್ದರು ಎಂಬ ವಿಷಯವಾಗಿದೆ. **5**

**7:5** ಪೌಲನು, ಪ್ರಸಿದ್ಧ ಅಪೊಸ್ತಲನಾಗಿದ್ದರೂ ಕಲಹ, ಸಂಕಟ ಮತ್ತು ಭಯದ ನಿಮಿತ್ತ ಉಪಶಮನವಿಲ್ಲದೆ ಇದ್ದನು (2:13). **6**

**7:6** 1:3-4 ನೋಡಿರಿ. ತೀತನು ಕೊರಿಂಥಕ್ಕೆ ಬಂದಿದ್ದನು ಮತ್ತು ಮಕೆದೊನ್ಯದ ಯಾವುದೋ ಭಾಗದಲ್ಲಿ ಪೌಲನ ಬಳಿಗೆ ಬಂದನು. **8**

**7:8** 2:3-4 ನೋಡಿರಿ. ಅವರು ಆತ್ಮೀಕ ಅಪಾಯದಲ್ಲಿದ್ದಾರೆ ಎಂಬದನ್ನು ಅವನು ತಿಳಿದಿದ್ದರಿಂದ ಅವರಿಗೆ ಬಹಳ ಗಂಭೀರವಾದ, ಅವರನ್ನು ನೋಯಿಸುವಂಥ ಪತ್ರವನ್ನು ಬರೆದನು. ಇದಕ್ಕೆ ಕಾರಣ ಅವನು ಅವರನ್ನು ಪ್ರೀತಿಸುತ್ತಾ ಇದ್ದನು ಮತ್ತು ಅವರು ದೇವರ ಸತ್ಯದಲ್ಲಿ ದೃಢವಾಗಿ ನಿಲ್ಲುವದನ್ನು ನೋಡಲು ಬಯಸಿದನು. ಪ್ರೀತಿ ದುರ್ಬಲ ಮತ್ತು ಭಾವುಕವಲ್ಲ. ಇತರರು ಮಾತುಗಳಿಂದ ತಮ್ಮನ್ನು ಹಾಳುಮಾಡಿಕೊಳ್ಳಲು ಪ್ರೀತಿ ಅನುಮತಿಸುವದಿಲ್ಲ. **9**

**7:9** ಪೌಲನ ಪತ್ರಿಕೆಯಿಂದ ಅವರಿಗಾದ ನೋವು ಮತ್ತು ದುಃಖ ಒಳ್ಳೆಯ ಫಲಿತಾಂಶವನ್ನೇ ನೀಡಿತು – ಅವರು ಪಶ್ಚಾತ್ತಾಪಪಟ್ಟರು. ಅವರು ಕೆಲವು ದುಷ್ಟತನಗಳನ್ನು ಸಾಯಿಸಿದರು, ತಪ್ಪಾದ ಮಾರ್ಗಗಳನ್ನು ತ್ಯಜಿಸಿದರು ಮತ್ತು ಹಿಂದೆಂದಿಗಿಂತಲೂ ಹೆಚ್ಚಾಗಿ ಪೂರ್ಣಹೃದಯದಿಂದ ದೇವರ ಕಡೆಗೆ ತಿರುಗಿಕೊಂಡರು. **10**

**7:10** *"ದೇವರಚಿತ್ತಾನುಸಾರ"*– ದುಃಖವು ದೇವರು ಉಂಟುಮಾಡುವ ದುಃಖವಾಗಿದೆ, ಆ ದುಃಖವು ದೇವರಾತ್ಮನಿಗೆ ದುಃಖವನ್ನು ಉಂಟುಮಾಡುವದಾಗಿದೆ (ಎಫೆ 4:30). ಇಂಥ ದುಃಖಕ್ಕೆ ಒಳಗಾಗುವವರು ಆತನನ್ನು ದುಃಖಪಡಿಸುವ ಮತ್ತು ನೋಯಿಸುವಂಥ ಕಾರ್ಯಗಳನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಳ್ಳುತ್ತಾರೆ. "ಲೋಕರೀತಿಯಾದ" ದುಃಖವು ದೇವರಿಗೆ ಸಂಬಂಧಪಟ್ಟಿಲ್ಲ, ಬದಲಾಗಿ ಜನರಿಗೆ ಸಂಬಂಧಪಟ್ಟದ್ದಾಗಿದೆ. ಅದಕ್ಕೆ ಕಾರಣ ನಷ್ಟ ಅಥವಾ ನಿರಾಸೆಯಾಗಿರುವದು ಅಥವಾ ಒಬ್ಬನು ತನ್ನ ಮಾರ್ಗದಲ್ಲಿ ಜಯಗಳಿಸಲಾಗದೆ ವಿಫಲನಾಗಿರಬಹುದು ಅಥವಾ ವೇದನೆ ಅಥವಾ ಒಬ್ಬನು ಯಾವುದೋ ಒಂದು ಪಾಪದಲ್ಲಿ ಬಿದ್ದು ಅದರಲ್ಲಿಯೇ ಮುಂದುವರೆಯಲು ಬಯಸುತ್ತಾ ಇರಬಹುದು, ಇತ್ಯಾದಿ. ಕೆಲವೊಮ್ಮೆ ಅದರಿಂದ ಪರಿತಾಪ ಉಂಟಾಗುತ್ತದೆ ಆದರೆ ನಿಜವಾದ ಮಾನಸಾಂತರ ಉಂಟಾಗುವದಿಲ್ಲ (ಮತ್ತಾಯ 27:3-5 ರೊಂದಿಗೆ ಹೋಲಿಸಿ ನೋಡಿರಿ). ಲೋಕರೀತಿಯ ದುಃಖವುಳ್ಳವರು ಪಾಪ ಮಾಡುತ್ತಲೇ ಮುಂದೆ ಸಾಗುತ್ತಾರೆ. ಲೋಕದ ಕಾರ್ಯಗಳು ಮರಣಕ್ಕೆ ಅಂದರೆ ಆತ್ಮೀಕ ಮರಣಕ್ಕೆ ನಡೆಸುವ ಹಾಗೆ ಇದು ನಮ್ಮನ್ನು ಮರಣಕ್ಕೆ ನಡೆಸುತ್ತದೆ. **11**

**7:11** ದೇವರಚಿತ್ತಾನುಸಾರವಾದ ದುಃಖ ಮತ್ತು ಮಾನಸಾಂತರದ ಕಾರ್ಯವು ಒಟ್ಟಾಗಿ ಹೇಗೆ ಕಾರ್ಯಮಾಡುತ್ತದೆ ಎಂಬದನ್ನು ನೋಡಿರಿ. "ಆ ಕಾರ್ಯಕ್ಕೆ ಸೇರಿದವರಲ್ಲ" ಎಂಬದು 2:5-7 ವಾಕ್ಯಗಳನ್ನು ಸೂಚಿಸುತ್ತದೆ. **12**

**7:12** 2:9 ನೋಡಿರಿ. “ನಮಗೆ ವಿಧೇಯರಾಗಿದ್ದೀರೋ” ಅಂದರೆ ದೇವರ ಸತ್ಯಕ್ಕೂ ವಿಧೇಯರಾಗಿರಬೇಕು ಎಂಬದಾಗಿದೆ. ಇದು ಪೌಲನಿಗೆ ಬಹಳ ಪ್ರಾಮುಖ್ಯವಾದ ವಿಷಯವಾಗಿತ್ತು. **13-16**

**7:13-16** ವಿಶ್ವಾಸಿಗಳು ಒಬ್ಬರನ್ನೊಬ್ಬರು ಹೇಗೆ ಸಂತೈಸಬಹುದು, ಪ್ರೋತ್ಸಾಹಪಡೆದುಕೊಳ್ಳಬಹುದು ಮತ್ತು ಒಬ್ಬರಿಂದ ಒಬ್ಬರು ಹೇಗೆ ಸಂತೋಷಿಸಬಹುದು ಎಂಬದಕ್ಕೆ ಈ ವಚನಗಳು ನಿದರ್ಶನವಾಗಿವೆ. ರಕ್ಷಣೆಯ ಮಾರ್ಗಕ್ಕೆ ಬಂದವರು ಸತ್ಯದನುಸಾರ ನಡೆಯುವಾಗ ಅವರನ್ನು ಕರ್ತನಿಗಾಗಿ ಗೆದ್ದವರ ಹೃದಯದಲ್ಲಾಗುವ ಸಂತೋಷವನ್ನೂ ಅವು ತೋರಿಸುತ್ತವೆ – 3 ಯೋಹಾನ 3,4.

# 8 1-5

**8:1-5** ಮಕೆದೊನ್ಯದಲ್ಲಿದ್ದ ಸಭೆಗಳು (ಫಿಲಿಪ್ಪಿ ಮತ್ತು ಥೆಸಲೊನಿಕದಲ್ಲಿರುವ ಸಭೆಗಳೂ ಸೇರಿವೆ) ಕೊಡುವ ಕೃಪೆಯನ್ನು ಅದ್ಭುತವಾಗಿ ವ್ಯಕ್ತಪಡಿಸುತ್ತಾ ಇದ್ದವು – ದೇವರು ಆ ಸಭೆಗಳಿಗೆ ಈ “ಕೃಪೆಯನ್ನು” ಕೊಟ್ಟಿದ್ದನು (ವ 1). ಅಲ್ಲಿದ್ದ ವಿಶ್ವಾಸಿಗಳೆಲ್ಲರು ಬಹಳ ಬಡವರಾಗಿದ್ದರು ಮತ್ತು ಹಲವಾರು ಗಂಭೀರವಾದ ಹಿಂಸೆಗಳನ್ನು ಎದುರಿಸುತ್ತಾ ಇದ್ದರು. ಅವರು “ತಮ್ಮಲ್ಲಿ ಸಮೃದ್ಧವಾದ ಸಂತೋಷವಿದ್ದರಿಂದ” ಕೊಡುತ್ತಾ ಇದ್ದರು. ಪೌಲನು ಅವರಿಗೆ ಕೊಡಬೇಕೆಂದು ಒತ್ತಾಯಪಡಿಸಿರಲಿಲ್ಲ. ಅವರು ತಾವಾಗಿಯೇ ಆಸಕ್ತಿಯಿಂದ ಕೊಡಲು ಅನುಮತಿಸುವಂತೆ ಅವನನ್ನು ಬೇಡಿಕೊಂಡಿದ್ದರು. ಯೇಸು ಕ್ರಿಸ್ತನಿಗೆ ಮತ್ತು ಯೇಸು ಕ್ರಿಸ್ತನ ಜನರಿಗೆ ಕೊಡುವದು ನಿಜವಾಗಿಯೂ “ಸೌಭಾಗ್ಯವಾಗಿದೆಯೇ” ಹೊರತು ಹೊರೆಯಲ್ಲ ಎಂಬದನ್ನು ಅವರು ಬಲ್ಲವರಾಗಿದ್ದರು. ಈ ದೇಶದಲ್ಲಿ ಮತ್ತು ಲೋಕದಲ್ಲಿರುವ ಎಲ್ಲಾ ಸಭೆಗಳು ಮತ್ತು ವಿಶ್ವಾಸಿಗಳು ಈ ಸತ್ಯವನ್ನು ಅರಿತುಕೊಳ್ಳುವಾಗ ಹಾಗೂ ಇದರನುಸಾರ ನಡೆದುಕೊಳ್ಳುವಾಗ ಸಭೆಗಳಲ್ಲಿ ಹಾಗೂ ಲೋಕದಲ್ಲಿರುವ ದೇಶಗಳಲ್ಲಿ ಅದ್ಭುತವಾದ ಆಶೀರ್ವಾದಗಳು ನೆಲೆಯಾಗಿರುತ್ತವೆ. **1**

**8:1** ಈ ಅಧ್ಯಾಯ ಮತ್ತು ಮುಂದಿನ ಅಧ್ಯಾಯವು ಯೆರೂಸಲೇಮಿನಲ್ಲಿದ್ದ ಬಡವರು ಮತ್ತು ಅಗತ್ಯತೆಯಲ್ಲಿರುವವರಿಗೆ ಕೊಡಲು ದ್ರವ್ಯಗಳನ್ನು ಕೂಡಿಸಿದ್ದರ ಬಗ್ಗೆ ಮಾತನಾಡುತ್ತವೆ. 1 ಕೊರಿಂಥ 16:1-4 ನೋಡೀರಿ. ಆದರೆ ಸ್ಥಳೀಯವಾದ ಈ ವಿಷಯವನ್ನು ಬರೆಯುವದರಲ್ಲಿ ಪೌಲನು ಹುದುವಾಗಿ ಕೊಡುವದರ ಕುರಿತಾದ ಕೆಲವು ಅದ್ಭುತವಾದ ತತ್ವಗಳನ್ನು ಬರೆದಿದ್ದಾನೆ.

*"ಮಕೆದೋನ್ಯದ ಸಭೆಗಳಲ್ಲಿ ದೇವರ ಕೃಪೆಯು ತೋರಿದ ಬಗೆಯನ್ನು ನಿಮಗೆ ತಿಳಿಸುತ್ತೇವೆ"*– "ನೀವು ಬುದ್ದಿ ಕಲಿಯಬೇಕೆಂದು ನಿಮಗೆ ತಿಳಿಸುತ್ತೇವೆ" ಎಂದು ಕೆಜೆವಿ ಆವೃತ್ತಿಯಲ್ಲಿ ಬರೆಯಲಾಗಿದೆ, ಇದು 400 ವರ್ಷಗಳ ಹಿಂದಿನ ಓದುಗರಿಗೆ ಬಹಳ ಸ್ಪಷ್ಟವಾಗಿ ಅರ್ಥವಾಗುವ ವಿಷಯವಾಗಿತ್ತು, ಆದರೆ ಆಗಿನ ಕಾಲದ ಆಂಗ್ಲದ ಪರಿಚಯವಿಲ್ಲದಿರುವ ಈಗಿನ ಜನರಿಗೆ ಅರ್ಥವಾಗುವದಿಲ್ಲ. ಕೆಜೆವಿ ಆವೃತ್ತಿಯ 2 ಕೊರಿಂಥ ಪತ್ರಿಕೆಯಲ್ಲಿ ಹೀಗೆ ಹಲವಾರು ವಾಕ್ಯಗಳಿಗೆ ಅವುಗಳನ್ನು ಸಾಮಾನ್ಯ ಓದುಗನು ಅರ್ಥಮಾಡಿಕೊಳ್ಳಲು ಆಗುವದಿಲ್ಲ. ನಾವು ಹೊರ ತಂದಿರುವ ಸುಧಾರಣೆಯ ಆವೃತ್ತಿಯು ಅರ್ಥಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಹಾಯ ಮಾಡುತ್ತವೆ ಎಂದು ನಿರೀಕ್ಷಿಸುತ್ತೇವೆ.
**5**

**8:5** ಅವರು ಪೌಲನ ನಿರೀಕ್ಷೆಗೂ ಮೀರಿದ ರೀತಿಯಲ್ಲಿ ನಡೆದುಕೊಳ್ಳುತ್ತಾ ಇದ್ದರು. ಅವರು ಹಣ ಕೊಟ್ಟಿದ್ದು ಮಾತ್ರವಲ್ಲ, ಬಹಳ ಪ್ರಾಮುಖ್ಯವಾಗಿ, ತಮ್ಮನ್ನೇ ಸಂಪೂರ್ಣವಾಗಿ ದೇವರಿಗೆ ಒಪ್ಪಿಸಿದರು ಮತ್ತು ಕರ್ತನ ಸೇವಕರು ಯಾವುದೇ ಕೆಲಸವನ್ನು ಮಾಡಲು ಹೇಳಿದರೂ ಮಾಡುತ್ತಾ ಇದ್ದರು. ತಮ್ಮನ್ನು ಮತ್ತು ತಮಗಿರುವದನ್ನು ದೇವರಿಗೆ ಕೊಡಲು ಅವರು ಬಹಳ ಸಂತೋಷವುಳ್ಳವರಾಗಿದ್ದರು. ರೋಮಾ 12:1-2 ರೊಂದಿಗೆ ಹೋಲಿಸಿ ನೋಡಿರಿ. **6**

**8:6** ತೀತನು ಕೊರಿಂಥಕ್ಕೆ ಹೋಗಿದ್ದನು (7:6). ಈಗ ಪೌಲನು ಅವನನ್ನು ಮತ್ತೊಮ್ಮೆ ಕಳುಹಿಸುವ ಬಗ್ಗೆ ಯೋಚಿಸುತ್ತಾ ಇದ್ದಾನೆ (ವ 16-18).

*"ತೀರಿಸಬೇಕು"*– ಕೊರಿಂಥದವರು ತಾವು ಕೊಡುವದಾಗಿ ಹೇಳಿದ ಹಣವನ್ನು ಪೂರ್ತಿಯಾಗಿ ಕೊಟ್ಟಿರಲಿಲ್ಲ ಅಥವಾ ಅವರಿಂದ ಸುಲಭವಾಗಿ ಕೊಡಲು ಸಾಧ್ಯವಿದ್ದ ಹಣವನ್ನು ಕೊಟ್ಟಿಲ್ಲ ಎಂಬದಾಗಿ ಇದು ಸೂಚಿಸುತ್ತದೆ (9:5). **7**

**- 8:7** 1 ಕೊರಿಂಥ 1:5-7. **8**

**8:8** *"ಆಜ್ಞಾರೂಪವಾಗಿ ಹೇಳದೆ"*– ಕೊಡಬೇಕಂಬ ಬಯಕೆಯು ಹೃದಯದಿಂದ ಬರಬೇಕು ಎಂಬದನ್ನು ಅವನು ಚೆನ್ನಾಗಿ ಬಲ್ಲವನಾಗಿದ್ದನು. ದೇವರಿಗೆ ಒತ್ತಾಯದಿಂದ ಅಥವಾ ಮನಸ್ಸಿಲ್ಲದೆ ಕೊಡುವಂಥದ್ದು ಬೇಡ (9:7). ಪ್ರೀತಿಯಿಂದ ಕೊಡುವದಾದರೆ ಮಾತ್ರ ಆತನಿಗೆ ಅದು ಮೆಚ್ಚಿಕೆಯಾಗಿರುತ್ತದೆ. ಕೊಡುವದು ಒಬ್ಬನಿಗೆ ಯೇಸು ಕ್ರಿಸ್ತನ ಮೇಲೆ

ಯಥಾರ್ಥವಾದ ಪ್ರೀತಿ ಇದೆಯೋ ಇಲ್ಲವೋ ಎಂಬದನ್ನು ತಿಳಿಯಲು ಮಾಡುವ ಪರೀಕ್ಷೆಯಾಗಿದೆ. ಇದು ಯಾವಾಗಲೂ ಸತ್ಯವಾಗಿದೆ. ಯೇಸು ಕ್ರಿಸ್ತನಿಗೆ ಕೊಡದೆ ಇರುವ ವ್ಯಕ್ತಿ, ಏನೇ ಯೋಚಿಸಲಿ ಅಥವಾ ಏನೇ ಹೇಳಲಿ ಯೇಸು ಕ್ರಿಸ್ತನನ್ನು ಪ್ರೀತಿಸದವನಾಗಿದ್ದಾನೆ. ಪೌಲನು, ಕೊಡುವದರ ವಿಷಯದಲ್ಲಿ ಆಜ್ಞೆಗಳನ್ನು ಹೊರಡಿಸುವ ಬದಲು, ಮಕೆದೊನ್ಯದವರ ಉದಾಹರಣೆಯನ್ನು ಅವರಿಗೆ ತಿಳಿಯಪಡಿಸಿದನು. 9ನೇ ವಚನದಲ್ಲಿ ಅವನು ಇನ್ನೂ ದೊಡ್ಡದಾದ ಉದಾಹರಣೆಯನ್ನು ತಿಳಿಸಿದ್ದಾನೆ. **9**

**8:9** ಕರ್ತನಾದ ಯೇಸು ಕ್ರಿಸ್ತನು ಅಳತೆಗೆ ತಕ್ಕಂತೆ ಪೂರ್ತಿಯಾಗಿ ಕೊಡುವ ಕೃಪೆಯನ್ನು ಹೊಂದಿದ್ದಾನೆ. ಪ್ರೀತಿಯಿಂದ ಆತನು ತನಗಿದ್ದ ಎಲ್ಲವನ್ನು ಕೊಟ್ಟನು. ಮತ್ತು ಆತನೇ ಎಲ್ಲಾ ವಿಶ್ವಾಸಿಗಳಿಗೆ ಮಾದರಿಯಾಗಿದ್ದಾನೆ.

*"ಆತನು ಐಶ್ವರ್ಯವಂತನಾಗಿದ್ದನು"*– ಯೋಹಾನ 1:1-3; 17:5; ಕೊಲೊ 1:16; ಇಬ್ರಿ 1:2.

*"ಆತನು ಬಡವನಾದನು"*– ಲೂಕ 2:7; ಮತ್ತಾಯ 8:20; 17:27; 27:46; ಫಿಲಿಪ್ಪಿ 2:6-8; ಯೆಶಾಯ 53:2-6. ಇದು "ನಿಮಗಾಗಿ" ಎಲ್ಲಾ ವಿಶ್ವಾಸಿಗಳಿಗಾಗಿ. ಯೇಸು ಕ್ರಿಸ್ತನು ನಮ್ಮನ್ನು ಪ್ರೀತಿಸಿದನು ಮತ್ತು ತನ್ನನ್ನೇ ನಮಗಾಗಿ ಅರ್ಪಿಸಿದನು – ಯೋಹಾನ 10:11-18; ಗಲಾ 2:20. ನಾವು "ಐಶ್ವರ್ಯವಂತರಾಗಬೇಕೆಂದು" ಆತನು ಬಯಸಿದನು – ಈಗ ಬ್ಯಾಂಕ್ ನಲ್ಲಿ ಹಣ ಇಲ್ಲದೆ ಇರಬಹುದು, ಆದರೆ ಮತ್ತಾಯ 19:28-29; ಯೋಹಾನ 14:2-3; ರೋಮಾ 8:17; 1 ಕೊರಿಂಥ 3:21-23; ಎಫೆ 1:3,7,8; 1 ಪೇತ್ರ 1:4; ಪ್ರಕ 21:7 ರಲ್ಲಿ ನೋಡಬಹುದಾದ ನಿಕ್ಷೇಪಗಳು ನಮ್ಮದಾಗಿವೆ. "ಆತನ ಬಡತನದಿಂದಲೇ" ಇವೆಲ್ಲವೂ ಸಾಧ್ಯವಾದವು – ಅಂದರೆ ಯೇಸು ಕ್ರಿಸ್ತನು ಪಾಪಿಗಳ ಸ್ಥಾನದಲ್ಲಿ ತನ್ನ ಪ್ರಾಣವನ್ನು ಕೊಡುವ ಸಲುವಾಗಿ ತನಗಿದ್ದ ಎಲ್ಲವನ್ನೂ ಕೊಡದೆ ಹೋಗಿದ್ದರೆ ರಕ್ಷಣೆಯೆಂಬ ನಿಕ್ಷೇಪವನ್ನು ಹೊಂದಲು ಯಾರಿಂದಲೂ ಆಗುತ್ತಾ ಇರಲಿಲ್ಲ. ಪ್ರೀತಿ ಮತ್ತು ಕೊಡುವ ಕೃಪೆಯ ವಿಷಯದಲ್ಲಿ, ಅಪೊಸ್ತಲರು ಯೇಸು ಕ್ರಿಸ್ತನ ಮಾದರಿಯನ್ನು ಅನುಸರಿಸಿದರು – 6:10; ಅಪೊ 3:6; ಮತ್ತಾಯ 19:27. ನಾವು ಅನುಸರಿಸುತ್ತಾ ಇದ್ದೇವೆಯೇ? **11-12**

**8:11-12** ಕೊಡುವದು ಒಬ್ಬನು ತನಗಿರುವದರಲ್ಲಿ ಕೊಡಬೇಕು (1 ಕೊರಿಂಥ 16:2).

ಬಡವನಿಂದ ಹೆಚ್ಚಾಗಿ ಕೊಡಲು ಆಗುವದಿಲ್ಲ, ಐಶ್ವರ್ಯವಂತನು ಕಡಿಮೆಯಾಗಿ ಕೊಡಬಾರದು. "ಸಮರ್ಪಕವಾಗಿರುವದು" (ವ 12) – ಮಾರ್ಕ 12:41-44 ನೋಡಿರಿ.

**13-15**

**8:13-15** ಇಲ್ಲಿ "ಸಮಾನತ್ವ" ಎಂಬದು ಪ್ರಮುಖ ಪದವಾಗಿದೆ. ವಿಶ್ವಾಸಿಗಳ ನಡುವೆ ಪರಸ್ಪರ ಹೊಂದಾಣಿಕೆಯ ಪ್ರೀತಿಯಿರಬೇಕು, ಯಾರಾದರೂ ಅಗತ್ಯತೆಯಲ್ಲಿರುವಾಗ ತಮ್ಮಲ್ಲಿರುವದನ್ನು ಹಂಚಿಕೊಳ್ಳುವ ಆಸಕ್ತಿ ಇರಬೇಕು. ಅಪೊ 2:44-45; 4:32-35 ರೊಂದಿಗೆ ಹೋಲಿಸಿ ನೋಡಿರಿ. ಹಾಗೆಯೇ 1 ಯೋಹಾನ 3:16-18 ನೋಡಿರಿ. ಮತ್ತೊಮ್ಮೆ ಕರ್ತನಾದ ಯೇಸು ಕ್ರಿಸ್ತನೇ ಇದಕ್ಕೆ ದೊಡ್ಡ ಉದಾಹರಣೆಯಾಗಿದ್ದಾನೆ. ಆತನು ತನಗಿರುವದನ್ನೆಲ್ಲಾ ವಿಶ್ವಾಸಿಗಳೊಂದಿಗೆ ಹಂಚಿಕೊಳ್ಳುತ್ತಾನೆ. ಹೀಗಿರುವಾಗ ವಿಶ್ವಾಸಿಗಳು ತಮಗಿರುವದನ್ನೆಲ್ಲಾ ಆತನೊಂದಿಗೆ ಮತ್ತು ಇತರರೊಂದಿಗೆ ಯಾಕೆ ಹಂಚಿಕೊಳ್ಳಬಾರದು? ಅವರೆಲ್ಲರೂ ಯೇಸು ಕ್ರಿಸ್ತನಲ್ಲಿ ಒಂದೇ ಆಗಿರುವಾಗ ಕೆಲವರು ವಿಪರೀತವಾಗಿ ಐಶ್ವರ್ಯವಂತರಾಗಿರುವದು ಮತ್ತು ಕೆಲವರು ವಿಪರೀತವಾಗಿ ಬಡವರಾಗಿರುವದು ಯಾಕೆ? ಅನೇಕರು ಹತಾಶೆಯಲ್ಲಿರುವಾಗ ಕೆಲವರು ತಮ್ಮ ಹಣವನ್ನು ವ್ಯರ್ಥವಾದ ಕಾರ್ಯಗಳಿಗಾಗಿ ಬಳಸುವದು ಯಾಕೆ? ಇಸ್ರಾಯೇಲ್ ಜನರು ಅರಣ್ಯದಲ್ಲಿದ್ದಾಗ ದೇವರು ಸಮಾನತ್ವವಿರಬೇಕೆಂಬ ಕಾರಣಕ್ಕೆ ತಾನೇ ಎಲ್ಲವನ್ನೂ ಏರ್ಪಾಡು ಮಾಡಿದನು (ವ 15; ವಿಮೋ 16:18). ದೇವರು ಈಗ ವಿಶ್ವಾಸಿಗಳಿಗೆ ಒಳ್ಳೆಯ ವರಗಳನ್ನು ಕೊಡುವದು ಎಲ್ಲರಿಗೂ ಸಮಾನತ್ವವಿರಲಿ ಎಂಬದಕ್ಕೆ ಹೊರತು ಕೆಲವರು ಮಾತ್ರವೇ (ದುಬಾರಿ ಸೌಕರ್ಯಗಳಿಂದ) ಜೀವನದಲ್ಲಿ ಚೆನ್ನಾಗಿದ್ದು ಉಳಿದವರು ಹಸಿವೆಯಿಂದ ಬಳಲಬೇಕು ಎಂಬ ಕಾರಣಕ್ಕಾಗಿಯಲ್ಲ. ಆದರೆ ಈ ವಿಷಯಗಳಲ್ಲಿಯೂ ಯಾವುದೇ ಆಜ್ಞೆ ಇಲ್ಲ. ಇದು ಪ್ರೀತಿಯ ವಿಷಯವಾಗಿದೆ. ಕೊಡುವ ವಿಷಯದಲ್ಲಿ ಒತ್ತಾಯ ಮಾಡಬಾರದು. ಒಬ್ಬನ ಆಸ್ತಿ ಅವನ ಸ್ವಂತವಾಗಿದೆ ಅದನ್ನು ಅವನು ಕೊಡಬಹುದು ಅಥವಾ ಕೊಡದೆಯೂ ಇರಬಹುದು. ಆದರೆ ಅವನು ಬಹುಪಾಲು ತನ್ನಲ್ಲಿಯೇ ಇಟ್ಟುಕೊಂಡು ಕೊಂಚವನ್ನು ಕೊಡುವದಾದರೆ, ಅವನಿಗೆ ದೊಡ್ಡ ನಷ್ಟ ಎದುರಾಗುತ್ತದೆ ಮತ್ತು ಇತರರಿಗೆ ಶ್ರಮೆಗಳು ಎದುರಾಗುತ್ತವೆ, ಆದದರಿಂದ ಅವನು ಉದಾರವಾಗಿ ಕೊಟ್ಟರೆ ಇತರರು ಕಷ್ಟಪಡುವ ಅವಶ್ಯಕತೆ ಇರುವದಿಲ್ಲ.

**18**

**8:18** *“ಸಹೋದರ”*– ಈ ಸಹೋದರ ಮತ್ತು 22 ನೇ ವಚನದಲ್ಲಿ ಹೇಳಲಾಗಿರುವ ಸಹೋದರ ಯಾರು ಎಂಬದು ನಮಗೆ ಗೊತ್ತಿಲ್ಲ. **19**

**- 8:19** 1 ಕೊರಿಂಥ 16:3-4. **20-21**

**8:20-21** 12:16-18; 1 ಕೊರಿಂಥ 16:3 ನೋಡಿರಿ. ದೇವರ ಸೇವೆಗಾಗಿ ಕೊಡಲಾಗುವ ಹಣವನ್ನು ಹೇಗೆ ಉಪಯೋಗ ಮಾಡಬೇಕು ಎಂಬದಕ್ಕೆ ಇದು ಅತ್ಯಂತ ಯುಕ್ತವಾದ ಉದಾಹರಣೆಯನ್ನು ನಾವು ನೋಡಬಹುದು. ಕ್ರೈಸ್ತರು ಈಗ ಪೌಲನ ಹಾಗೆ ಸರಿಯಾದ ಕಾರ್ಯಗಳನ್ನು ಮಾಡಲು ಮುಂದಾಗಬೇಕು ಮತ್ತು ಇತರರಿಗೆ ಅವುಗಳು ಸರಿ ಎಂದು ಕಾಣಬೇಕು. ಇದೆಲ್ಲಕ್ಕಿಂತ ಹೆಚ್ಚಾಗಿ ಮಾನವರು ನೋಡಲಿ ಬಿಡಲಿ ದೇವರು ನೋಡುತ್ತಾ ಇದ್ದಾನೆ ಎಂಬದನ್ನು ಅವರು ಯಾವಾಗಲೂ ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು – ಇಬ್ರಿ 4:13. **23**

**8:23** *“ಕ್ರಿಸ್ತನಿಗೆ ಮಹಿಮೆ”*– ಯೋಹಾನ 17:10 ರೊಂದಿಗೆ ಹೋಲಿಸಿ ನೋಡಿರಿ. ಬಹುಪಾಲು ಕ್ರೈಸ್ತರು ಸತತವಾಗಿ ಯೇಸು ಕ್ರಿಸ್ತನಿಗೆ ಮಹಿಮೆ ಸಲ್ಲಿಸದೆ ಜೀವಿಸುತ್ತಾ ಇದ್ದರೆ ಯಾವ ವ್ಯಕ್ತಿಯ ಬಗ್ಗೆಯಾದರೂ ಅವನು ಆತನಿಗೆ ಮಹಿಮೆ ಸಲ್ಲಿಸುವವನಾಗಿದ್ದಾನೆ ಎಂಬದಕ್ಕಿಂತ ಹೆಚ್ಚಿನದನ್ನು ಹೇಳಲು ಆಗುತ್ತದೆಯೇ? **24**

**8:24** *“ನಿಮ್ಮ ಪ್ರೀತಿ ಯಥಾರ್ಥವಾದದ್ದು”*– ವ 8. 1 ಯೋಹಾನ 3:17 ರೊಂದಿಗೆ ಹೋಲಿಸಿ ನೋಡಿರಿ. ಒಂದುವೇಳೆ ನಾವು ಯೇಸು ಕ್ರಿಸ್ತನಿಗೆ ಮತ್ತು ಆತನ ಸೇವೆಗೆ ಕೊಡದೆ ಇರುವದಾದರೆ, ನಾವು ಆತನನ್ನು ಪ್ರೀತಿಸುತ್ತೇವೆ ಮತ್ತು ಆತನನ್ನು ತಿಳಿದಿದ್ದೇವೆ ಎಂಬದಕ್ಕೆ ಸಾಕ್ಷಿ ಏನಿದೆ? ಒಂದುವೇಳೆ ನಾವು ನಿಜವಾಗಿಯೂ ಆತನನ್ನು ಪ್ರೀತಿಸುವದಾದರೆ ಆತನ ಸೇವೆಯನ್ನು, ಜನರನ್ನು ಪ್ರೀತಿಸುತ್ತೇವೆ ಮತ್ತು ಅವರಿಗೆ ಸಹಾಯ ಮಾಡಲು ಪ್ರಯತ್ನಿಸುತ್ತೇವೆ.

*“ನಿಮ್ಮನ್ನು ನಾವು ಹೊಗಳುವದು”*– 7:14. ಪೌಲನು ಸಭೆಗಳಿಗೆ ಕಳುಹಿಸಿದವರ ಹಾಗೂ ಸಭೆಗಳ ವಿಷಯದಲ್ಲಿ ಎಂಥಾ ಪ್ರೀತಿ ಮತ್ತು ಕಾಳಜಿಯನ್ನು ಹೊಂದಿದ್ದನು ಎಂಬದನ್ನು ನೋಡಿರಿ (11:28).

# 9 1-2

**9:1-2** 8:6-7,10,11 ನೋಡಿರಿ. **3-4**

**9:3-4** 8:13,22-24 ನೋಡಿರಿ. ಕೊರಿಂಥದಲ್ಲಿದ್ದ ಕ್ರೈಸ್ತರು ಪ್ರಾರಂಭದಲ್ಲಿ ಉದಾರವಾಗಿ ಕಾಣಿಕೆಯನ್ನು ಕೊಡುವ ಆಸಕ್ತಿಯನ್ನು ತೋರಿಸಿದ್ದರು, ಆದರೆ ನಂತರದಲ್ಲಿ ಅವರು ಕಾಣಿಕೆಯನ್ನು ಸಿದ್ಧವಾಗಿಡುವ ವಿಷಯದಲ್ಲಿ ನಿರ್ಲಕ್ಷ್ಯ ತೋರಿದರು ಎಂಬದಾಗಿ ಅನ್ನಿಸುತ್ತದೆ (8:10-11). ದುಃಖದ ವಿಷಯವೆಂದರೆ ಅನೇಕ ಕ್ರೈಸ್ತರು ಇದೇ ರೀತಿಯವರಾಗಿದ್ದಾರೆ. ಪ್ರಾರಂಭದಲ್ಲಿ ಅವರು ಯಾವುದಾದರು ಕೆಲಸಕ್ಕೆ ಹೆಚ್ಚು ಆಸಕ್ತಿಯನ್ನು ತೋರಿಸುತ್ತಾರೆ ಆದರೆ ಕಾಲಕ್ರಮೇಣ ಅವರ ಅವರ ಆಸಕ್ತಿ ತಣ್ಣಗಾಗುತ್ತದೆ ಮತ್ತು ಅವರು ತಮ್ಮ ಕೆಲಸವನ್ನು ಪೂರ್ಣಗೊಳಿಸುವದಿಲ್ಲ. ಇದು ಅಪ್ರಬದ್ಧತೆ ಮತ್ತು ಅಸ್ಥಿರತೆಯ ಗುರುತಾಗಿದೆ. **5**

**9:5** ವಚನ 7. ಕೊಡುವ ವಿಷಯಕ್ಕೆ ಬರುವಾಗ, ವಿಶ್ವಾಸಿಗಳು ಸಾಧ್ಯವಾದಷ್ಟು ತಮಗೆ ಕೂಡಿಸಿಕೊಳ್ಳಲು ಬಯಸಬಾರದು, ಕೊಡಲೇಬೇಕು ಎಂಬ ಕಾರಣದಿಂದಲೂ ಕೊಡಬಾರದು ಮತ್ತು ಕೊಡುವದರಿಂದ ತಪ್ಪಿಸಿಕೊಳ್ಳಲು ಅವರು ಪ್ರಯತ್ನಿಸಲೂ ಬಾರದು. **6**

**9:6** ಜ್ಞಾನೋ 11:24-25; 19:17; 22:8-9; ಲೂಕ 6:38; ಗಲಾ 6:7 ರೊಂದಿಗೆ ಹೋಲಿಸಿ ನೋಡಿರಿ. ಈ ತತ್ವವನ್ನು ದೃಢವಾಗಿ ಗುರುತಿಸಿಕೊಳ್ಳಿರಿ. ಕೆಲವರು ಬಡವರಾಗಿದ್ದಾರೆ ಮತ್ತು ಆತ್ಮೀಕ ಹಾಗೂ ಬೌತಿಕ ವಿಷಯಗಳಲ್ಲಿ ಬಡವರಾಗಿಯೇ ಇರುತ್ತಾರೆ ಯಾಕಂದರೆ ದೇವರಿಗೆ ಮತ್ತು ಇತರರಿಗೆ ಕೊಡುವ ಮನಸ್ಸು ಅವರಿಗೆ ಇರುವದಿಲ್ಲ. **7**

**9:7** ವಚನ 5; 8:8. ಒಂದುವೇಳೆ ನಾವು ದೇವರನ್ನು ಮೆಚ್ಚಿಸಲು ಕೊಡುವದಾದರೆ ಅದು ನಮ್ಮ ಹೃದಯದಿಂದ ಬರಬೇಕು, ದೇವರ ಮತ್ತು ಆತನ ಜನರ ಮೇಲಿನ ಪ್ರೀತಿಯಿಂದ ಕೊಡಬೇಕು, ಸಂತೋಷದ ವಿಷಯವಾಗಿರಬೇಕೇ ಹೊರತು ದುಃಖದಿಂದ ಎಂದಿಗೂ ಕೊಡಬಾರದು. ಒಂದುವೇಳೆ ನಮ್ಮಲ್ಲಿ ಪ್ರೀತಿ ಇರುವದಾದರೆ, ಕೊಡುವದು ನಮಗೆ ಉಸಿರಾಡುವಂತೆ ಸುಲಭವಾಗಿರುತ್ತದೆ. **8**

**9:8** ಇತರರಿಗೆ ಉದಾರವಾಗಿ ಮತ್ತು ಸಂತೋಷವಾಗಿ ಕೊಡುವವರು ಎಂದಿಗೂ ಸೋಲುವವರಾಗಿರುವದಿಲ್ಲ. ಇದಕ್ಕೆ ವಿರುದ್ಧವಾದದ್ದು ಯಾವಾಗಲೂ ಸತ್ಯವಾಗಿರುತ್ತದೆ – ಜ್ಞಾನೋ 11:24-25. ಯಾರು ಪ್ರೀತಿಯಿಂದ ಕೊಡುತ್ತಾರೆ ಅವರಿಗೆ ದೇವರು ಪ್ರೀತಿಯಿಂದ

ಕೊಡುತ್ತಾನೆ. ದೇವರು ಸರ್ವಲೋಕದ ಒಡೆಯನಾಗಿದ್ದಾನೆ. ಮಾನವನ ಯೋಚನೆಗಳು ಮತ್ತು ಯೋಜನೆಗಳು, ಭೂಮಿ, ವಾತಾವರಣದ ಪರಿಸ್ಥಿತಿ, ಆರ್ಥಿಕ ವ್ಯವಸ್ಥೆ, ಒಬ್ಬ ವ್ಯಕ್ತಿಯನ್ನು ಆರ್ಥಿಕವಾಗಿ ಬಲಗೊಳಿಸುವ ಮತ್ತು ದುರ್ಬಲಗೊಳಿಸುವ ಎಲ್ಲಾ ವಿಷಯಗಳು, ಆತನ ಕೈಗಳಲ್ಲಿಯೇ ಅವೆ. ತಾನು ಯಾರ ವಿಷಯದಲ್ಲಿ ಸಂತೋಷವುಳ್ಳವನಾಗಿರುವನೋ ಅವರಿಗಾಗಿ ಎಲ್ಲಾ ಕಾರ್ಯಗಳನ್ನು ಅನುಕೂಲಕರವಾಗಿ ಮಾಡಲು ಶಕ್ತನಾಗಿದ್ದಾನೆ. ಒಂದುವೇಳೆ ತನಗೆ ಮೆಚ್ಚಿಕೆಯಾದರೆ ಆತನು ಅದ್ಭುತಕಾರ್ಯಗಳನ್ನೂ ಮಾಡುತ್ತಾನೆ – 1 ಅರಸು 17:10-16; 2 ಅರಸು 4:1-7. ಆದರೆ ಸಹಜವಾಗಿ ಆತನು ಅವರನ್ನು ಸಾಧಾರಣ ರೀತಿಯಲ್ಲಿ, ಅವರ ಪ್ರಗತಿಯನ್ನು ಹೆಚ್ಚಿಸಲು ಮನುಷ್ಯರು ಹಾಗೂ ಪರಿಸ್ಥಿತಿಗಳನ್ನು ಉಪಯೋಗಿಸಿಕೊಂಡು ಆಶೀರ್ವದಿಸುತ್ತಾನೆ ಮತ್ತು ಬಡತನವನ್ನು ಬರಮಾಡುವಂಥ ವಿಪತ್ತುಗಳಿಂದ ಕಾಪಾಡುತ್ತಾನೆ. ಅವರನ್ನು ಆತ್ಮೀಕವಾಗಿ ಮತ್ತು ಬೌತಿಕವಾಗಿ (ಒಂದುವೇಳೆ ಅವರ ವಿಷಯವಾಗಿ ಆತನು ಬೌತಿಕ ಅಭಿವೃದ್ಧಿಯನ್ನು ಬಯಸಿದ್ದರೆ) ಯಾವಾಗಲೂ ಅಭಿವೃದ್ಧಿ ಹೊಂದುವ ರೀತಿಯಲ್ಲಿ ತನ್ನ ಕೃಪೆಯನ್ನು ಹೇಗೆ ಸುರಿಯ ಮಾಡಬೇಕು ಎಂಬದನ್ನು ಆತನು ಬಲ್ಲವನಾಗಿದ್ದಾನೆ. ಆತನು ತಾನು ಆಶೀರ್ವದಿಸುವವರನ್ನು ಯಾಕೆ ಹೀಗೆ ಆಶೀರ್ವದಿಸುತ್ತಾನೆಂದರೆ "ಅವರು ಸಕಲ ಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಬೇಕು." ದೇವರು ಅವರನ್ನು ಆಶಿರ್ವದಿಸುವಾಗ ಒಂದುವೇಳೆ ಅವರು ಹೀಗೆ ನಡೆದುಕೊಂಡಿಲ್ಲವೆಂದರೆ, ಆತನು ತನ್ನ ಆಶೀರ್ವಾದಗಳನ್ನು ಹೇಗೆ ಕೊಟ್ಟನೋ ಹಾಗೆಯೇ ಹಿಂದಕ್ಕೆ ತೆಗೆದುಕೊಳ್ಳುತ್ತಾನೆ ಎಂಬದನ್ನು ಯಾವಾಗಲೂ ನೆನಪಿನಲ್ಲಿ ಇಟ್ಟುಕೊಂಡಿರಬೇಕು. 9-14

**9:9-14** ಉದಾರವಾಗಿ ಮತ್ತು ಸಂತೋಷವಾಗಿ ಕೊಡುವದರ ಕೆಲವು ಫಲಿತಾಂಶಗಳನ್ನು ಪೌಲನು ವಿಶ್ವಾಸಿಗಳಿಗೆ ತಿಳಿಸಿದ್ದಾನೆ. ಆ ಫಲಿತಾಂಶಗಳನ್ನು ಈ ಜೀವಿತದಲ್ಲಿ ಮತ್ತು ಮುಂಬರುವ ಜೀವಿತದಲ್ಲಿ ನೋಡಬಹುದು (ವ 9). ಆ ಫಲಿತಾಂಶಗಳು ಯಾವುವೆಂದರೆ: ಅವರು ಮಾಡಿರುವ ಕಾರ್ಯವನ್ನು ದೇವರು ಎಂದಿಗೂ ಮರೆಯುವದಿಲ್ಲ (ವ 9. ಇಬ್ರಿ 6:10 ರೊಂದಿಗೆ ಹೋಲಿಸಿ ನೋಡಿರಿ). ದೇವರು ಅವರನ್ನು ಬೌತಿಕವಾಗಿ ಆಶೀರ್ವದಿಸುತ್ತಾನೆ (ವ 10,11). ಅವರ ಮೂಲಕ ದೇವಜನರ ಅಗತ್ಯತೆಗಳು ನೀಗುತ್ತವೆ (ವ 12). ಅವರು ತಾವು ಯೇಸು ಕ್ರಿಸ್ತನ ಸುವಾರ್ತೆಗೆ ವಿಧೇಯರಾಗುತ್ತಿರುವದನ್ನು ಸಾಬೀತುಪಡಿಸುತ್ತಾರೆ (ವ 13). ಇತರರು ತಮ್ಮ ಪ್ರಾರ್ಥನೆಗಳಲ್ಲಿ ಅವರನ್ನು ಆಸಕ್ತಿಯಿಂದ ಮತ್ತು ಪ್ರೀತಿಯಿಂದ ನೆನಪು

ಮಾಡಿಕೊಳ್ಳುತ್ತಾರೆ (ವ 14). ಮತ್ತು ಅವರ ನಿಮಿತ್ತ ದೇವರಿಗೆ ಕೃತಜ್ಞತೆ ಮತ್ತು ಸ್ತುತಿಸ್ತೋತ್ರಗಳನ್ನು ಸಲ್ಲಿಸಲಾಗುತ್ತದೆ (ವ 11,12,13). ಕಡೆಯ ಫಲಿತಾಂಶವನ್ನು ಮೂರು ಸಲ ಹೇಳಲಾಗಿದೆ, ಯಾಕಂದರೆ ಇದು ಪೌಲನಿಗೆ ಬಹಳ ಪ್ರಾಮುಖ್ಯವಾದ ವಿಷಯವಾಗಿತ್ತು. ಹಾಗೆಯೇ 1:11; 4:15 ನೋಡಿರಿ. ಎಲ್ಲದರಲ್ಲಿಯೂ ದೇವರಿಗೆ ಮಹಿಮೆಯಾಗಬೇಕು ಎಂಬದೇ ಆತನ ಪ್ರಮುಖ ಉದ್ದೇಶವಾಗಿತ್ತು (1 ಕೊರಿಂಥ 10:31), ದೇವಜನರು ಆತನು ಬಯಸುವ ರೀತಿಯಲ್ಲಿ ನಡೆದುಕೊಳ್ಳುವಾಗ ಮತ್ತು ಆತನಿಗೆ ಕೃತಜ್ಞತೆಗಳನ್ನು ಹಾಗು ಸ್ತೋತ್ರಗಳನ್ನು ಸಲ್ಲಿಸುವಾಗ ಆತನ ನಾಮಕ್ಕೆ ಮಹಿಮೆ ಉಂಟಾಗುತ್ತದೆ. **10-11**

**9:10-11** 8ನೇ ವಚನ ಹೇಳುವದೇನೆಂದರೆ ದೇವರು ಅಂಥ ಕಾರ್ಯಗಳನ್ನು ಮಾಡುವನು. ಈಗ ಪೌಲನು ಅವರಿಗೆ ಹೇಳುವದೇನೆಂದರೆ ದೇವರು ಸಂತೋಷವಾಗಿ ಮತ್ತು ಉದಾರವಾಗಿ ಕೊಡುವವರನ್ನು ಆಶೀರ್ವದಿಸುವನು. ಉದಾರವಾಗಿ ಕೊಡುವವರನ್ನೆಲ್ಲಾ ದೇವರು ಐಶ್ವರ್ಯವಂತರನ್ನಾಗಿ ಮಾಡುತ್ತಾನೆ ಎಂಬದಾಗಿ ಈ ವಾಗ್ದಾನವು ಹೇಳುವದಿಲ್ಲ. ಈಗಲೂ ಅನೇಕ ಬಡವರು ಸಂತೋಷವಾಗಿ ಕೊಡುವವರಾಗಿದ್ದಾರೆ ಆದರೂ ಅವರಿನ್ನೂ ಬಡತನದಲ್ಲಿಯೇ ಇದ್ದಾರೆ (ಆದರೆ ಅವರು ಕೊಡದೆ ಹೋಗಿದ್ದರೆ ಅವರಿಗಿರುತ್ತಿದ್ದ ಬಡತನಕ್ಕಿಂತ ಉತ್ತಮವಾದ ಸ್ಥಿತಿಯಲ್ಲಿ ಇದ್ದಾರೆ). ಯಾವುದೇ ಪರಿಸ್ಥಿತಿಯಲ್ಲಾದರೂ, ನಾವು ಐಶ್ವರ್ಯವಂತರಾಗಲಿ ಅಥವಾ ನಮ್ಮ ಸ್ವಂತಕ್ಕೆ ಬೌತಿಕ ಸವಲತ್ತುಗಳನ್ನು ಬಯಸಬಾರದು (1 ತಿಮೊ 6:6-8). ಒಂದುವೇಳೆ ನಮಗೆ ಅಭಿವೃದ್ಧಿ ಬೇಕಾಗಿದ್ದರೆ ಅದು ದೇವರಿಗಾಗಿ, ಆತನ ಕೆಲಸಕ್ಕಾಗಿ ಮತ್ತು ಆತನ ಜನರಿಗಾಗಿ ಹೆಚ್ಚು ಉಪಯೋಗವಾಗುವ ಸಲುವಾಗಿಯೇ ಆಗಿರಬೇಕು. ನಾವು ಕೊಡುವದಕ್ಕಿಂತಲೂ ಹೆಚ್ಚಿನ ಲಾಭವನ್ನು ಪಡೆಯಬೇಕು ಎಂಬ ನಿರೀಕ್ಷೆಯೊಂದಿಗೆ ಕೊಡುವದಾದರೆ ದೇವರು ಎಂದಿಗೂ ಸಂತೋಷಿಸುವದಿಲ್ಲ. ನಿಜವಾಗಿ ಹೇಳುವದಾದರೆ, ಅದು ನಮ್ಮನ್ನು ನಿರಾಸೆಗೆ ಒಳಪಡಿಸುವ ಸ್ವಾರ್ಥವಾಗಿದೆ. ಕೊಡುವದು ನಮ್ಮನ್ನು ದೇವರ ಕೃಪೆಗೆ ಯೋಗ್ಯರನ್ನಾಗಿ ಮಾಡುತ್ತದೆ ಎಂಬದಾಗಿ ಯೋಚಿಸುವದು ದೊಡ್ಡ ತಪ್ಪಾಗಿದೆ. ಯೇಸು ಕ್ರಿಸ್ತನು ಯಾವಾಗಲೂ ಬಡವರಿಗೆ ಆಶೀರ್ವಾದಗಳನ್ನು ಕೊಡುತ್ತಾ ಇದ್ದನು ಮತ್ತು ಐಶ್ವರ್ಯವಂತರಿಗೆ ಎಚ್ಚರಿಕೆಗಳನ್ನು ಕೊಡುತ್ತಾ ಇದ್ದನು ಎಂಬದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿರಬೇಕು (ಲೂಕ 6:20,24). **13**

**9:13** ಅವರ ಉದಾರವಾದ ಕೊಡುವಿಕೆ ಅವರ ಪ್ರೀತಿ ಹಾಗೂ ವಿಧೇಯತೆಯನ್ನು

ಸಾಬೀತುಪಡಿಸಿತು. ಕೊಡುವ ವಿಷಯದಲ್ಲಿ ಹಿಂಜರಿದರೆ ಖಂಡಿತವಾಗಿಯೂ ಇದಕ್ಕೆ ವಿರುದ್ಧವಾಗಿ ಇರುವದಾಗಿದೆ. 15

**9:15** ಮಾನವರ ವಿಷಯದಲ್ಲಿ ದೇವರ ಅನೇಕ ಮತ್ತು ಮಹದಾದ ಯೋಜನೆಗಳಿವೆ (ಕೀರ್ತನೆ 68:35; 127:2-3; 146:7; ಕೀರ್ತನೆ 2:6; ಮತ್ತಾಯ 7:11; ಯೋಹಾನ 14:27; ಅಪೊ 5:31; 14:17; 15:8; 17:25; ರೋಮಾ 5:17; 6:23; 1 ಕೊರಿಂಥ 7:7; 12:7-11; ಎಫೆ 2:8; ಫಿಲಿಪ್ಪಿ 1:29; 2 ತಿಮೊ 3:16; ಯಾಕೋಬ 1:5,17). ಪೌಲನ ಮನಸ್ಸಿನೊಳಗೆ ಇಲ್ಲಿ ಅತ್ಯಂತ ಮತ್ತು ಪ್ರಾಮುಖ್ಯವಾಗಿ ವಿವರಿಸಲು ಆಗದಂಥ ಎಲ್ಲಾ ವರಗಳಲ್ಲಿ ಶ್ರೇಷ್ಠವಾದದ್ದನ್ನು ನೋಡಬಹುದು – ಯೋಹಾನ 3:16; ರೋಮಾ 8:32; ಯೆಶಾಯ 9:6. ಆತನು ಆ ವರದ ಬಗ್ಗೆ ಇಲ್ಲಿ ಮಾತನಾಡುತ್ತಾ ಇದ್ದಾನೆ, ಯಾಕಂದರೆ ವಿಶ್ವಾಸಿಗಳು ನಿಜವಾಗಿಯೂ ಕೊಡುವದೆಂದರೆ ಏನು ಎಂಬದನ್ನು ಕಲಿತುಕೊಳ್ಳಬೇಕು ಮತ್ತು ದೇವರು ಕೊಡುವಂತೆಯೇ ಕೊಡುವದನ್ನು ಕಲಿಯಬೇಕು ಎಂಬದಾಗಿ ಬಯಸುವವನಾಗಿದ್ದಾನೆ. ವಿಶ್ವಾಸಿಗಳ ಕೊಡೋಣದ ಸತ್ಯದ ಬಗ್ಗೆ ಸಂಕ್ಷಿಪ್ತವಾದ ಸಾರಾಂಶವನ್ನು ನೋಡಬಹುದು. ಕೊಡಲು ಶಕ್ತರಾಗಿರುವದು ದೇವರ ವರವಾಗಿದೆ, ದೇವರ ಕೃಪೆ ಅವರ ಹೃದಯಗಳು ಮತ್ತು ಜೀವಿತಗಳಲ್ಲಿ ಕಾರ್ಯಮಾಡುವದಾಗಿದೆ (8:1; ರೋಮಾ 12:6-8). ಕೊಡುವ ಸೌಭಾಗ್ಯವನ್ನು ವಿಶ್ವಾಸಿಗಳು ಬಯಸುವವರಾಗಿರಬೇಕು (8:4). ಕೊಡುವದು ನಮ್ಮ ಯಥಾರ್ಥವಾದ ಪ್ರೀತಿ ಮತ್ತು ವಿಧೇಯತೆಯ ಪರೀಕ್ಷೆಯಾಗಿದೆ – ಕೊಡದೆ ಇರುವದು ಪ್ರೀತಿಯಿಲ್ಲದೆ ಇರುವದನ್ನು, ಕಡಿಮೆ ಕೊಡುವದು, ಕಡಿಮೆ ಪ್ರಿತಿಯನ್ನು, ಹೆಚ್ಚಾಗಿ ಕೊಡುವದು, ಹೆಚ್ಚಾದ ಪ್ರೀತಿಯನ್ನು ಸೂಚಿಸುತ್ತದೆ (8:8). ಕೊಡುವದು ದೇವರ ಸ್ವಭಾವವಾಗಿದೆ (8:9). ನಮ್ಮ ಹೃದಯವು ಸರಿಯಾಗಿದ್ದರೆ, ಸಣ್ಣ ಕಾಣಿಕೆಯೂ ದೇವರಿಗೆ ಮೆಚ್ಚಿಕೆಯಾಗಿರುತ್ತದೆ (8:12; ಮಾರ್ಕ 12:41-44). ಕೊಡುವದು ಅಧಿಕವಾಗಿ ಇರುವವರ ಹಾಗೂ ಅವಶ್ಯಕತೆಯಲ್ಲಿ ಇರುವವರ ನಡುವೆ ಸೇತುವೆಯನ್ನು ನಿರ್ಮಿಸುತ್ತದೆ (8:13). ಕೊಡುವದು ದೇವಜನರಿಗೆ ಮಾಡುವ ಸೇವೆಯಾಗಿದೆ (9:1). ಕೊಡುವದನ್ನು ಸ್ವತಂತ್ರವಾಗಿ ಮತ್ತು ಸಂತೋಷವಾಗಿ ಕೊಡಬೇಕು (9:5,7). ಕೊಡುವದರಿಂದ ಅದರದೇ ಆದ ತಕ್ಕ ಪ್ರತಿಫಲಗಳು ದೊರೆಯುತ್ತವೆ (9:6,8-11,14). ಕೊಡುವದು ಕೃತಜ್ಞತೆ ಮತ್ತು ಸ್ತುತಿಯ ಮೂಲವಾಗಿದೆ (9:11-13). ದೇವರಿಗೆ ಮತ್ತು

ಇತರರಿಗೆ ಕೊಡುವದರ ಇನ್ನೂ ಕೆಲವು ವಚನಗಳನ್ನು ನಾವು ಇಲ್ಲಿ ನೋಡಬಹುದು – ವಿಮೋ 35:5-9; ಯಾಜಕ 7:12-13; 27:30; ಸಂಖ್ಯಾ 18:21,24; ಧರ್ಮೋ 14:28-29; 15:10; 2 ಸಮು 24:24; 1 ಪೂರ್ವ 29:3,5,9,14; ಕೀರ್ತನೆ 37:26; ಜ್ಞಾನೋ 11:24-25; 19:17; 22:9; ಪ್ರಸಂಗಿ 11:1-2; ಮಲಾಕಿ 1:7-8,14; 3:8-10; ಮತ್ತಾಯ 6:1-2,19,20; 19:21; ಲೂಕ 6:38; ಅಪೊ 20:35; ರೋಮಾ 12:13; 1 ತಿಮೊ 6:18-19; ಇಬ್ರಿ 6:10; ಯಾಕೋಬ 2:15-16; 1 ಯೋಹಾನ 3:17.

# 10[1]

**10:1** 11:10 ನೋಡಿರಿ. 10-13 ಅಧ್ಯಾಯಗಳಲ್ಲಿ ಪೌಲನು ಕೊರಿಂಥದಲ್ಲಿರುವ ಸುಳ್ಳು ಬೋಧಕರು ಮತ್ತು ಅವರ ಮಾತುಗಳನ್ನು ಕೇಳುತ್ತಾ ಇದ್ದವರ ಕಡೆಗೆ ತಿರುಗಿಸಿದ್ದಾನೆ. ಆ ಸುಳ್ಳು ಬೋಧಕರು ಬೇರೊಂದು ಸುವಾರ್ತೆಯನ್ನು ಕಲಿಸುತ್ತಾ ಇದ್ದರು (11:4). ಅವರು ಸೈತಾನನ ಸೇವಕರಾಗಿದ್ದು, ವಿಶ್ವಾಸಿಗಳನ್ನು ತಪ್ಪು ದಾರಿಗೆ ನಡೆಸಲು ಸೈತಾನನು ಅವರನ್ನು ಕೊರಿಂಥಕ್ಕೆ ಕಳುಹಿಸಿದ್ದನು (11:13-14). ನಾವು ನಿಜವಾದ ಅಪೊಸ್ತಲರು ಎಂದು ಅವರು ಹೊಗಳಿಕೊಳ್ಳುತ್ತಾ ಇದ್ದರು (11:5,12), ಮತ್ತು ಪೌಲನನ್ನು ಮತ್ತು ಅವನು ಬೋಧಿಸುತ್ತಿದ್ದ ಸುವಾರ್ತೆಯನ್ನು ದೂರುತ್ತಾ ಇದ್ದರು. ಆದ್ದರಿಂದ ಪೌಲನು ತಾನು ಅಪೊಸ್ತಲನೆಂಬ ಸತ್ಯವನ್ನು ಸಮರ್ಥನೆ ಮಾಡುತ್ತಾ ಇದ್ದಾನೆ. ಇದು ಅವನಿಗಾಗಿಯಲ್ಲ ಬದಲಾಗಿ ಕೊರಿಂಥದಲ್ಲಿದ್ದ ಸಭೆಗಾಗಿ (12:19). ಅವನು ಅವರ ಆತ್ಮೀಕ ಸ್ಥಿತಿಯ ಬಗ್ಗೆ ಯೋಚಿಸುವವನಾಗಿದ್ದನು (11:3; 12:20-21), ಮತ್ತು ಅವರೇನಾದರೂ ಅವನನ್ನು ನಿರಾಕರಿಸಿದರೆ ಮತ್ತು ಆರಿಸಲ್ಪಟ್ಟ ಅಪೊಸ್ತಲನಾಗಿ ದೇವರು ಅವನ ಮೂಲಕ ಮಾತನಾಡುವದನ್ನು ನಂಬಲು ಅವರು ಒಪ್ಪದೆ ಹೋದರೆ ಅವರ ಸ್ಥಿತಿ ಮತ್ತಷ್ಟು ಹದಗೆಡುವದು ಎಂಬದಾಗಿ ಅವನು ಅರಿತಿದ್ದನು.

*"ಯೇಸು ಕ್ರಿಸ್ತನ ಸಾತ್ವಿಕತ್ವ"*– ಮತ್ತಾಯ 11:29; 12:20; ಯೆಶಾಯ 40:11. ಪೌಲನು ಅಪೊಸ್ತಲನೆಂಬ ತನ್ನ ಅಧಿಕಾರವನ್ನು ಉಪಯೋಗ ಮಾಡದೆ (13:10) ಕರ್ತನಾದ ಯೇಸು ಕ್ರಿಸ್ತನ ಹಾಗೆ, ಪ್ರೀತಿಯಿಂದ ಅವರೊಂದಿಗೆ ಮನವಿ ಮಾಡುವವನಾಗಿದ್ದನು.

*"ದಿಟ್ಟತನ"*– ಪೌಲನು ನಮ್ಮ ಮಧ್ಯದಲ್ಲಿದ್ದಾಗ ಹೇಡಿಯಂತಿದ್ದನು ಆದರೆ ಪತ್ರವನ್ನು

ಮಾತ್ರ ದಿಟ್ಟತನದಿಂದ ಬರೆದಿದ್ದಾನೆ ಎಂದು ಕೊರಿಂಥದಲ್ಲಿದ್ದ ಕೆಲವರು ಹೇಳುತ್ತಾ ಇದ್ದರು. 2

**10:2** ಪೌಲನು ಕೊರಿಂಥದಲ್ಲಿ ದಿಟ್ಟತನ ತೋರಲು ಮತ್ತು ಗಂಭೀರವಾದ ವಿಧಗಳನ್ನು ಅನುಸರಿಸಲು ಶಕ್ತನಾಗಿದ್ದನು, ಆದರೆ ಅವರು ಅವನನ್ನು ಅದಕ್ಕಾಗಿ ಒತ್ತಾಯಪಡಿಸಬಾರದೆಂದು ನಿರೀಕ್ಷಿಸಿದನು.

*"ಲೋಕಾನುಸಾರಿಗಳು"*– ಪೌಲನಿಗೆ ವಿರುದ್ಧವಾಗಿ ಕೆಲವು ಮಾಡುತ್ತಿದ್ದ ಸುಳ್ಳು ಆರೋಪಗಳಲ್ಲಿ ಇದೂ ಒಂದಾಗಿದೆ. 3-5

**10:3-5** ಪೌಲನು ಈಗ ಸತ್ಯ ಮತ್ತು ತಪ್ಪು, ಅಂದರೆ, ದೇವರು ಪ್ರಕಟಪಡಿಸಿರುವ ಸತ್ಯ ಮತ್ತು ಮಾನವರ ತಪ್ಪುಗಳ ನಡುವೆ ಇರುವ ಯುದ್ಧದ ಬಗ್ಗೆ ಮಾತನಾಡುತ್ತಾ ಇದ್ದಾನೆ. ಯೇಸು ಕ್ರಿಸ್ತನ ಸತ್ಯವನ್ನು ಹಾಳುಮಾಡುವದೇ ಲೋಕದ ಉದ್ದೇಶವಾಗಿದೆ. ದೇವರ ನಿಜವಾದ ಸೇವಕರ ಉದ್ದೇಶ ತಪ್ಪುಗಳನ್ನು ನಾಶಮಾಡುವದು ಮತ್ತು ಮಾನವರ ಆಲೋಚನೆಗಳನ್ನು ಯೇಸು ಕ್ರಿಸ್ತನಿಗೆ ವಿಧೇಯವಾಗುವಂತೆ ಮಾಡುವದಾಗಿದೆ. ಯೇಸು ಕ್ರಿಸ್ತನ ಸೇವಕರ ಆಯುಧಗಳು ಲೋಕದ ಆಯುಧಗಳಿಗಿಂತ ವ್ಯತ್ಯಾಸವಾದವುಗಳಾಗಿವೆ. ವಿಶ್ವಾಸಿಗಳು ಲೋಕದೊಳಗೆ ಇದ್ದಾರೆ, ಆದರೆ ಅವರು ಸತ್ಯಕ್ಕಾಗಿ ಮಾಡುವ ಯುದ್ಧದಲ್ಲಿ ಲೋಕದ ಆಯುಧಗಳನ್ನು ಉಪಯೋಗಿಸುವಂತಿಲ್ಲ. ಲೋಕದ ಆಯುಧಗಳು ಹಿಂಸೆ, ಒತ್ತಾಯ, ತಂತ್ರಗಾರಿಕೆ, ಆಕರ್ಷಣೆ, ಯೋಜನೆಗಳು, ಮಾನವನ ಕಾರಣಗಳು ಮತ್ತು ಮಾನವನ ಅವಿಧೇಯತೆಯ ಸ್ವಭಾವದಿಂದ ಬರುವ ವಿಧಾನಗಳಾಗಿವೆ. ವಿಶ್ವಾಸಿಗಳಿಗೂ ಆಯುಧಗಳಿವೆ (6:7; ಎಫೆ 6:17), ಆದರೆ ಅವುಗಳು ಆತ್ಮೀಕ ಅಯುಧಗಳಾಗಿವೆ. ಸತ್ಯ ಮತ್ತು ನೀತಿಯೊಂದಿಗೆ ಕಾರ್ಯಮಾಡುವ ದೇವರ ಶಕ್ತಿಯನ್ನು ಪೌಲನು ಆತುಕೊಂಡನು. ದೇವರಾತ್ಮನ ಸಂಪೂರ್ಣತೆ, ಪ್ರಾಮಾಣಿಕತೆ, ಯಥಾರ್ಥತೆ, ಪ್ರೀತಿಯಿಂದ ಸತ್ಯವನ್ನು ಮಾತನಾಡುವದು ದೇವರ ಮಹಾ ಸೈನಿಕನ ಆಯುಧಗಳಾಗಿವೆ. ಅಂಥ ಆಯುಧಗಳು ದೈವೀಕ ಶಕ್ತಿಯನ್ನು ಹೊಂದಿರುತ್ತವೆ. ಅವುಗಳ ಮೂಲಕ ಅವನು "ಉನ್ನತವಾದ ಕೊತ್ತಲುಗಳನ್ನು" – ಸೈತಾನನ, ದುರಾತ್ಮಗಳ, ಅಪನಂಬಿಕೆಯ ಕೋಟೆಗಳನ್ನು, ಸುಳ್ಳು ಧರ್ಮ ಮತ್ತು ತತ್ವಗಳ ಕೋಟೆಗಳನ್ನು, ದೇವರ ಸತ್ಯಕ್ಕೆ ವಿರುದ್ಧವಾದ ವಾದಗಳನ್ನು, ಕಪಟವಾದ ಜ್ಞಾನ ಹಾಗೂ ಶಕ್ತಿಯನ್ನು ನಾಶಮಾಡಲು ಶಕ್ತನಾಗಿದ್ದನು. ಆ ಸೈನಿಕನು ದೇವರಿಗಾಗಿ "ಸೆರೆಯಾಳುಗಳನ್ನೂ" ಬಿಡಿಸುವನು. ಈ ಲೋಕದಲ್ಲಿ ದೊಡ್ಡ ಯುದ್ಧ ಸತ್ಯ ಮತ್ತು ತಪ್ಪಿನ

ನಡುವೆ ನಡೆಯುತ್ತಾ ಇದೆ. ಪೌಲನ ಮಾನವನ ಪ್ರತಿಯೊಂದು ತತ್ವ, ಧಾರ್ಮಿಕ ಆಲೋಚನೆ, ಜ್ಞಾನವನ್ನು ಮೀರುವ ಪ್ರತಿಯೊಂದು ಕಾರ್ಯ, ಪ್ರತಿಯೊಂದು ಆಲೋಚನೆಯನ್ನು ಯೇಸು ಕ್ರಿಸ್ತನ ಪಾದಗಳ ಬಳಿ ನ್ಯಾಯತೀರ್ಪಿಗಾಗಿ ತಂದಿದ್ದಾನೆ. ತನ್ನ ಸ್ವಂತ ಮನಸ್ಸು ಮತ್ತು ಆಲೋಚನೆ ದೇವಕುಮಾರನಿಗೆ ಅಧೀನವಾಗಬೇಕು ಮತ್ತು ತಾನು ಕಲಿಸಿದ ಸತ್ಯದನುಸಾರವಾಗಿ ಇರಬೇಕು ಎಂದು ಬಯಸಲಿಲ್ಲ ಬದಲಾಗಿ ಎಲ್ಲಾ ಮಾನವರ ಮನಸ್ಸು ಹಾಗೂ ಆಲೋಚನೆ ಅಧೀನವಾಗಬೇಕೆಂದು ಬಯಸಿದನು. ಯೇಸು ಕ್ರಿಸ್ತನಿಗೆ ವಿಧೇಯವಾಗಲು ಬಯಸುವ ಮನಸ್ಸುಗಳು ಮತ್ತು ಸಮ್ಮತಿಸಲ್ಪಡುವ ಆಲೋಚನೆಗಳು ಮಾತ್ರವೇ ಅಧೀನವಾಗುವವು ಎಂಬ ದೃಢತೆ ನಮಗಿರಬೇಕು. ಸ್ವಾಭಾವಿಕವಾಗಿ, ಮಾನವರ ಮನಸ್ಸುಗಳು, ತಮ್ಮ ಬಯಕೆಗಳು ಹಾಗೂ ಕ್ರಿಯೆಗಳಂತೆ ಅವಿಧೇಯತೆ ಹಾಗೂ ಪಾಪದವುಗಳಾಗಿವೆ (ರೋಮಾ 8:6-7; ಎಫೆ 4:18). ದೇವರು ಯಾವ ರೀತಿ ಮನಸ್ಸುಗಳು ಆಲೋಚಿಸಬೇಕೆಂದು ಬಯಸಿದನೋ ಆ ರೀತಿಯಾಗಿ ಆಲೋಚಿಸುವ ನೂತನ ಮನಸ್ಸುಗಳು ಮನುಷ್ಯರಿಗೆ ಬೇಕು – ರೋಮಾ 12:2; ಎಫೆ 4:23; ಫಿಲಿಪ್ಪಿ 2:5. ಹಾಗೆಯೇ ಪೌಲನು 1 ಕೊರಿಂಥ 1:17—2:16; 3:18-20; ಕೊಲೊ 2:8 ರಲ್ಲಿ ಮಾನವನ ಜ್ಞಾನವನ್ನು ದೇವರ ಜ್ಞಾನದೊಂದಿಗೆ ಹೋಲಿಕೆ ಮಾಡಿರುವದನ್ನು ನೋಡಿರಿ. **6**

**10:6** ಸತ್ಯಕ್ಕೆ ಪ್ರತಿಕ್ರಿಸಲು ಮತ್ತು ವಿಧೇಯರಾಗಲು ಅವರಿಗೆ ಪ್ರತಿಯೊಂದು ಅವಕಾಶವನ್ನು ಕೊಡಬೇಕೆಂದು ಪೌಲನು ಬಯಸಿದನು. ಅಂತಿಮವಾಗಿ ಅವಿಧೇಯತೆಯನ್ನು ಶಿಕ್ಷಿಸುವ ಅಧಿಕಾರವು ಆತನಿಗಿದೆ ಎಂಬದನ್ನು ಅವರು ತಿಳಿದುಕೊಳ್ಳುವರು. 13:10; 1 ಕೊರಿಂಥ 4:21; 5:3-5 ರೊಂದಿಗೆ ಹೋಲಿಸಿ ನೋಡಿರಿ. **7**

**10:7** ವಚನ 12; 5:12. **8**

**10:8** *"ಹೊಗಳಿಕೊಳ್ಳುವದು"*– 1:12 ರ ನೋಟ್ ನೋಡಿರಿ. **10**

**10:10** ವಚನ 1. ಪೌಲನ ಬೋಧನೆಯಲ್ಲಿ ವಾಕ್ಚಾತುರ್ಯ ಮತ್ತು ಮಾನುಷಿಕ ಜ್ಞಾನದ ಕೊರತೆ ಇದೆ (11:6) ಇದಲ್ಲದೆ ಅವನು ಸತ್ಯವನ್ನು ಬಹಳ ಸಾತ್ವಿಕತೆ ಹಾಗು ದೀನತೆಯಿಂದ ವ್ಯಕ್ತಪಡಿಸುತ್ತಾನೆ ಎಂದು ಹೇಳುತ್ತಾ ಇದ್ದರು. ಅವನ ಪತ್ರಗಳು "ಗೌರವವಾದವುಗಳು ಮತ್ತು ಬಲವುಳ್ಳವುಗಳು" ಎಂದು ಹೇಳುವ ಮೂಲಕ ಸತ್ಯವನ್ನು ಹೇಳಿದರು. **12**

**10:12** ಒಂದುವೇಳೆ ಮನುಷ್ಯರು ತಮ್ಮನ್ನು ಇತರರೊಂದಿಗೆ ಹೋಲಿಸಿಕೊಂಡರೆ (ಅಂಥ

ಹೋಲಿಕೆಗಳು ನಿಸ್ಸಂದೇಹವಾಗಿ ಅವನ ಪರವಾಗಿಯೇ ಇರುತ್ತವೆ) ತಮ್ಮನ್ನು ಹೊಗಳಿಕೊಳ್ಳುವ ವಿಷಯಗಳು ಅವರಿಗೆ ಸಿಗುತ್ತವೆ. ಆದರೆ ಪೌಲನು ಈ ಆಟ ಆಡಲು ನಿರಾಕರಿಸಿದನು. ಇತರೆ ಮನುಷ್ಯರೊಂದಿಗೆ ಹೋಲಿಸಿಕೊಳ್ಳುವದಕ್ಕಿಂತಲೂ ಹೆಚ್ಚಾದ ಗುಣಮಟ್ಟವಿದೆ ಎಂಬದನ್ನು ಅವನು ಬಲ್ಲವನಾಗಿದ್ದನು. ಯೇಸು ಕ್ರಿಸ್ತನು ದೊಡ್ಡ ಮಾದರಿಯಾಗಿದ್ದಾನೆ ಮತ್ತು ಯಾವನಾದರೂ ತನ್ನನ್ನು ಆತನೊಂದಿಗೆ ಹೋಲಿಸಿಕೊಂಡರೆ ತನ್ನ ಕುರಿತು ಉನ್ನತವಾಗಿ ಯೋಚಿಸಿಕೊಳ್ಳಲು ಆಗುವದೇ ಇಲ್ಲ. **13**

**10:13** *"ಹೊಗಳಿಕೊಳ್ಳದೆ"*– 1:12.

*"ಮೇರೆ"*– ಪೌಲನು ಅಪೊಸ್ತಲನಾಗಿ, ಸೌವಾರ್ತಿಕನಾಗಿ ಮತ್ತು ಬೋಧಕನಾಗಿ ತನ್ನ ಸೇವೆಯ ಬಗ್ಗೆ ಮಾತನಾಡಿದ್ದಾನೆ. ಮೊದಲು ಅಲ್ಲಿ ಸುವಾರ್ತೆಯನ್ನು ಸಾರಿದ್ದು ಮತ್ತು ಸಭೆಯನ್ನು ಸ್ಥಾಪಿಸಿದ್ದು ಆತನೇ (1 ಕೊರಿಂಥ 4:14-15; 9:2). **15**

**10:15** ಕೊರಿಂಥಕ್ಕೆ ಬಂದ ಸುಳ್ಳು ಅಪೊಸ್ತಲರು (ವ 13) ಸಭೆಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಬೇಕೆಂದಿದ್ದರು ಮತ್ತು ಸೇವೆಯನ್ನು ತಮ್ಮದು ಎಂದು ಹೇಳಿಕೊಳ್ಳುತ್ತಾ ಇದ್ದರು. ಸಹಜವಾಗಿ ಇದುವೇ ಸುಳ್ಳು ಬೋಧಕರ ಸ್ವಭಾವವಾಗಿದೆ. ಆದರೆ ಪೌಲನು ಕೊರಿಂಥದಲ್ಲಿ ತಾನು ಮಾಡಿದ ಸೇವೆಯ ವಿಷಯದಲ್ಲಿ "ಹೊಗಳಿಕೊಳ್ಳದವನಾಗಿದ್ದನು." **16**

**10:16** ಅಲ್ಲಿದ್ದ ಸಭೆ ಸತ್ಯದಲ್ಲಿ ದೃಢವಾಗಿ ನೆಲೆಯಾಗುವದು ಆದ್ದರಿಂದ ಬೇರೆ ಕಡೆಗಳಿಗೆ ಹೋಗಲು ತಾನು ತನ್ನ ಸಮಯ ಹಾಗೂ ಸಾಮರ್ಥ್ಯವನ್ನು ಉಪಯೋಗಿಸಬಹುದು ಎಂಬದಾಗಿ ಪೌಲನು ನಿರೀಕ್ಷಿಸಿದ್ದನು. ರೋಮಾ 15:20-22 ರೊಂದಿಗೆ ಹೋಲಿಸಿ ನೋಡಿರಿ. **17**

- **10:17** ಯೆರೆ 9:24; 1 ಕೊರಿಂಥ 1:31. **18**

**10:18** ವಚನ 12. ಸುಳ್ಳು ಬೋಧಕರು ತಮ್ಮನ್ನು ಹೊಗಳಿಕೊಳ್ಳುತ್ತಾ ಇದ್ದರು ಮತ್ತು ಜನರು ತಮ್ಮನ್ನು ಹೊಗಳಬೇಕೆಂದು ಬಯಸುತ್ತಾ ಇದ್ದರು (3:1). ಯೋಹಾನ 5:44 ರೊಂದಿಗೆ ಹೋಲಿಸಿ ನೋಡಿರಿ. ಪೌಲನು ದೇವರಿಂದ ಮಾತ್ರವೇ ಸಮ್ಮತಿಯು ಸಿಗಬೇಕೆಂದು ಬಯಸುತ್ತಾ ಇದ್ದನು (1 ಕೊರಿಂಥ 4:3-5; ಗಲಾ 1:10; 1 ಥೆಸ 2:4).

# 11 2

**11:2** *"ಚಿಂತೆ"*– ಅವನು ಆತ್ಮೀಕ ವಿಷಯಗಳ ಬಗ್ಗೆ ಮಾತನಾಡುತ್ತಾ ಇದ್ದಾನೆ. ಕೊರಿಂಥದಲ್ಲಿದ್ದ ಕೆಲವರು ಸುಳ್ಳು ಬೋಧಕರ ಬೋಧನೆಗಳನ್ನು ಕೇಳಿಸಿಕೊಳ್ಳುತ್ತಾ ಇದ್ದರು, ಆದ್ದರಿಂದ ತಾನು ಕಲಿಸಿದ ಸತ್ಯವನ್ನು ಅವರು ಮರೆಯುವರೇನೋ ಎಂದು ಅವನು ಭಯಪಡುತ್ತಾ ಇದ್ದನು. "ಚಿಂತೆ" –ಎಂಬ ಪದ ಅವರ ಮೇಲೆ ಆತನಿಗಿದ ಪ್ರೀತಿಯನ್ನು ಸೂಚಿಸುತ್ತದೆ. ಅವನು ಆ ಕ್ರೈಸ್ತರನ್ನು ತನಗಾಗಿ ಅಥವಾ ತನ್ನ ಸ್ವಂತ ಹೊಗಳಿಕೆ ಮತ್ತು ಪ್ರಭಾವಕ್ಕಾಗಿ ಇಟ್ಟುಕೊಳ್ಳಲು ಬಯಸುತ್ತಾ ಇರಲಿಲ್ಲ ಎಂಬದನ್ನು ಗಮನಿಸಿರಿ. ಯೇಸು ಕ್ರಿಸ್ತನೊಂದಿಗೆ ಅವರಿಗಿದ್ದ ಸಂಬಂಧವು ಅವನ ಚಿಂತೆಗೆ ಕಾರಣವಾಗಿತ್ತು.

*"ಗಂಡ"*– ಮತ್ತಾಯ 22:1-2; ಯೋಹಾನ 3:29; ರೋಮಾ 7:1-4; ಎಫೆ 5:24-33; ಪ್ರಕ 19:6-9. ಕೀರ್ತನೆ 45:9-15; ಯೆಶಾಯ 54:5; ಯೆರೆ 3:14,20; ಹೋಶೇಯ 2:16,19 ರೊಂದಿಗೆ ಹೋಲಿಸಿ ನೋಡಿರಿ. **3**

**11:3** ಆದಿ 3:1-7. ಆದಾಮನಿಗೆ ಬದಲಾಗಿ ಹವ್ವಳ ಬಗ್ಗೆ ಮಾತನಾಡುವದು ಪೌಲನಿಗೆ ಯುಕ್ತವಾಗಿದೆ ಯಾಕಂದರೆ ಹವ್ವಳು ಮೊದಲನೆಯ ಆದಾಮನ ಮದಲಗಿತ್ತಿಯಾಗಿದ್ದಾಳೆ ಮತ್ತು ಸಭೆ ಕಡೆಯ ಆದಾಮನ ಮದಲಗಿತ್ತಿಯಾಗಿದ್ದಾಳೆ (1 ಕೊರಿಂಥ 15:45) ಮತ್ತು ಹವ್ವಳು ವಂಚನೆಗೆ ಒಳಗಾದಳೇ ಹೊರತು ಆದಾಮನು ಒಳಗಾಗಲಿಲ್ಲ (1 ತಿಮೊ 2:14). ಕೊರಿಂಥದಲ್ಲಿದ್ದ ವಿಶ್ವಾಸಿಗಳು ಸೈತಾನನ ವಂಚನೆಯನ್ನು ಎದುರಿಸುತ್ತಾ ಇದ್ದರು (ವ 13-15). **4-5**

**11:4-5** ಪೌಲನು ಅಲ್ಲಿದ್ದ ಕೆಲವು ಕ್ರೈಸ್ತರ ವಿಷಯದಲ್ಲಿ ಯಾಕೆ ಹೆದರಿಕೆಯುಳ್ಳವನಾಗಿದ್ದನು ಎಂಬದಕ್ಕೆ ಕಾರಣವನ್ನು ತಿಳಿಸಿದ್ದಾನೆ – ಅವರು ಸತ್ಯದ ಮೇಲಿನ ಪ್ರೀತಿಯಲ್ಲಿ ಕೊರತೆಯುಳ್ಳವರಾಗಿದ್ದರು ಮತ್ತು ತಪ್ಪುಗಳನ್ನು ಗುರುತಿಸಲು ವಿಫಲರಾಗಿದ್ದರು. ಅವರು ಸುಳ್ಳು ಬೋಧಕರ ವಿರುದ್ಧ ನಿಲ್ಲಲು ಸಹ ಮುಂದಾಗದವರಾಗಿದ್ದರು. ಅವರು ಎಲ್ಲವನ್ನೂ ನೋಡಿಕೊಂಡು ಸುಮ್ಮನೆ ಇದ್ದರು ಆದ್ದರಿಂದ ಪೌಲನು ಅವರನ್ನು ಎಚ್ಚರಿಸಿದನು. ಸುಳ್ಳು ಬೋಧನೆಗಳನ್ನು ಸುಮ್ಮನೆ ಕೇಳಿಸಿಕೊಳ್ಳುತ್ತಾ ಇರುವದು ಸತ್ಯ ಮೇಲೆ ಪ್ರೀತಿಯಿಲ್ಲದೆ ಇರುವದನ್ನು ತೋರಿಸುತ್ತದೆ ಎಂಬದನ್ನು ಅವನು ಚೆನ್ನಾಗಿ ಬಲ್ಲವನಾಗಿದ್ದನು. ಯಾವುದೇ ಆತ್ಮ ಅಥವಾ ಬೇರೆಯದನ್ನು ಅಥವಾ ಯಾವುದೋ ಶಕ್ತಿ ಮತ್ತು ಬೇರೆಯದನ್ನು ಹೊಂದಿರುವ ಪ್ರತಿಯೊಬ್ಬ ಧಾರ್ಮಿಕ ನಾಯಕನು ದೇವರಾತ್ಮ ಮತ್ತು ಆತನ ಶಕ್ತಿಯನ್ನು ಹೊಂದಿರುವದಿಲ್ಲ ಎಂಬದನ್ನು ನಾವು ಗಮನಿಸಬೇಕು. ಸುವಾರ್ತೆಯನ್ನು ಸಾರುವವರೆಲ್ಲರೂ ಯೇಸು ಕ್ರಿಸ್ತನ ನಿಜವಾದ

ಸುವಾರ್ತೆಯನ್ನು ಸಾರುತ್ತಾ ಇದ್ದಾರೆ ಎಂದು ಹೇಳಲು ಆಗುವದಿಲ್ಲ (ಗಲಾ 1:6-9; 1 ಯೋಹಾನ 4:1 ನೋಡಿರಿ). ಅವನು ಅಪೊಸ್ತಲರೆಂದು ಹೇಳಿಕೊಳ್ಳುವವರನ್ನು ಹಾಸ್ಯದಿಂದ "ಅತಿಶ್ರೇಷ್ಠರಾದ" ಅಪೊಸ್ತಲರು ಎಂದು ಕರೆದಿದ್ದಾನೆ ಯಾಕಂದರೆ ಅವರು ತಮ್ಮ ಕುರಿತು ತಾವೇ ದೊಡ್ಡ ಹೇಳಿಕೆಗಳನ್ನು ಕೊಡುವವರಾಗಿದ್ದರು. **6**

**11:6** *"ವಾಕ್ಚಾತುರ್ಯದಲ್ಲಿ"*– 10:10; 1 ಕೊರಿಂಥ 2:1-5.

*"ಜ್ಞಾನದಲ್ಲಿ"*– 1 ಕೊರಿಂಥ 2:6-16; ಗಲಾ 1:11-12. **7-12**

**11:7-12** 1 ಕೊರಿಂಥ 9:4-15 ನೋಡಿರಿ. ಪೌಲನು ಅಲ್ಲಿದ್ದ ಸಭೆಯಿಂದ ಯಾವುದೇ ರೀತಿಯ ಸಹಾಯವನ್ನು ಪಡೆಯಲಿಲ್ಲ ಯಾಕಂದರೆ ಅವನು ನಿಜವಾದ ಅಪೊಸ್ತಲನಲ್ಲವೆಂದು ಮತ್ತು ತಾನು ಅದಕ್ಕೆ ಅರ್ಹನಲ್ಲವೆಂದು ಅವನಿಗೆ ಗೊತ್ತಿದೆ ಹಾಗೂ ಅವನು ನಿಜವಾದ ಅಪೊಸ್ತಲನಲ್ಲದೆ ಇರುವದರಿಂದ ಅದರ ಘನತೆಗೆ ವಿರುದ್ಧವಾಗಿ ತನ್ನ ಜೀವನಕ್ಕಾಗಿ ದುಡಿಯುತ್ತಾ ಇದ್ದಾನೆ (ಅಪೊ 18:3) ಎಂದು ಅವನ ವೈರಿಗಳು ಹೇಳುತ್ತಾ ಇದ್ದರು. ಆದರೆ ಪೌಲನು ಹೇಳುವದೇನೆಂದರೆ, ಅವರ ಮೇಲೆ ನನಗಿರುವ ಪ್ರೀತಿಯೇ ನನಗೆ ಪ್ರೇರಣೆಯಾಗಿದೆ (ವ 11), ಅವರು ಆತ್ಮೀಕ ವಿಷಯಗಳಲ್ಲಿ ಅಭಿವೃದ್ಧಿಯಾಗಬೇಕೆಂದು (ವ 7) ಅವರನ್ನು ಉತ್ತೇಜನಪಡಿಸುವದೇ ನನ್ನ ಬಯಕೆಯಾಗಿದೆ. **8**

**11:8** *"ಸುಲುಕೊಂಡೆನು"*– ಪೌಲನು ಇಲ್ಲಿ ಅಲಂಕಾರಿಕವಾಗಿ ಮಾತನಾಡುತ್ತಾ ಇದ್ದಾನೆ. ಅವನು ಆರ್ಥಿಕ ಸಹಾಯಕ್ಕಾಗಿ ಬೇರೆ ಸಭೆಗಳನ್ನು ಕೇಳಿಕೊಳ್ಳಲಿಲ್ಲ ಆದರೆ ಅವರು ಕೊಟ್ಟಾಗ ಅಂಗೀಕರಿಸಿಕೊಂಡನು, ಕೆಲವೊಮ್ಮೆ ಅವನಿಗೆ ಕೊಟ್ಟವರೇ ಬಡವರಾಗಿದ್ದರು. ಹೆಚ್ಚು ಐಶ್ವರ್ಯವಂತರಾದ ಕೊರಿಂಥದವರ (8:14) ನಡುವೆ ಸೇವೆಯನ್ನು ಮಾಡುತ್ತಿದ್ದ ಸಮಯದಲ್ಲಿ ಅವರಿಂದ ಸಹಾಯ ಪಡೆಯುವದನ್ನು ಅವನು ಸುಲುಕೊಳ್ಳುವದಕ್ಕೆ ಸಮಾನ ಅಂದುಕೊಂಡಿದ್ದನು. **9**

**11:9** ಪೌಲನು ಕೆಲವೊಮ್ಮೆ ವಿಶ್ವಾಸಿಗಳಿಂದ ಬೌತಿಕ ಸಹಾಯವನ್ನು ಅಂಗೀಕರಿಸಿಕೊಳ್ಳುತ್ತಾ ಇದ್ದನು. ಆದರೆ ಆತನು ಸಭೆಯಲ್ಲಿ ಇದ್ದು ಸೇವೆಯನ್ನು ಮಾಡುವ ಸಮಯದಲ್ಲಿ ತೆಗೆದುಕೊಳ್ಳುತ್ತಾ ಇರಲಿಲ್ಲ ಎಂಬದಾಗಿ ಅನ್ನಿಸುತ್ತದೆ. **10**

**- 11:10** 1 ಕೊರಿಂಥ 9:15-18. **12**

**11:12** ಕೊರಿಂಥದಲ್ಲಿದ್ದ ಸುಳ್ಳು ಅಪೊಸ್ತಲರು ಅಲ್ಲಿದ್ದ ಕ್ರೈಸ್ತರಿಂದ ತಮ್ಮ

ಬೋಧನೆಗಾಗಿ (2:17) ಹಣವನ್ನು ತೆಗೆದುಕೊಳ್ಳುತ್ತಾ ಇದ್ದರು ಎಂಬ ವಿಷಯದಲ್ಲಿ ಯಾವ ಸಂದೇಹವೂ ಇರಲಿಲ್ಲ. ನಾವು ಪೌಲನಿಗೆ ಸಮಾನರು ಎಂಬದಾಗಿ ಅವರು ಆಲೋಚಿಸುತ್ತಾ ಇದ್ದರು, ಆದರೂ ಉಚಿತವಾಗಿ ಸುವಾರ್ತೆಯನ್ನು ಸಾರುವದರಲ್ಲಿ ಅವರು ತನಗೆ ಸಮವಲ್ಲ ಎಂಬದನ್ನು ಪೌಲನು ತೋರಿಸುತ್ತಾ ಇದ್ದಾನೆ. ಅದನ್ನು ಹೆಚ್ಚಾಗಿ ತೋರಿಸಬೇಕೆಂಬ ದೃಢತೆ ಅವನಲ್ಲಿತ್ತು. **13-15**

**11:13-15** ಈಗ ಪೌಲನು ದೇವರಾತ್ಮನ ಪ್ರೇರಣೆಯಿಂದ ಕೊರಿಂಥದಲ್ಲಿದ್ದ ಸುಳ್ಳು ಧಾರ್ಮಿಕ ನಾಯಕರು ಹಾಗೂ ಎಲ್ಲಾ ತಲೆಮಾರುಗಳಲ್ಲಿಯೂ ಎಲ್ಲಾ ಸ್ಥಳಗಳಲ್ಲಿಯೂ ಯೇಸು ಕ್ರಿಸ್ತನ ಹೆಸರು ಹೇಳಿಕೊಂಡು ಬರುವ ಅಂಥ ಸ್ವಭಾವಗಳನ್ನು ಪೂರ್ತಿಯಾಗಿ ಪ್ರದರ್ಶಿಸಿದ್ದಾನೆ. ಅವನು ಅವರ ಬಗ್ಗೆ ಆರು ವಿಷಯಗಳನ್ನು ಹೇಳಿದ್ದಾನೆ. ಅವು ಯಾವುವೆಂದರೆ "ಸುಳ್ಳು" – ದೇವರು ನಮ್ಮನ್ನು ಕಳುಹಿಸಿದ್ದಾನೆ ಎಂದು ಅವರು ಹೇಳುತ್ತಾರೆ ಆದರೆ ಆತನು ಅವರನ್ನು ಕಳುಹಿಸಿಲ್ಲ (ಪ್ರಕ 2:2; ಯೆರೆ 23:21 ರೊಂದಿಗೆ ಹೋಲಿಸಿ ನೋಡಿರಿ). ಅವರು "ವಂಚಿಸುವ ಕೆಲಸಗಾರರಾಗಿದ್ದಾರೆ" – ಅವರ ವಿಧಾನಗಳು ಮತ್ತು ಸಂದೇಶಗಳು ವಂಚನೆಯುಳ್ಳವುಗಳಾಗಿವೆ ಹಾಗೂ ಇತರರನ್ನು ವಂಚಿಸುವದೇ ಅವರ ಉದ್ದೇಶವಾಗಿದೆ (ಮತ್ತಾಯ 24:11,24; ರೋಮಾ 16:18; 2 ಥೆಸ 2:9-10). ಅವರು ಬಾಹ್ಯವಾಗಿ ತಮ್ಮನ್ನು ಬದಲಾಯಿಸಿಕೊಳ್ಳುತ್ತಾರೆ, ಜ್ಞಾನವಂತರೆಂದು ತೋರಿಸಿಕೊಳ್ಳುತ್ತಾರೆ, ವೇಷ ಬದಲಿಸಿಕೊಳ್ಳುತ್ತಾರೆ ಆದ್ದರಿಂದ ಯೇಸು ಕ್ರಿಸ್ತನೇ ಅವರನ್ನು ಕಳುಹಿಸಿದ್ದಾನೆಂದು ಇತರರು ತಿಳಿದುಕೊಳ್ಳುತ್ತಾರೆ ಆದರೆ ಅವರ ದುಷ್ಟ ಹೃದಯಗಳು ಬದಲಾಗಿರುವದಿಲ್ಲ. ಅವರು ಸೈತಾನನ ಸೇವಕರಾಗಿದ್ದಾರೆ (ವ 15; ಯೋಹಾನ 8:44; 2 ಥೆಸ 2:9; 1 ತಿಮೊ 4:1-2). ತಾವು ನೀತಿಯ ಸೇವಕರು ಎಂಬದಾಗಿ ಅವರು ತಮ್ಮನ್ನು ತೋರ್ಪಡಿಸಿಕೊಳ್ಳುತ್ತಾರೆ – ಅವರು ನೀತಿಯ ಬಗ್ಗೆ ಮಾತನಾಡುತ್ತಾರೆ ಆದರೆ ಅವರು ನಿಜವಾಗಿಯೂ ಪಾಪದ ದಾಸರಾಗಿದ್ದಾರೆ (2 ಪೇತ್ರ 2:18-19. 2 ಪೇತ್ರ 2 ನೇ ಅಧ್ಯಾಯವು ಪೂರ್ತಿಯಾಗಿ ಮತ್ತು ಯೂದನ ಪತ್ರಿಕೆಯು ಸುಳ್ಳು ಧಾರ್ಮಿಕ ಬೋಧಕರು ಹೇಗಿರುವರು ಎಂಬದನ್ನು ಪ್ರಕಟಿಸುತ್ತವೆ). ದೇವರು ಅವರ ಕಾರ್ಯಗಳಿಗನುಸಾರ ಅವರಿಗೆ ತೀರ್ಪು ಕೊಡುವನು (2 ಥೆಸ 2:8; 2 ಪೇತ್ರ 2:3,9; ಯೂದ 13; ಮತ್ತಾಯ 7:22-23). ಕೊರಿಂಥದಲ್ಲಿದ್ದ ಕೆಲವು ಕ್ರೈಸರು ಅಂಥವರ ಬೋಧನೆಗಳನ್ನು ಕೇಳಿಸಿಕೊಳ್ಳುತ್ತಾ ಇದ್ದರು, ಅವರಿಗೆ ಹಣ ಕೊಡುತ್ತಾ ಇದ್ದರು, ಅವರ ಬೋಧನೆಗಳನ್ನು ಕೇಳಿಸಿಕೊಂಡು ಸುಮ್ಮನೆ

ಇದ್ದರು. ಪೌಲನ ಎಚ್ಚರಿಕೆ ನಮಗೆ ಅರ್ಥವಾಗುತ್ತಾ ಇಲ್ಲವೇ? ಇಂಥ ಕಾರ್ಯಗಳನ್ನು ಮಾಡುವವರ ಆತ್ಮೀಕ ಸ್ಥಿತಿಯ ಬಗ್ಗೆ ಸಂದೇಹಪಡಲು ಇಷ್ಟು ಕಾರಣಗಳು ಸಾಲದೇ? **14**

**11:14** ಸೈತಾನನು ತನ್ನನ್ನು ಸೈತಾನನೆಂದು ಪ್ರಕಟಿಸಿಕೊಳ್ಳುತ್ತಾ ಬರುವದಿಲ್ಲ ಮತ್ತು ಅವನು ಪಾಪ ಹಾಗೂ ದುಷ್ಟತನವನ್ನು, ಪಾಪ ಹಾಗೂ ದುಷ್ಟತನವೆಂದು ಕಾಣಿಸಲು ಬಿಡುವದಿಲ್ಲ. ಅವನು ತನ್ನನ್ನು ಬುದ್ಧಿವಂತನನ್ನಾಗಿ, ಪ್ರಕಾಶಮಾನನಾಗಿ, ಆಕರ್ಷಕನಾಗಿ ತೋರ್ಪಡಿಸಿಕೊಳ್ಳುತ್ತಾನೆ. ಅವನು ದೇವರ ಹಾಗೆ ಬರುತ್ತಾನೆ. ದೇವರ ವಾಕ್ಯಗಳ ನಿರಾಕರಣೆ ಸರಿಯಾದದ್ದೇ ಎಂದು ಹೇಳುವ ಹಾಗೆ ಮಾಡುತ್ತಾನೆ. ಪಾಪವು ನೀತಿಯಂತೆ ಕಾಣುವ ಹಾಗೆ ಮಾಡುತ್ತಾನೆ. ಅವನು ಇಡೀ ಲೋಕವನ್ನು ತಲೆಕೆಳಗಾಗಿ ಮಾಡಲು ಪ್ರಯತ್ನಿಸುತ್ತಾನೆ ಮತ್ತು ಸತ್ಯವು ತಪ್ಪಾಗಿ ತೋರುವಂತೆ ಹಾಗೂ ತಪ್ಪು ಸತ್ಯವಾಗಿ ತೋರುವಂತೆ, ಕತ್ತಲೆಯು ಬೆಳಕಾಗಿ ತೋರುವಂತೆ ಮತ್ತು ಬೆಳಕು ಕತ್ತಲೆಯಾಗಿ ತೋರುವಂತೆ ಮಾಡುತ್ತಾನೆ. ಇದಲ್ಲದೆ ಮಾನವರಲ್ಲಿಯೂ ಸ್ವೇಚ್ಛೆಯಿಂದ ಅವನಿಗೆ ಸಹಾಯ ಮಾಡುವವರು ಅನೇಕರಿದ್ದಾರೆ. ದೇವರು ಯೆಶಾಯ 5:20 ರಲ್ಲಿ ಅಂಥವರ ಮೇಲೆ ನ್ಯಾಯತೀರ್ಪು ವಿಧಿಸಿದ್ದಾನೆ. 1 ಪೂರ್ವ 21:1; ಮತ್ತಾಯ 4:1; ಯೋಹಾನ 8:44 ರಲ್ಲಿ ಸೈತಾನನ ಕುರಿತಾದ ನೋಟ್ ನೋಡಿರಿ. **16-21**

**11:16-21** ಪೌಲನು ಎಲ್ಲಿಯೂ ತನ್ನನ್ನು ಹೊಗಳಿಕೊಂಡಿಲ್ಲ. ದೇವರ ಕೃಪೆ ಮತ್ತು ಶಕ್ತಿ ಇಲ್ಲದೆ ಹೋದರೆ ತಾನು ಏನು ಎಂಬದು ಅವನಿಗೆ ಚೆನ್ನಾಗಿ ಗೊತ್ತಿತ್ತು – 12:11; 7:1-8; ಎಫೆ 3:8; 1 ತಿಮೊ 1:15. ತನ್ನನ್ನು ಹೊಗಳಿಕೊಳ್ಳುವದನ್ನು ಅವನು ಬಹಳವಾಗಿ ದ್ವೇಷಿಸುತ್ತಾ ಇದ್ದನು. ಅದು ಅವನಿಗೆ ಮೂರ್ಖತನವೆಂದು ಅನ್ನಿಸುತ್ತಾ ಇತ್ತು. ಆದರೆ ಕೊರಿಂಥದಲ್ಲಿದ್ದ ಕ್ರೈಸ್ತರ ನಿಮಿತ್ತ ಅವನು ತನ್ನ ಅಪೊಸ್ತಲತನವನ್ನು ಸಮರ್ಥಿಸಿಕೊಳ್ಳಲು ಮುಂದಾದನು (12:19). ಸೇವಾ ಕಾರ್ಯಗಳನ್ನು ಮಾಡುವಂತೆ ದೇವರು ಅವನನ್ನು ಬಲಪಡಿಸಿದ್ದು ಮತ್ತು ಯೇಸು ಕ್ರಿಸ್ತನಿಗಾಗಿ ಶ್ರಮೆಗಳನ್ನು ಅನುಭವಿಸುವಂತೆ ಮಾಡಿದ್ದನ್ನು ಹೇಳುವ ಮೂಲಕ ಅವನು ಆ ಕಾರ್ಯವನ್ನು ಮಾಡಿದನು. **19-21**

**11:19-21** ಅವರನ್ನು ನಾಚಿಕೆಪಡಿಸುವ ಸಲುವಾಗಿ ಅವನು ವ್ಯಂಗ್ಯವಾಗಿ ಮಾತನಾಡಿದ್ದಾನೆ. ಅವರು ಸುಳ್ಳು ಬೋಧಕರ ವಿಷಯದಲ್ಲಿ ಹೆಚ್ಚಳಪಡುವವರಾಗಿದ್ದರು ಆದದರಿಂದ ಈಗ ಅವರು ಯೇಸು ಕ್ರಿಸ್ತನ ನಿಜವಾದ ಅಪೊಸ್ತಲನ ಹೆಚ್ಚಳಪಡುವಿಕೆಯನ್ನು

ಸಹಿಸಿಕೊಳ್ಳಬೇಕಾಯಿತು. 20 ನೇ ವಚನವು ಅಲ್ಲಿದ್ದ ಸುಳ್ಳು ಬೋಧಕರು ಏನು ಮಾಡುತ್ತಾ ಇದ್ದರು ಎಂಬದನ್ನು ವಿವರಿಸುತ್ತದೆ. **20**

**11:20** *"ವಶಮಾಡಿಕೊಳ್ಳುವದು"*– ಅವರು ಕ್ರೈಸ್ತರನ್ನು ಮೋಶೆಯ ಧರ್ಮಶಾಸ್ತ್ರಕ್ಕೆ ಒಳಪಡಿಸಲು ಪ್ರಯತ್ನಿಸುತ್ತಾ ಇದ್ದರು ಎಂಬದಾಗಿ ಅನ್ನಿಸುತ್ತದೆ (ಅಪೊ 15:1; ಗಲಾ 2:4 ರೊಂದಿಗೆ ಹೋಲಿಸಿ ನೋಡಿರಿ), ಆದರೂ ಯಾವುದೇ ರೀತಿಯ ಸುಳ್ಳು ಬೋಧನೆಗಳಿಗೆ ಒಳಗಾಗುವದೂ ಒಂದು ತರಹದ ದಾಸತ್ವವಾಗಿದೆ. **21**

**11:21** *"ಹೊಗಳಿಕೊಳ್ಳುವದು"*– 1:12 ರ ನೋಟ್ ನೋಡಿರಿ. **22**

**11:22** ಅಲ್ಲಿದ್ದ ಸುಳ್ಳು ಬೋಧಕರು ಯೆಹೂದ್ಯರಾಗಿದ್ದು ನಾವು ಯೇಸು ಕ್ರಿಸ್ತನ ಹಿಂಬಾಲಕರು ಎಂದು ಹೇಳುತ್ತಾ ಇದ್ದರು ಆದರೂ ರಕ್ಷಣೆ ಹೊಂದಲು ಮೋಶೆಯ ಧರ್ಮಶಾಸ್ತ್ರ ಪಾಲನೆಯಿಂದ ಮಾತ್ರ ಸಾಧ್ಯ ಎಂದು ಒತ್ತಾಯಪಡಿಸುವವರಾಗಿದ್ದರು ಎಂಬದಕ್ಕೆ ಇದೂ ಒಂದು ಪುರಾವೆಯಾಗಿದೆ. ನಾವು ಅಬ್ರಹಾಮನ ವಂಶದವರು ಎಂದು ಅವರು ಹೊಗಳಿಕೊಳ್ಳುತ್ತಾ ಇದ್ದರು ಇದಲ್ಲದೆ ಅವರು ಸಂರಕ್ಷಿಸಲ್ಪಟ್ಟ ಸಮುದಾಯದವರಾದ್ದರಿಂದ, ಧರ್ಮಶಾಸ್ತ್ರವನ್ನು ಮೂಲ ಇಬ್ರಿಯ ಭಾಷೆಯಲ್ಲಿ ಓದುವವರಾದ್ದರಿಂದ ಹೆಮ್ಮೆಪಡುತ್ತಾ ಇದ್ದರು (ಅಪೊ 6:1 ರ ನೋಟ್ ನೋಡಿರಿ). ಆದರೆ ಪೌಲನೂ, ನಾನೂ ಈ ಎಲ್ಲಾ ಕಾರ್ಯಗಳನ್ನು ಮಾಡಬಲ್ಲೆನು ಎಂದು ಹೇಳಿದನು (ರೋಮಾ 11:1; ಫಿಲಿಪ್ಪಿ 3:5). **23-29**

**11:23-29** ನಾವು ಯೇಸು ಕ್ರಿಸ್ತನ ಸೇವಕರು ಎಂದು ಅವರು ಹೇಳಿಕೊಳ್ಳುತ್ತಾ ಇದ್ದರು (ವ 23). ಅವರು ಸೇವಕರು ಎಂಬದನ್ನು ಪೌಲನು ಆಗಲೇ ಅಲ್ಲಗಳೆದಿದ್ದನು (ವ 13-15) ಮತ್ತು ತಾನು ಹೇಳಿರುವ ಪ್ರೀತಿ ಮತ್ತೆ ಇಲ್ಲಿ ಹೇಳುತ್ತಾ ಇಲ್ಲ. ಆ ಬೋಧಕರು ಹೇಳುವದಕ್ಕಿಂತಲೂ ತಾನು ಯೇಸು ಕ್ರಿಸ್ತನ ಸೇವಕರು ಎಂಬದಕ್ಕೆ ಹೆಚ್ಚಾದ ಸಾಕ್ಷಿಗಳು ಇವೆ ಎಂಬದನ್ನು ಅವರು ತೋರಿಸುತ್ತಾ ಇದ್ದನು. ಅವನ ಸಾಕ್ಷಿ ಮೂರು ರೀತಿಯದ್ದಾಗಿದೆ – ಯೇಸು ಕ್ರಿಸ್ತನಿಗಾಗಿ ಅವನು ಪಡುತ್ತಿರುವ ಬಹಳ ಪ್ರಯಾಸ (ವ 23,26,27), ಕ್ರಿಸ್ತನಿಗಾಗಿ ಅವನು ಅನುಭವಿಸಿದ ಶ್ರಮೆಗಳು (ವ 23-27) ಮತ್ತು ಯೇಸು ಕ್ರಿಸ್ತನ ಜನರ ಮೇಲೆ ಅವನಿಗಿದ್ದ ಅಪಾರವಾದ ಕಾಳಜಿ (ವ 28,29). **23**

**11:23** *"ಅಧಿಕ ಪ್ರಯಾಸಗಳು"*– ರೋಮಾ 15:19; 1 ಕೊರಿಂಥ 4:12; ಕೊಲೊ 1:29.

ಪೌಲನು ಇದನ್ನು ಮೊದಲು ಹೇಳಿದ್ದಾನೆ. ಯಾವನಾದರೂ ತನ್ನನ್ನು ಯೇಸು ಕ್ರಿಸ್ತನ ಸೇವಕನೆಂದು ಹೇಳಿಕೊಂಡರೆ ಅವನಿಗೆ ನಿಜವಾದ ಪರೀಕ್ಷೆಗಳು ಮಾತುಗಳಲ್ಲಿ ಅಲ್ಲ ಬದಲಾಗಿ ಕ್ರಿಯೆಯಲ್ಲಿ ಎದುರಾಗುತ್ತದೆ ಹಾಗೂ ಒಬ್ಬನಿಗೆ ಯೇಸು ಕ್ರಿಸ್ತನ ಮೇಲೆ ಎಷ್ಟು ಪ್ರೀತಿಯಿದೆ ಎಂಬದನ್ನು ತಿಳಿಯಬೇಕಾದರೆ ಆತನಿಗಾಗಿ ಕೆಲಸ ಮಾಡಲು ಅವನು ಎಷ್ಟು ಇಷ್ಟವುಳ್ಳವನಾಗಿದ್ದಾನೆ ಎಂಬದನ್ನು ತಿಳಿಯಬೇಕೆಂದು ಪೌಲನು ಚೆನ್ನಾಗಿ ಬಲ್ಲವನಾಗಿದ್ದನು.

*"ಸೆರೆಮನೆಗಳು"*– ಮೊದಲನೆಯ ಶತಮಾನದ ಸಂಪ್ರದಾಯದಿಂದ ಬಂದಿರುವದೇನೆಂದರೆ ಪೌಲನು ಏಲು ಸಾರಿ ಸೆರೆಮನೆಗೆ ಹಾಕಲ್ಪಟ್ಟಿದ್ದನು.

*"ಮರಣ"*– 1:8-9; 2:11-12. **24**

**11:24** ಧರ್ಮಶಾಸ್ತ್ರದ ಪ್ರಕಾರ ಒಬ್ಬನಿಗೆ ನಲವತ್ತು ಚಡಿ ಏಟುಗಳನ್ನು ಮಾತ್ರವೇ ಹೊಡೆಯಬಹುದಾಗಿತ್ತು – ಧರ್ಮೋ 25:1-3. ಸಾಮಾನ್ಯವಾಗಿ ಯೆಹೂದ್ಯರು ಕೇವಲ 39 ಏಟುಗಳನ್ನು ಮಾತ್ರವೇ ಹೊಡೆಯುತ್ತಿದ್ದರು-ಒಂದುವೇಳೆ ತಾವೇನಾದರೂ 40 ಏಟುಗಳನ್ನು ಕೊಟ್ಟರೆ ತಮ್ಮ ಲೆಕ್ಕ ತಪ್ಪಾಗಿ 41 ಏಟುಗಳನ್ನು ಕೊಡುವ ಸಾಧ್ಯತೆ ಇರುತ್ತದೆ, ಹಾಗೂ ಧರ್ಮಶಾಸ್ತ್ರವನ್ನು ಉಲ್ಲಂಘನೆ ಮಾಡಿದಂತಾಗುತ್ತದೆ ಎಂದು ಅವರು ಭಯಪಡುತ್ತಾ ಇದ್ದರು. ಆ ಏಟುಗಳು ಬಹಳ ಭಯಂಕರವಾಗಿರುತ್ತಿದ್ದವು ಮತ್ತು ಕೆಲವೊಮ್ಮೆ ಜನರು ಸತ್ತೇ ಹೋಗುತ್ತಿದ್ದರು. ಒಬ್ಬ ವ್ಯಕ್ತಿ ಯೇಸು ಕ್ರಿಸ್ತನಿಗಾಗಿ ಯಾವ ಶ್ರಮೆಗಳನ್ನು ಅನುಭವಿಸಲು ಸಿದ್ಧನಾಗಿದ್ದಾನೆ ಎಂಬದರ ಆಧಾರದ ಮೇರೆಗೂ ಯೇಸು ಕ್ರಿಸ್ತನ ಮೇಲೆ ಅವನಿಗಿರುವ ಪ್ರೀತಿಯನ್ನು ಅಳತೆ ಮಾಡಲಾಗುತ್ತಾ ಇತ್ತು. **25**

**11:25** *"ಕಲ್ಲೆಸೆದು ಕೊಲ್ಲುವದು"*– ಅಪೊ 14:19-20.

*"ಹಡಗು ಒಡೆದು ಹೋಯಿತು"*– (ಅಪೊ 27:27-44ರಲ್ಲಿ) ಒಮ್ಮೆ ಹಡಗು ಒಡೆದು ಹೋದದ್ದು ಮಾತ್ರವೇ ಬರೆಯಲಾಗಿದೆ. ಪೌಲನು ಅನುಭವಿಸಿದ ಅನೇಕ ಶ್ರಮೆಗಳು ಮತ್ತು ಅವನಿಗೆ ಎದುರಾದ ಅನೇಕ ಅಪಾಯಗಳು ಹೊಸ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿಲ್ಲ, ಅವನು ಇಲ್ಲಿ ತಾನಾಗಿಯೇ ಹೇಳಿರುವದರಿಂದ ನಮಗೆ ಅವು ಗೊತ್ತಾಗಿದೆ. **26**

**11:26** *"ಅಪಾಯಗಳು"*– ಯೇಸು ಕ್ರಿಸ್ತನಿಗಾಗಿ ಒಬ್ಬನು ಏನನ್ನು ಸಹಿಸಿಕೊಳ್ಳಲು ಸಿದ್ಧನಾಗಿದ್ದಾನೆ ಎಂಬದರ ಆಧಾರದ ಮೇರೆಗೂ ಯೇಸು ಕ್ರಿಸ್ತನ ಮೇಲೆ ಅವನಿಗಿರುವ ಪ್ರೀತಿಯನ್ನು ಅಳೆಯಲಾಗುವದು. ಸುಳ್ಳು ಬೋಧಕರು ಕೊರಿಂಥದಲ್ಲಿ ಕುಳಿತುಕೊಂಡು ನಾವು ಬಹಳ ಪ್ರಸಿದ್ಧರು ಎಂದು ಹೊಗಳಿಕೊಳ್ಳುತ್ತಾ ಇದ್ದರು. ಅವರು ಅವರು ಯಾವ

ಶ್ರಮೆಗಳನ್ನು ಅನುಭವಿಸಿದ್ದರು? ಯೇಸು ಕ್ರಿಸ್ತನಿಗಾಗಿ ಎಂಥಾ ಅಪಾಯಗಳನ್ನು ಎದುರಿಸಲು ಅವರು ಸಿದ್ಧರಾಗಿದ್ದರು? 27

**11:27** *"ನಿದ್ದೆಗೆಡುವದು"*– ಬಹಳ ಸಲ ಅವನಿಗೆ ನಿದ್ದೆ ಮಾಡಲು ಸರಿಯಾದ ಸ್ಥಳವೇ ಇರುತ್ತಿರಲಿಲ್ಲ. ಸಹಜವಾಗಿ ಸೇವೆಯ ಭಾರ ಹಾಗೂ ಒತ್ತಡಗಳು ಅವನನ್ನು ಎಚ್ಚರವಾಗಿಯೇ ಇರಿಸುತ್ತಾ ಇದ್ದವು. ತಮ್ಮ ಜೀವಿತಗಳಲ್ಲಿ ಯೇಸು ಕ್ರಿಸ್ತನ ನಿಮಿತ್ತ ಆರಾಮಾಗಿ ಮಲಗುವದನ್ನು ಒಮ್ಮೆಯೂ ತಪ್ಪಿಸದವರು, ಅವನ ಮೇಲೆ ದೂರುಗಳನ್ನು ಹೇಳುತ್ತಾ ಇದ್ದರು.

*"ಹಸಿವೆ", "ಬಾಯಾರಿಕೆ", "ವಸ್ತ್ರವಿಲ್ಲದಿರುವಿಕೆ"*– ಪೌಲನು ರೋಮಾ 8:28,35-37 ವಚನಗಳಲ್ಲಿ ಉನ್ನತ ಮಟ್ಟದ ದೈವಶಾಸ್ತ್ರವನ್ನು ಬರೆದಿಲ್ಲ. ಅವನು ಅವೆಲ್ಲವುಗಳನ್ನು ತನ್ನ ಸ್ವಂತ ಅನುಭವದಿಂದ ಸಾಬೀತುಪಡಿಸಿದ್ದನು. ಇದಲ್ಲದೆ ತಾನು ಮಾಡಿರುವ ಮತ್ತು ಅನುಭವಿಸಿರುವ ಶ್ರಮೆಗಳಿಂದ ತನ್ನ ಅಪೊಸ್ತಲತನವನ್ನು ಸಾಬೀತುಪಡಿಸಿದ್ದನು. ಅವನು ತನ್ನ ಜೀವಿತವನ್ನು ಆರಾಮದಾಯಕವನ್ನಾಗಿ, ಸುಲಭವಾಗಿ, ಆರ್ಥಿಕವಾಗಿ ಭದ್ರಪಡಿಸಿಕೊಳ್ಳಲು ಆಗುತ್ತಾ ಇರಲಿಲ್ಲವೇ? ಖಂಡಿತವಾಗಿಯೂ ಭದ್ರಪಡಿಸಿಕೊಳ್ಳಬಹುದಾಗಿತ್ತು, ಒಂದುವೇಳೆ ಅವನು ಜನರಿಂದ ಅಥವಾ ಸಭೆಗಳಿಂದ ಸಹಾಯ ಕೇಳಿದ್ದರೆ ಸಾಧ್ಯವಿತ್ತು, ಒಂದುವೇಳೆ ಅವನು ಉತ್ತಮವಾದ ವಸತಿ, ಛತ್ರ ಮತ್ತು ಆಹಾರಕ್ಕೆಂದು ಹಣ ತೆಗೆದುಕೊಂಡು ಹೋಗುತ್ತಾ ಇದ್ದರೆ ಸಾಧ್ಯವಿತ್ತು, ಒಂದುವೇಳೆ ಯಾವುದೇ ತೊಂದರೆಯಿರದ ಮತ್ತು ತನ್ನ ಬರೋಣಕ್ಕಾಗಿ ಸರ್ವಸಿದ್ಧತೆಗಳೂ ಮಾಡಲಾಗಿದ್ದ ಸ್ಥಳಗಳಿಗೆ ಹೋಗಿದ್ದರೆ ಸಾಧ್ಯವಿತ್ತು. ಆದರೆ ಅವನು ಇವೆಲ್ಲವುಗಳಲ್ಲಿ ಆಸಕ್ತನಾಗಿರಲಿಲ್ಲ (ಅಪೊ 20:24). ಈ ಕಾರ್ಯಗಳು ಸಾಧ್ಯವಿರದ ಸ್ಥಳಗಳಲ್ಲಿರುವ ಜನರನ್ನು ತಲುಪಲು ಅವನು ಬಯಸಿದನು ಮತ್ತು ಯೇಸು ಕ್ರಿಸ್ತನಿಗಾಗಿ ಶ್ರಮೆಗಳನ್ನು ಅನುಭವಿಸುವದು ಸೌಭಾಗ್ಯ ಹಾಗೂ ಮಹಿಮೆಯಾಗಿದೆ ಎಂದು ಅವನು ಭಾವಿಸಿದನೇ ಹೊರತು ಅವುಗಳನ್ನು ತಪ್ಪಿಸಲು ಪ್ರಯತ್ನಿಸಲಿಲ್ಲ – 4:17; ರೋಮಾ 8:17; ಫಿಲಿಪ್ಪಿ 1:29; 3:10; ಕೊಲೊ 1:24. ಕೊರಿಂಥದಲ್ಲಿ ಕುಳಿತು ಹೊಗಳಿಕೊಳ್ಳುತ್ತಾ ಇದ್ದ – ಮತ್ತು ಇಂದು ಒಂದುವೇಳೆ ಯೇಸು ಕ್ರಿಸ್ತನ ನಿಮಿತ್ತ ತಮಗೇನಾದರೂ ಅವಮಾನವಾದರೆ ಅಥವಾ ಒಂದು ಹೊತ್ತು ಊಟ ಸಿಗದೆ ಹೋದರೆ ಅದುವೇ ದೊಡ್ಡ ಕಷ್ಟ ಅಥವಾ ಸರಿಯಾದ ನಡವಳಿಕೆಯಲ್ಲ ಎಂದು ಯೋಚಿಸುವ ಬೋಧಕರು ಹಾಗೂ ಉಪದೇಶಕರಿಗಿಂತ ಈ ದೇವರ

ಮನುಷ್ಯನು ಬಹಳ ವ್ಯತ್ಯಾಸವುಳ್ಳವನಾಗಿದ್ದನು. **28**

**11:28** *"ಎಲ್ಲಾ ಸಭೆಗಳು"*– ಕೊರಿಂಥದಲ್ಲಿದ್ದ ಸಭೆಗಳು ಮಾತ್ರವಲ್ಲ, ತಾನು ವಿವಿಧ ಸ್ಥಳಗಳಲ್ಲಿ ಸ್ಥಾಪನೆ ಮಾಡಿದ ಸಭೆಗಳು ಮಾತ್ರವಲ್ಲ, ಬದಲಾಗಿ ತಾನು ನೋಡದೆ ಇರುವ ಸಭೆಗಳೂ (ಕೊಲೊ 2:1). ಎಲ್ಲಾ ಸಭೆಗಳು ಯೇಸು ಕ್ರಿಸ್ತನೊಂದಿಗೆ ಮತ್ತು ಭೂಲೋಕದಲ್ಲಿರುವ ಯೇಸು ಕ್ರಿಸ್ತನ ಪ್ರಖ್ಯಾತಿಯೊಂದಿಗೆ ಹೊಂದಿಕೆಯಾಗಿವೆ ಆದ್ದರಿಂದ ಪೌಲನ ಮನಸ್ಸಿನಲ್ಲಿ ಅವುಗಳೆಲ್ಲವೂ ತನ್ನೊಂದಿಗೆ ಹೊಂದಿಕೆಯಾಗಿವೆ. ಕೆಲವೊಮ್ಮೆ ಒಂದು ಸಭೆಯ ಯೋಚನೆಯು ಸಭಾಪಾಲಕನನ್ನು ಕುಗ್ಗಿಸಿಬಿಡುತ್ತವೆ. ಪೌಲನ ಹೃದಯ ಎಲ್ಲಾ ಸಭೆಗಳ ಬಗ್ಗೆ ಚಿಂತಿಸುವದಾಗಿತ್ತು. **29**

**11:29** ಸಭೆಗಳು ಮಾತ್ರ ಅವನ ಮೇಲೆ ಆಧಾರಗೊಂಡಿರಲಿಲ್ಲ, ಸಭೆಗಳಲ್ಲಿರುವವರೂ ವ್ಯಕ್ತಿಗತವಾಗಿ ಅವನ ಮೇಲೆ ಆಧಾರಗೊಂಡಿದ್ದರು.

*"ಬಲಹೀನನು"*– ರೋಮಾ 14:1; 15:1; 1 ಕೊರಿಂಥ 9:22.

*"ತಾಪಪಡುವದು"*– ಕ್ರೈಸ್ತರು ವ್ಯಕ್ತಿಗತವಾಗಿ ತಮ್ಮ ನಂಬಿಕೆಯನ್ನು ಎಡವಿಬೀಳುವಂತೆ ಇತರರು ಕಾರಣರಾದರೆ ಅವನು ಬಹಳವಾಗಿ ತಾಪಪಡುವವನಾಗಿದ್ದನು. ಅವನು ತನ್ನ ಮಾತುಗಳನ್ನೇ ರೋಮಾ 12:15; ಮತ್ತು ಗಲಾ 6:2 ರಲ್ಲಿ ನೆರವೇರಿಸಿದನು. ಅವರು ಅನುಭವಿಸುವದನ್ನೇ ಅವನೂ ಅನುಭವಿಸಿದನು, ಅವರ ಚಿಂತೆಗಳನ್ನೆಲ್ಲಾ ತನ್ನ ಮೇಲೆ ಹೊತ್ತುಕೊಂಡನು, ಅವರ ಸಮಸ್ಯೆಗಳು ಹಾಗೂ ಕಷ್ಟಗಳನ್ನೂ ಹೊತ್ತುಕೊಂಡನು. ಯೇಸು ಕ್ರಿಸ್ತನು ಅವನಿಗೆ ಇವುಗಳನ್ನು ಕಲಿಸಿದನು ಮತ್ತು ಇವುಗಳನ್ನು ಮಾಡಲು ಬಲ ನೀಡಿದನು. **30**

**11:30** *"ಬಲಹೀನತೆ"*– 12:5,9,10. **31**

**11:31** ಪೌಲನ ಕಷ್ಟಗಳು, ಸಮಸ್ಯೆಗಳು ಮತ್ತು ಶ್ರಮೆಗಳ ಪಟ್ಟಿಯನ್ನು ಕೊರಿಂಥದಲ್ಲಿದ್ದ ಕೆಲವರು ನಂಬದವರಾಗಿದ್ದರು. ಅದ್ದರಿಂದ ಅವನು ಅವರಿಗೆ ನಾನು ಸತ್ಯವನ್ನೇ ಹೇಳುತ್ತಾ ಇದ್ದೇನೆ ಎಂಬದನ್ನು ನಮ್ರತೆಯಿಂದ ದೇವರ ನಾಮದಲ್ಲಿ ದೃಢಪಡಿಸಿದನು. **32-33**

**11:32-33** ಅಪೊ 9:22-25. ಹತಾಶೆಯ ಈ ಅನುಭವವು ಅವನು ಹೊಗಳಿಕೊಳ್ಳುತ್ತಾ ಇದ್ದ "ಬಲಹೀನತೆಗಳಲ್ಲಿ" ಒಂದಾಗಿದೆ. ಎಲ್ಲಾ ತರಹದ ಶ್ರಮೆಗಳು ಮತ್ತು ಅಪಾಯಗಳನ್ನು ನನ್ನ ಬಲದಲ್ಲಿ ಸಹಿಸಿಕೊಳ್ಳುತ್ತಾ ಇದ್ದೇನೆ ಎಂದು ನಾನು ಹೇಳುತ್ತಾ ಇಲ್ಲ ಬದಲಾಗಿ ಈ

ಬಲಹೀನತೆಯ ನಡುವೆಯೂ ದೇವರು ನನ್ನನ್ನು ಅವುಗಳನ್ನೆಲ್ಲಾ ಸಹಿಸಿಕೊಳ್ಳಲು ಬಲಪಡಿಸಿದ್ದಾನೆ ಎಂಬ ವಿಷಯದಲ್ಲಿ ಹೊಗಳಿಕೊಳ್ಳುತ್ತಾ ಇದ್ದೇನೆ ಎಂದು ಹೇಳಿದನು. ಅವರು ಇದನ್ನು ಅರ್ಥಮಾಡಿಕೊಳ್ಳಬೇಕೆಂದು ಅವನು ಬಯಸಿದನು (3:5; 4:7).

# 121

**12:1** ತನ್ನ "ಬಲಹೀನತೆಗಳ" ವಿಷಯದಲ್ಲಿ ಹೊಗಳಿಕೊಳ್ಳುತ್ತಾ ಹೋದರೆ ಯಾವುದೇ ಪ್ರಯೋಜನವಿಲ್ಲ ಎಂಬದನ್ನು ಪೌಲನು ಅರಿತಿದ್ದನು, ಆದರೆ ಅವನಿಗೆ ಬೇರೆ ಆಯ್ಕೆ ಇರಲಿಲ್ಲ – ವ 11, 19. ಇದಲ್ಲದೆ ಅವನು ತನ್ನ ದರ್ಶನಗಳು ಮತ್ತು ಪ್ರಕಟನೆಗಳ ಬಗ್ಗೆ ಮಾತನಾಡುವದರ ಕುರಿತಾಗಿಯೂ ಹೀಗೆಯೇ ಚಿಂತಿಸುವವನಾಗಿದ್ದನು. ಹೀಗಿರುವಾಗ ಕೊರಿಂಥದಲ್ಲಿದ್ದ ಸುಳ್ಳು ಬೋಧಕರು ತಮ್ಮ ದರ್ಶನಗಳು ಹಾಗೂ ಪ್ರಕಟನೆಗಳ ವಿಷಯದಲ್ಲಿ ಹೊಗಳಿಕೊಳ್ಳುತ್ತಾ ಇದ್ದಾಗ (ಇದರ ಸಾಧ್ಯತೆಗಳೂ ಇದ್ದವು) ಅಲ್ಲಿದ್ದ ಕ್ರೈಸ್ತರ ನಿಮಿತ್ತ ಈ ವಿಷಯಗಳಲ್ಲಿ ತಾವು ಅವರಿಗಿಂತ ಕಡಿಮೆಯಲ್ಲ ಎಂಬದನ್ನು ತೋರ್ಪಡಿಸಿಕೊಳ್ಳಲು ಅವನು ಬಯಸಿದನು. ಆದಿ 15:1; ಸಂಖ್ಯಾ 12:6 ರಲ್ಲಿ ದರ್ಶನಗಳ ಕುರಿತಾದ ನೋಟ್ ನೋಡಿರಿ. **2-5**

**12:2-5** ಪೌಲನು ಇಲ್ಲಿ ತನ್ನ ಬಗ್ಗೆಯೇ ಮಾತನಾಡುತ್ತಾ ಇದ್ದಾನೆಯೇ? ಹೌದು; 7 ನೇ ವಚನ ನೋಡಿರಿ. ಹೀಗಿರುವಾಗ ಅವನು ತಾನಲ್ಲದೆ ಬೇರೆ ಯಾರೋ ಎಂಬ ರೀತಿಯಲ್ಲಿ "ಮನುಷ್ಯನು" ಎಂದು ಯಾಕೆ ಹೇಳಿದ್ದಾನೆ? ಬಹುಶಃ ಇದಕ್ಕೂ ಅವನ "ಬಲಹೀನತೆಗೂ" ಯಾವುದೇ ಸಂಬಂಧ ಇಲ್ಲ ಎಂಬದಾಗಿ ಅನ್ನಿಸುತ್ತದೆ ಮತ್ತು ಅದರಲ್ಲಿ ಮಾತ್ರವೇ ಹೊಗಳಿಕೊಳ್ಳಬೇಕು ಎಂಬದು ಅವನ ಬಯಕೆಯಾಗಿರಬಹುದು; ಬಹುಶಃ ಅವನಿಗೆ ಈ ಅನುಭವ ಅತ್ಯಂತ ಅಪರಿಚಿತವಾದ ರೀತಿಯಲ್ಲಿ ಆಗಿರುವದರಿಂದ ತನಗೇನಾಗುತ್ತಿದೆ ಎಂಬದೇ ಅವನಿಗೆ ಅರ್ಥವಾಗದೆ ಇರಬಹುದು ಮತ್ತು ಅವನು ಕೇವಲ ಪ್ರೇಕ್ಷಕನಾಗಿ ಇದ್ದಿರಬಹುದು ಅಥವಾ ಬಹುಶಃ ಬೇರೆ ಯಾವುದೋ ಕಾರಣಕ್ಕೆ ಈ ನೋಟ್ಸ್ ಗಳ ಗ್ರಂಥಕರ್ತನಿಗೆ ಇಂಥ ಅನುಭವ ಆಗದೆ ಇದ್ದಿರಬಹುದು. **4**

**12:4** *"ಪರದೈಸು"–* ಖಂಡಿತವಾಗಿಯೂ ಇದು "ಮೂರನೇ ಆಕಾಶವೇ" (ವ 2) ಆಗಿದೆ. ಕೆಲವು ಯೆಹೂದ್ಯರು ಒಟ್ಟು ಏಳು ಆಕಾಶಗಳಿಗೆ ಎಂಬದಾಗಿ ಅಂದುಕೊಂಡಿದ್ದರು ಆದರೆ ದೇವರು ಸತ್ಯವೇದದಲ್ಲಿ ಪ್ರಕಟಿಸಿರುವ ಸತ್ಯಗಳಲ್ಲಿ ಈ ಆಲೋಚನೆಗೆ ಯಾವುದೇ

ಅವಕಾಶವಿಲ್ಲ. "ಮೂರನೇ ಆಕಾಶ" ಎಂಬದಾಗಿ ಹೇಳುವ ಮೂಲಕ, ಉನ್ನತವಾದ ಆಕಾಶ, ಆತ್ಮೀಕವಾದ ಆಕಾಶ, ದೇವರ ವಾಸಸ್ಥಾನವಾಗಿರುವ ಪರದೈಸಿನ ಬಗ್ಗೆ ಪೌಲನು ಹೇಳುತ್ತಾ ಇದ್ದಾನೆ. "ಪರದೈಸು" ಎಂಬ ಪದ ಹೊಸ ಒಡಂಬಡಿಕೆಯಲ್ಲಿ ಕೇವಲ ಮೂರು ಸಲ ಮಾತ್ರವೇ ಬರೆಯಲ್ಪಟ್ಟಿದೆ – ಇಲ್ಲಿ, ಲೂಕ 23:43 ರಲ್ಲಿ ಮತ್ತು ಪ್ರಕ 2:7 ರಲ್ಲಿ. "ಹೇಳಲು ಅನುಮತಿಯಿಲ್ಲದೆ ಇರುವಂಥ" –ವಿಷಯಗಳನ್ನು ಪೌಲನು ಅಲ್ಲಿ ಕೇಳಿಸಿಕೊಂಡನು. ಧರ್ಮೋ 29:29; ಪ್ರಕ 10:3-4 ರೊಂದಿಗೆ ಹೋಲಿಸಿ ನೋಡಿರಿ. 6

**12:6** ಜನರು ತಾವು ನೋಡುತ್ತಿರುವ ಮತ್ತು ಕೇಳುತ್ತಿರುವ ವಿಷಯಗಳ ಮೂಲಕ ಅವನ ಬಗ್ಗೆ ಮತ್ತು ಅವನ ಅಪೊಸ್ತಲತನದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಬೇಕೇ ಹೊರತು ಅವರಿಂದ ಪರೀಕ್ಷಿಸಲು ಆಗದಿರುವ ಅವನ ಆತ್ಮೀಕ ಅನುಭವಗಳ ಮೇಲೆ ಅಲ್ಲ ಎಂಬದಾಗಿ ಅವನು ಬಯಸುತ್ತಾ ಇದ್ದನು. 7

**12:7** ಅವನು 2-5 ವಚನಗಳಲ್ಲಿ ತನ್ನ ಬಗ್ಗೆಯೇ ಮಾತನಾಡುತ್ತಾ ಇದ್ದಾನೆ ಎಂಬದನ್ನು ಇದು ಸಾಬೀತುಪಡಿಸುತ್ತದೆ. ಜನರು ಗರ್ವಿಷ್ಠರು ಮತ್ತು ದುರಹಂಕಾರಿಗಳಾಗಿದ್ದರು ಯಾಕಂದರೆ ಪೌಲನು ನೋಡಿರುವ ದರ್ಶನಗಳು ಮತ್ತು ಕೇಳಿರುವ ಪ್ರಕಟನೆಗಳಿಗಿಂತ ಕಡಿಮೆ ಪ್ರಾಮುಖ್ಯತೆಯುಳ್ಳವುಗಳನ್ನು ನಾವು ನೋಡಿದ್ದೇವೆ ಅಥವಾ ನೋಡಿದ್ದೇವೆಂದು ತಿಳಿದುಕೊಂಡಿದ್ದೇವೆ ಎಂಬದನ್ನು ಅರಿತುಕೊಂಡರು. ದೇವರು ಪೌಲನಿಗೆ ತೋರಿಸಿರುವ ವಿಷಯಗಳಿಂದ ಅವನು ಗರ್ವಿಷ್ಠನಾಗುವ ಅಪಾಯವು ಎದುರಾಗುವದು ಎಂಬದನ್ನು ದೇವರು ಬಲ್ಲವನಾಗಿದ್ದನು. ಇದಲ್ಲದೆ ದೇವರು ತಾನು ದ್ವೇಷಿಸುವ ಗರ್ವಕ್ಕೆ ಅಪೊಸ್ತಲನಾಗಲಿ ಅಥವಾ ಆತನ ಮಕ್ಕಳಲ್ಲಿ ಯಾರೇ ಆಗಲಿ ಒಳಗಾಗದಂತೆ ನೋಡಿಕೊಳ್ಳಲು ತನ್ನದೇ ಮಾರ್ಗಗಳನ್ನು ಹೊಂದಿದ್ದಾನೆ. ಪೌಲನ "ಶರೀರದಲ್ಲಿದ್ದ ಮುಳ್ಳು ಏನು?" ಆತನು ಇಲ್ಲಿ ಏನು ಹೇಳಿದ್ದಾನೆ ಅಷ್ಟು ಮಾತ್ರವೇ ನಮಗೆ ಗೊತ್ತಿದೆ. ಬಳಸಲಾಗಿರುವ ಭಾಷೆ ಅಸ್ಪಷ್ಟ ಮತ್ತು ಕಷ್ಟಕರವಾಗಿದೆ. "ಶರೀರ" ಬಹುಶಃ ಅವನ ಅವಿಧೇಯತೆಯ ಸ್ವಭಾವವಾಗಿರಬಹುದು ಅದರ ಬಗ್ಗೆ ಅವನು ರೋಮಾ 7:14-25 ರಲ್ಲಿ ಅದರ ಕುರಿತು ಮಾತನಾಡಿದ್ದಾನೆ. ಇಲ್ಲಿ ಉಪಯೋಗಿಸಲಾಗಿರುವ ಗ್ರೀಕ್ ಪದ (ಸಾರ್ಕ್ ನಿಂದ ಬಂದಿರುವ ಸರ್ಕಿ) ಅದೇ ಅರ್ಥವನ್ನು ಕೊಡುತ್ತದೆ (ರೋಮಾ 7:5,18 ನೋಡಿರಿ). ಈ ಸಂದರ್ಭದಲ್ಲಿ "ಮುಳ್ಳು" ಅವನ ಅವಿಧೇಯತೆಗೆ ಒಳಗಾಗಿರುವ ಪಾಪದ ಸ್ವಭಾವವನ್ನು ಸೂಚಿಸುತ್ತಾ ಇರಬಹುದು (ಯೇಸು ಕ್ರಿಸ್ತನಿಲ್ಲದೆ ಅವನು ತಾನಾಗಿಯೇ ಏನಾಗಿದ್ದಾನೆ) – ಬಹುಶಃ ಪ್ರಬಲವಾದ ಶೋಧನೆ, ಯಾವುದೇ ಕೆಟ್ಟ ಆಲೋಚನೆಯನ್ನು ಸೈತಾನನು ಅವನ ಮನಸ್ಸಿಗೆ ತರುತ್ತಲೇ

ಇದ್ದಿರಬಹುದು ಅಥವಾ ಇಂಥದ್ದೇ ಯಾವುದೋ ಕಾರ್ಯವಾಗಿರಬಹುದು, ಅದು ಪೌಲನ ಪಾಪ ಹಾಗೂ ಬಲಹೀನತೆಯನ್ನು ಸತತವಾಗಿ ಅವನಿಗೆ ನೆನಪು ಮಾಡಿಸುತ್ತಾ, ಸ್ವಾಭಾವಿಕವಾಗಿ ಅವನು ಏನಾಗಿದ್ದಾನೆ ಎಂಬ ಆಳವಾದ ತಿಳುವಳಿಕೆಯನ್ನು ಕೊಡುವವದಾಗಿತ್ತು ಅನ್ನಿಸುತ್ತದೆ (ರೋಮಾ 7:14-25 ರಲ್ಲಿ ನೋಡಿರುವ ಪ್ರಕಾರ). ಯಾವುದೋ ರೀತಿಯ ಶಾರೀರಿಕ ಬಾಧೆ ಅಥವಾ ಇನ್ನೇನೋ ಅಲ್ಲದೆ ಈ ವಿಷಯ ಅವನು ಗರ್ವಕ್ಕೆ ಒಳಗಾಗದಂತೆ ತಡೆಯುವದು ಎಂಬದಾಗಿ ಈ ನೋಟ್ಸ್ ಗಳ ಗ್ರಂಥಕರ್ತನಿಗೆ ಅನ್ನಿಸಿದೆ. ಉದಾಹರಣೆಗೆ, ಕಣ್ಣಿನ ಕೆಲವು ಕಾಯಿಲೆಗಳು (ಕೆಲವು ಪಂಡಿತರು ಇದುವೇ ಅವನ "ಮುಳ್ಳು" ಎಂಬದಾಗಿ ಅಂದುಕೊಂಡಿದ್ದರು) ಅವನು ತನ್ನ ಪರಲೋಕದ ದರ್ಶನಗಳ ವಿಷಯದಲ್ಲಿ ಗರ್ವಪಡದೆ ಮತ್ತು ದುರಂಹಕಾರಪಡದೆ ಇರುವಂತೆ ಮಾಡುತ್ತಾ ಇದ್ದವು ಎಂಬದಾಗಿ ಅಂದುಕೊಳ್ಳುವದು ಸುಲಭವಲ್ಲ. ಏನೇಆದರೂ ಆ "ಮುಳ್ಳು" ಏನು ಎಂಬದು ನಮಗೆ ಸ್ಪಷ್ಟವಾಗಿ ಗೊತ್ತಿಲ್ಲ ಮತ್ತು ನಮಗೆ ಅದನ್ನು ತಿಳಿದುಕೊಳ್ಳುವ ಅವಶ್ಯಕತೆಯೂ ಇಲ್ಲ. ಆದರೆ ಅದರ ಬಗ್ಗೆ ಮಾತ್ರ ನಮಗೆ ಕೆಲವು ವಿಷಯಗಳು ತಿಳಿದಿವೆ. ಅದು ಅವನಿಗೆ "ಕೊಡಲ್ಪಟ್ಟಿತ್ತು". ಅವನ ಮಾತಿನ ಅರ್ಥವೇನೆಂದರೆ ಅವನು ಅದನ್ನು ಅನುಭವಿಸುವ ರೀತಿಯಲ್ಲಿ ದೇವರು ಕಾರ್ಯಗಳನ್ನು ಏರ್ಪಡಿಸಿದನು. ಆದರೆ ಅದು "ಸೈತಾನನ ದೂತನಾಗಿದ್ದನು". ಇಲ್ಲಿ "ದೂತ" ಎಂಬದಾಗಿ ಭಾಷಾಂತರ ಮಾಡಲಾಗಿರುವ ಗ್ರೀಕ್ ಪದವು ಹೊಸ ಒಡಂಬಡಿಕೆಯ ಹಲವು ಭಾಗಗಳಲ್ಲಿ "ದೇವದೂತ" ಎಂದು ಭಾಷಾಂತರ ಮಾಡಲಾಗಿರುವ ಪದಕ್ಕೆ ಸಮಾನವಾಗಿದೆ. ಬಹುತೇಕ ಇದರ ಅರ್ಥವೇನೆಂದರೆ ಶಾರೀರಿಕವಾಗಿ ಅಥವಾ ಆತ್ಮೀಕವಾಗಿ ಪೌಲನನ್ನು ಬಾಧಿಸುತ್ತಾ ಇದ್ದ ಶೂಲವನ್ನು, ಸೈತಾನನಿಂದ ಬಂದದ್ದಾಗಿತ್ತು. ಅಥವಾ (ಒಂದುವೇಳೆ ಈ ಸಾಧ್ಯತೆ ಇಲ್ಲವಾದರೆ?) ನಿಜವಾಗಿಯೂ ಸೈತಾನನ ದೂತರಲ್ಲಿ ಒಬ್ಬನು – ದುರಾತ್ಮನು – ಅವನ ಸಮಸ್ಯೆಗಳಿಗೆ ಕಾರಣನಾಗಿದ್ದನು, ದುರಾತ್ಮನು ಅವನ ಪ್ರತಿಯೊಂದು ಹೆಜ್ಜೆಗೂ ತೊಂದರೆಪಡಿಸಿದನು ಮತ್ತು ಪ್ರತಿಯೊಂದು ವಿಷಯದಲ್ಲಿಯೂ ಅವನನ್ನು ಕುಗ್ಗಿಸುತ್ತಾ ವಿರೋಧಿಸುತ್ತಿದ್ದನು ಅಥವಾ ಅವನ ಹಿಂದಿನ ಸ್ವಭಾವದ ಯಾವುದೋ ಕಾರ್ಯವನ್ನು ನೆನಪು ಮಾಡಿತ್ತಾ ಇದ್ದನು ಅಥವಾ ಅವನು ದ್ವೇಷಿಸುತ್ತಾ ಇದ್ದ ಯಾವುದೇ ದುಷ್ಟಕಾರ್ಯಕ್ಕೆ ಅವನನ್ನು ಮತ್ತೆ ನಡೆಸಲು ಪ್ರಯತ್ನಿಸುತ್ತಾ ಇದ್ದನು. ಏನೇ ಆದರೂ ಆ "ಶೂಲ" (ಮುಳ್ಳು) ಪೌಲನಿಗೆ ಬಹಳ ವೇದನೆಯನ್ನು ಕೊಡುವವದಾಗಿತ್ತು. ಶಾರೀರಿಕವಾಗಿರಬಹುದು ಅಥವಾ ಮಾನಸಿಕವಾಗಿರಬಹುದು ಅಥವಾ ಆತ್ಮೀಕ ವೇದನೆಯಾಗಿರಬಹುದು ಅಥವಾ ಇವೆಲ್ಲವುಗಳ

ಮಿಶ್ರಣವಾಗಿರಬಹುದು, ಅದೇನೆಂದು ಅವನು ಹೇಳಿಲ್ಲ. ವಿವಿಧ ರೀತಿಯ "ಶೂಲಗಳನ್ನು" ಎದುರಿಸುವ ಎಲ್ಲಾ ವಿಶ್ವಾಸಿಗಳಿಗೆ 9ನೇ ವಚನದಲ್ಲಿ ಪೌಲನಿಗೆ ಕೊಡಲಾಗಿರುವ ವಾಗ್ದಾನವನ್ನು ಕೊಡಲಾಗುವದೇನೋ ಎಂಬ ಕಾರಣಕ್ಕೆ ಬಹುಶಃ ಅವನು ಹೇಳದೆ ಇದ್ದಿರಬಹುದು. ಪೌಲನ ಅನುಭವಗಳನ್ನು ಯೋಬ 1:6—3:26 ವಚನಗಳೊಂದಿಗೆ ಹೋಲಿಸಿ ನೋಡಿರಿ. 8

**12:8** ಅವನ ವೇದನೆ ವಿಪರೀತವಾಗಿದ್ದರಿಂದ ದೇವರೇ "ಶೂಲವನ್ನು" ತೆಗೆದುಹಾಕು ಎಂದು ಅವನು ಬಹಳವಾಗಿ ಬೇಡಿಕೊಂಡನು.

*"ಮೂರು ಸಲ"*– ಮತ್ತಾಯ 26:44; ಯೋಹಾನ 13:38; 21:17; ಅಪೊ 10:16 ರೊಂದಿಗೆ ಹೋಲಿಸಿ ನೋಡಿರಿ. ಪ್ರಸಿದ್ಧನಾಗಿದ್ದ ಅಪೊಸ್ತಲನು ನಿರೀಕ್ಷಿಸುತ್ತಿದ್ದ ರೀತಿಯಲ್ಲಿ ಅವನ ಪ್ರಾರ್ಥನೆಗೆ ಉತ್ತರ ಸಿಗಲಿಲ್ಲ ಎಂಬದನ್ನು ಗಮನಿಸಿರಿ. 9

**12:9** ಪೌಲನು ಬೇಡಿಕೊಂಡದ್ದನ್ನು ಕರ್ತನು ಅವನಿಗೆ ಕೊಡಲಿಲ್ಲ. ಅದಕ್ಕಿಂತಲೂ ಉತ್ತಮವಾದದ್ದನ್ನು ಆತನು ಕೊಟ್ಟನು – ವಿವರಣೆ ಮತ್ತು ದೊಡ್ಡ ವಾಗ್ದಾನ. ಆ ವಿವರಣೆ ಏನೆಂದರೆ: ಒಂದುವೇಳೆ ಪೌಲನು ಯೇಸು ಕ್ರಿಸ್ತನ ಮೂಲಕ ಬಲಿಷ್ಠನಾಗಿರಲು ಬಯಸುವದಾದರೆ ಅವನು ತನ್ನಲ್ಲಿ ಬಲಹೀನನಾಗಿರಬೇಕು ಮತ್ತು ತನ್ನ ಬಲಹೀನತೆಯನ್ನು ತಿಳಿದುಕೊಳ್ಳಬೇಕು. ವಾಗ್ದಾನ ಏನೆಂದರೆ ಆ ಶೂಲವನ್ನು ಸಹಿಸಿಕೊಳ್ಳಲು ಯೇಸು ಕ್ರಿಸ್ತನು ಅವನನ್ನು ಬಲಪಡಿಸುವನು ಮತ್ತು ಅದರಿಂದ ಆತ್ಮೀಕ ಲಾಭವನ್ನು ಪಡೆದುಕೊಳ್ಳುವಂತೆ ಮಾಡುವನು. ದೇವರು ನಮಗೆ ಬೇಕಾಗುವಷ್ಟು ಬಲವನ್ನು ಕೊಡದೆ ಯಾವುದೇ ರೀತಿಯ ವೇದನೆಯನ್ನು, ಕಷ್ಟವನ್ನು, ಅಪಾಯವನ್ನು ಅಥವಾ ಯಾವುದೇ ಕಾರ್ಯವನ್ನು ಮಾಡಲು, ಭಾರವನ್ನು ಸಹಿಸಿಕೊಳ್ಳಲು ಕರೆಯುವದಿಲ್ಲ. ಆತನ ಕೃಪೆ ಎಲ್ಲಾ ತಲೆಮಾರುಗಳ ಆತನ ಜನರೆಲ್ಲರಿಗೆ ಯಾವಾಗಲೂ ಸಾಕಾಗಿರುತ್ತದೆ.

*"ಹೀಗಿರಲಾಗಿ"*– ಯೇಸು ಕ್ರಿಸ್ತನ ಆತ್ಮೀಕ ಶಕ್ತಿಯು ಮಾನವನ ಬಲಹೀನತೆಯಲ್ಲಿ ಪರಿಪೂರ್ಣವಾಗುತ್ತದೆ ಎಂಬ ಪ್ರಾಮುಖ್ಯವಾದ ಪಾಠವನ್ನು ಪೌಲನು ಕಲಿತುಕೊಂಡನು. ಇದಲ್ಲದೆ ಯೇಸು ಕ್ರಿಸ್ತನ ಶಕ್ತಿಯು ತನ್ನ ಮೇಲೆ ನೆಲೆಯಾಗಿರಲಿ ಎಂಬ ದೊಡ್ಡ ಬಯಕೆ ಅವನಿಗಿತ್ತು ಆದ್ದರಿಂದ (ಫಿಲಿಪ್ಪಿ 3:10) ತನ್ನ ಬಲಹೀನತೆಯನ್ನು ತನಗೆ ಕಲಿಸುವಂಥ ಎಲ್ಲಾ ವಿಷಯಗಳಲ್ಲಿಯೂ ಅವನು ಸಂತೋಷವುಳ್ಳವನಾಗಿದ್ದನು. 10

**12:10** *"ಕ್ರಿಸ್ತನ ನಿಮಿತ್ತ"*–ಎಂಬ ಪದಗಳನ್ನು ಗಮನಿಸಿರಿ – ಅವನ ಇಡೀ ಜೀವನ ಮತ್ತು

ಸೇವೆ ಯೇಸು ಕ್ರಿಸ್ತನ ನಿಮಿತ್ತವಾಗಿತ್ತು ಮತ್ತು ತನ್ನ ನಿಮಿತ್ತವಲ್ಲ ಬದಲಾಗಿ ಯೇಸು ಕ್ರಿಸ್ತನ ನಿಮಿತ್ತವೇ, ಆತನ ಶಕ್ತಿ ತನ್ನ ಮೇಲೆ ನೆಲೆಯಾಗಿರಬೇಕೆಂದು ಅವನು ಬಯಸಿದನು.

*"ಅದರಲ್ಲಿ ಸಂತೋಷಿಸುತ್ತೇನೆ"*– ಅಥವಾ "ಅದರಲ್ಲಿ ಆನಂದಿಸುತ್ತೇನೆ" ಎಂಬದಾಗಿಯೂ ಇದನ್ನು ಭಾಷಾಂತರ ಮಾಡಬಹುದು. ಅನೇಕ ಕ್ರೈಸ್ತರು ಕ್ರೂರ ರೀತಿಯಲ್ಲಿ ಬಲಹೀನತೆಗಳನ್ನು, ಅವಮಾನಗಳನ್ನು, ಕಷ್ಟಗಳನ್ನು, ಹಿಂಸೆಗಳನ್ನು ಮತ್ತು ಸಮಸ್ಯೆಗಳನ್ನು ಸಹಿಸಿಕೊಂಡರೆ ಸಾಕು ಎಂಬದಾಗಿ ಆಲೋಚಿಸುವಂಥವರಾಗಿದ್ದಾರೆ. ಆದರೆ ಅಂಥ ಕಾರ್ಯಗಳಿಂದ ದೊರೆಯುವ ದೊಡ್ಡ ಆತ್ಮೀಕ ಪ್ರತಿಫಲಗಳ ಬಗ್ಗೆ ಒಂದು ವ್ಯಕ್ತಿಗೆ ಗೊತ್ತಾಗುವಾಗ, ಅವನು ಅದರಲ್ಲಿ ಸಂತೋಷಿಸುತ್ತಾನೆ. ದೇವರ ಮಾರ್ಗಗಳ ತಿಳುವಳಿಕೆಯ ಬೆಳಕಿನಲ್ಲಿ, ವೇದನೆಯೂ ಸಂತೋಷವನ್ನು ಉಂಟುಮಾಡುತ್ತದೆ (ಮತ್ತಾಯ 5:11-12; ಅಪೊ 5:40-41; 16:22-25; 1 ಪೇತ್ರ 5:12-14 ರೊಂದಿಗೆ ಹೋಲಿಸಿ ನೋಡಿರಿ). ಪೌಲನು ಇಲ್ಲಿ ತನ್ನನ್ನು ಶಕ್ತನಾದ ಯೇಸು ಕ್ರಿಸ್ತನ ಸೇವಕನನ್ನಾಗಿ ಮಾಡುವ ಆತ್ಮೀಕ ಶಕ್ತಿಯ ಬಗ್ಗೆ ಮಾತನಾಡುತ್ತಾ ಇದ್ದಾನೆ. ಪೌಲನು ಬಲಹೀನನಾಗಿರುವಾಗಲೂ ಯಾಕೆ ಬಲವುಳ್ಳವನಾಗಿದ್ದನು? ಯಾಕಂದರೆ ತನ್ನ ಬಲಹೀನತೆಗಳನ್ನು ತಿಳಿದುಕೊಂಡ ನಂತರ ಅವನು ತನ್ನ ಮೇಲೆ, ತನ್ನ ಶಕ್ತಿ, ಬುದ್ಧಿವಂತಿಕೆ, ಸಾಮರ್ಥ್ಯದ ಮೇಲೆ ಆತುಕೊಳ್ಳಲು ಪ್ರಯತ್ನಿಸಲಿಲ್ಲ ಬದಲಾಗಿ ದೇವರ ಮೇಲೆ ಮಾತ್ರವೇ ಆತುಕೊಳ್ಳಲು ಬಯಸಿದನು. 1:8-9; 1 ಕೊರಿಂಥ 2:1-5 ನೋಡಿರಿ. ದೇವರ ಶಕ್ತಿಯನ್ನು ಹೊಂದಿಕೊಳ್ಳಬೇಕೆಂದರೆ ಒಬ್ಬನು ತನ್ನನ್ನು ಮತ್ತು ತನ್ನಲ್ಲಿರುವ ಭರವಸೆಯನ್ನು ತ್ಯಜಿಸಬೇಕು. ಯೆಶಾಯ 40:28-31 ರೊಂದಿಗೆ ಹೋಲಿಸಿ ನೋಡಿರಿ. ಆದರೆ ಸಹಜವಾಗಿ ಮಾನವರು ಇದಕ್ಕೆ ವಿರುದ್ಧವಾಗಿಯೇ ಯೋಚನೆ ಮಾಡುವವರಾಗಿದ್ದಾರೆ. 11

**12:11** *"ಬುದ್ಧಿಹೀನನು"*– 11:1,16,21.

*"ನಿಮ್ಮಿಂದಲೇ ಹೊಗಳಿಕೆ ಉಂಟಾಯಿತು"*– 3:1-3.

*"ನಾನು ಅಲ್ಪನು"*– 3:5; 1 ಕೊರಿಂಥ 3:7; ಎಫೆ 3:8. 12

**12:12** ದೇವರು ಯೇಸು ಕ್ರಿಸ್ತನ ಮೂಲಕ "ಸೂಚಕಕಾರ್ಯಗಳನ್ನು" ಮಾಡಿದನು ಮತ್ತು ತನ್ನ ಅಪೊಸ್ತಲರಿಗೆ ಬೋಧಿಸಲು ಆತ್ಮೀಕ ಸತ್ಯವನ್ನು ಕೊಟ್ಟನು (ಯೋಹಾನ 2:11 ರ ನೋಟ್ ನೋಡಿರಿ).

*"ಅದ್ಭುತಗಳು"*– ಅಂದರೆ ಆಶ್ಚರ್ಯವನ್ನುಂಟು ಮಾಡುವ ಕಾರ್ಯಗಳು (ಮತ್ತಾಯ 12:22-23; 15:31; ಅಪೊ 2:12; 3:10).

*"ಮಹತ್ಕಾರ್ಯಗಳು"*– ಅಂದರೆ ಅಸಾಧಾರಣ ಶಕ್ತಿಯಿಂದ ಮಾಡುವ ಕಾರ್ಯಗಳು. ಇವು "ಅಪೊಸ್ತಲನ ಗುಣಲಕ್ಷಣಗಳಾಗಿದ್ದವು". ಅಪೊಸ್ತಲರು ದೇವರಿಂದ ಆರಿಸಲ್ಪಟ್ಟು ಕಳುಹಿಸಲ್ಪಟ್ಟವರಾಗಿದ್ದಾರೆ ಎಂಬದನ್ನು ಇವುಗಳು ತೋರಿಸುವವುಗಳಾಗಿದ್ದವು ಮತ್ತು ಅವರು ದೇವರ ಸತ್ಯವನ್ನು ಕಲಿಸುತ್ತಾ ಇದ್ದರು (ಅಪೊ 5:12; 14:3; ಇಬ್ರಿ 2:4). ಅಪೊಸ್ತಲರ ದಿನಗಳು ಮುಗಿದು ಹೋಗಿವೆ, ಒಂದೇ ಸಲ ನಮ್ಮೆಲ್ಲರಿಗಾಗಿಯೂ ಸತ್ಯವನ್ನು ಸ್ಥಾಪಿಸಲಾಗಿದೆ ಮತ್ತು ಹೊಸ ಒಡಂಬಡಿಕೆಯಲ್ಲಿ ನಮಗಾಗಿ ಬರೆಯಲಾಗಿದೆ. ಆಗಿನಂತೆ ಈಗ ಸೂಚಕಕಾರ್ಯಗಳು, ಅದ್ಭುತಕಾರ್ಯಗಳು ಮತ್ತು ಮಹತ್ಕಾರ್ಯಗಳ ಅವಶ್ಯಕತೆಯಿಲ್ಲ – ಆದರೂ ದೇವರು ತನ್ನ ಚಿತ್ತದ ಮೇರೆಗೆ ಕೆಲವು ಸಮಯಗಳಲ್ಲಿ ಕೆಲವು ಸ್ಥಳಗಳಲ್ಲಿ ಇವುಗಳನ್ನು ಮಾಡುತ್ತಾನೆ. ಅಪೊ 8:15-17 ರ ನೋಟ್ ನೋಡಿರಿ. ಆದರೆ ಈಗ ಒಬ್ಬ ವ್ಯಕ್ತಿ ಮಾಡುವ ಅದ್ಭುತಕಾರ್ಯಗಳು ಅಥವಾ ಮಾಡುವೆನೆಂದು ಹೇಳುವ ಕಾರ್ಯಗಳಿಂದ ಅವನು ದೇವರಿಂದ ಆರಿಸಲ್ಪಟ್ಟವನು ಹಾಗೂ ಕಳುಹಿಸಲ್ಪಟ್ಟವನು ಎಂಬದಾಗಿ ನಿರ್ಣಯಿಸದೆ, ಅವನು ಮಾಡುವ ಬೋಧನೆ, ಅವನ ನಂಬಿಕೆ ಮತ್ತು ಜೀವನ ಶೈಲಿ ಹೊಸ ಒಡಂಬಡಿಕೆಯ ಬೋಧನೆಗನುಸಾರ ಇದೆಯೋ ಇಲ್ಲವೋ ಎಂದು ತಿಳಿದುಕೊಳ್ಳುವ ಮೂಲಕ ನಿರ್ಣಯಿಸುತ್ತೇವೆ. ಒಂದುವೇಳೆ ಹೊಸ ಒಡಂಬಡಿಕೆಯ ಬೋಧನೆಗನುಸಾರ ಮೇಲಿನ ಕಾರ್ಯಗಳು ಇಲ್ಲವಾದರೆ ಅವನು ಅಥವಾ ಅವಳು ಮಾಡುವ, ಮಾಡುವೆನೆಂದು ಹೇಳುವ ಅದ್ಭುತಕಾರ್ಯಗಳ ವಿಷ್ಯದಲ್ಲಿ ಸಂದೇಹಪಡಬಹುದು. ಅಂಥವರು ಶ್ರಮೆಗಳನ್ನು ಅನುಭವಿಸುತ್ತಾ ಜೀವಿಸಲಿ ಮತ್ತು ತಮ್ಮನ್ನೇ ಒಪ್ಪಿಸಲಿ ಹಾಗೂ ಹಣ ಮತ್ತು ಆಸ್ತಿಯ ಮೇಲಿನ ಆಸೆಯನ್ನು ತ್ಯಜಿಸಲು ಹಾಗೂ ಪೌಲನು ಈ ಪತ್ರಿಕೆಯಲ್ಲಿ ತಿಳಿಸಿರುವ ಪ್ರಕಾರ ಬೋಧಿಸಲು, ನಾವು ಅವರ ಬೋಧನೆಗಳನ್ನು ಕೇಳಲು ಆಸಕ್ತಿಯನ್ನು ತೋರಿಸುತ್ತೇವೆ. **13**

**12:13** 11:7-12; 1 ಕೊರಿಂಥ 9:12-18 ನೋಡಿರಿ. ಕ್ಷಮಾಪಣೆಯನ್ನು ಕೇಳುವ ಮೂಲಕ ಪೌಲನು ವ್ಯಂಗ್ಯವಾಡುತ್ತಾ ಇದ್ದಾನೆ. ಅವರಿಂದ ಯಾವುದೇ ಸಹಾಯಪಡೆಯದೆ ತಾನು ಯಾವುದೇ ತಪ್ಪು ಮಾಡಿಲ್ಲ ಎಂಬದನ್ನು ಅವನು ಬಲ್ಲವನಾಗಿದ್ದನು (7:2). **14-15**

**12:14-15** ಅವರು ಕೊಡಬಹುದಾದ ಹಣಕ್ಕಿಂತ – 6:11-13, ಅವರ ಪ್ರೀತಿ ಹಾಗೂ

ಅನ್ಯೋನ್ಯತೆ ಅವನಿಗೆ ಬಹಳ ಪ್ರಾಮುಖ್ಯವಾದವುಗಳಾಗಿದ್ದವು. ಅವನು ಸಭೆಗೆ ತಂದೆಯಾಗಿದ್ದನು (1 ಕೊರಿಂಥ 4:15). ತಂದೆಯಂದಿರು ತಮ್ಮ ಮಕ್ಕಳ ವಿಷಯದಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳನ್ನು ಅವನು ಅರಿತುಕೊಂಡನು ಮತ್ತು ಅವರಿಗಾಗಿ ತನ್ನ ಸಮಯ, ಸಾಮರ್ಥ್ಯ ಮತ್ತು ತಲಾಂತುಗಳನ್ನು ಸೇರಿ ಎಲ್ಲವನ್ನೂ ಅವರಿಗಾಗಿ ಉಪಯೋಗಿಸಲು ಬಯಸುವವನಾಗಿದ್ದನು (7:3). ದೇವರು ತನ್ನ ಎಲ್ಲಾ ಸೇವಕರಲ್ಲಿ ಇದನ್ನೇ ನೋಡಲು ಬಯಸುವವನಾಗಿದ್ದಾನೆ. ದೇವಜನರಿಂದ ಏನು ಪಡಯಬಹುದು ಎಂಬದಾಗಿ ಯೋಚಿಸದೆ ಅವರಿಗೆ ಏನು ಕೊಡಬಹುದು ಎಂಬದರ ಬಗ್ಗೆ ಅವರು ಯೋಚಿಸುವವರಾಗಿರಬೇಕು. **16-18**

**12:16-18** ಕೆಲವರು ಈ ರೀತಿಯಾಗಿ ಹೇಳುತ್ತಾ ಇದ್ದರು ಎಂದು ಅನ್ನಿಸುತ್ತದೆ: ಪೌಲನು ಸಭೆಯಿಂದ ಹಣ ತೆಗೆದುಕೊಳ್ಳುತ್ತಾ ಇರಲಿಲ್ಲ ನಿಜ ಆದರೆ ಯೆರೂಸಲೇಮಿನಲ್ಲಿರುವ ಕ್ರೈಸ್ತರಿಗಾಗಿ ಹಣ ಸಂಗ್ರಹಣೆ ಮಾಡುವದರ ಹಿಂದಿರುವ ಅವನ ನಿಜವಾದ ಉದ್ದೇಶವೇನೆಂದರೆ, ಅದನ್ನು ತನ್ನ ಕಾರ್ಯಗಳಿಗಾಗಿ ಉಪಯೋಗಿಸಿಕೊಳ್ಳಬೇಕು ಎಂಬದೇ, ತೀತ ಮತ್ತು ಇನ್ನೊಬ್ಬ ಸಹೋದರ ಈ ಕಾರ್ಯದಲ್ಲಿ ಅವನಿಗೆ ಸಹಕಾರಿಗಳಾಗಿದ್ದರು. ಪೌಲನು ಅವರಿಗೆ ಮನವಿ ಮಾಡುವದೇನೆಂದರೆ – ಈ ಗುಣಗುಟ್ಟುವಿಕೆಯು ಸತ್ಯವಾಗಿದೆ ಎಂಬದಕ್ಕೆ ಏನಾದರೂ ಸಾಕ್ಷಿ ಇದೆಯೇ? ಇಂಥ ಆರೋಪದ ನಿಮಿತ್ತವಾಗಿಯೇ ಪೌಲನು ಹಣ ಸಂಗ್ರಹಣೆಯ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಮತ್ತು ಬುದ್ಧಿವಂತಿಕೆಯಿಂದ ನಡೆದುಕೊಂಡನು (8:6-21; 1 ಕೊರಿಂಥ 16:1-4). **19**

**12:19** ಅವನು ಈ ಪತ್ರಿಕೆಯಲ್ಲಿ ಯಾಕೆ "ಹೊಗಳಿಕೊಂಡಿದ್ದಾನೆ" ಮತ್ತು ತನ್ನ ಅಪೊಸ್ತಲತನವನ್ನು ಸಮರ್ಥಿಸಿಕೊಂಡಿದ್ದಾನೆ ಎಂಬದಕ್ಕೆ ನಾವು ಇಲ್ಲಿ ಕಾರಣವನ್ನು ನೋಡಬಹುದು. ಅವರು ಅವನನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬಾರದು. ನ್ಯಾಯಾಧಿಪತಿಗಳ ಎದುರಿನಲ್ಲಿ ತನ್ನ ಸಮರ್ಥನೆಯ ವಾದವನ್ನು ಮಂಡಿಸುವ ಹಾಗೆ ಅವನು ಇವುಗಳನ್ನು ಹೇಳುತ್ತಾ ಇಲ್ಲ (1 ಕೊರಿಂಥ 4:1-5). ತನ್ನ "ಹೊಗಳಿಕೊಳ್ಳುವಿಕೆಯನ್ನೂ" (1:12) ಸೇರಿ ಅವನು ಅವರಿಗೆ ಹೇಳಬೇಕಾಗಿರುವದೆಲ್ಲವೂ, ಅವರ ಹಿತಕ್ಕಾಗಿಯೇ ಆಗಿತ್ತೇ ಹೊರತು ತನಗಾಗಿಯಲ್ಲ. ಯೇಸು ಕ್ರಿಸ್ತನ ಅಪೊಸ್ತಲನಾಗಿ ಅವನನ್ನು ಅಂಗೀಕರಿಸಿಕೊಳ್ಳುವ ಮತ್ತು ಅವನು ಕಲಿಸಿದ ಸತ್ಯವನ್ನು ಅನುಸರಿಸುವ ಮೂಲಕ ಅವರು ತಮ್ಮ ಆತ್ಮೀಕ ಜೀವಿತದಲ್ಲಿ ಬಲಗೊಳ್ಳುವವರಾಗಿದ್ದಾರೆ. **20-21**

**12:20-21** ಅಲ್ಲಿದ್ದ ಸಭೆಯು ಕೆಲವು ವಿಷಯಗಳಲ್ಲಿ ದುರ್ಬಲವಾಗಿದೆ ಮತ್ತು ವಿವಿಧ ಗುಂಪುಗಳು ಹಾಗೂ ಲೈಂಗಿಕ ಪಾಪಗಳಲ್ಲಿ ನಿರತವಾಗಿದೆ ಎಂಬದು ಪೌಲನಿಗೆ ಚೆನ್ನಾಗಿ ಗೊತ್ತಿತ್ತು (1 ಕೊರಿಂಥ 1:11-12; 3:3; 4:18; 5:2,11; 6:15-16; 8:1; 11:18,22). ಅವರು ತನ್ನನ್ನು ಮತ್ತು ತಾನು ಬೋಧಿಸಿರುವ ಸತ್ಯವನ್ನು ನಿರಾಕರಿಸುವರೇನೋ ಎಂಬದಾಗಿ ಅವನು ಹೆದರಿದನು, ಇದಲ್ಲದೆ ಪರಿಸ್ಥಿತಿ ಬಹಳಷ್ಟು ಹದಗೆಡಬಹುದು ಹಾಗೂ ಅಲ್ಲಿಗೆ ಹೋದರೆ ಅವನಿಗೂ ಮತ್ತು ಅವರಿಗೂ ಬಹಳ ದುಃಖವಾಗಬಹುದು ಎಂಬದಾಗಿ ಅವನು ಚಿಂತಿಸಿದನು.

# 13[1]

**13:1** ಧರ್ಮೋ 19:15. ಅವರು ಏನಾಗಿದ್ದಾರೆ ಮತ್ತು ಅವನು ಏನಾಗಿದ್ದಾನೆ ಎಂಬ ಸತ್ಯವು ದೃಢವಾಗಿ ಸ್ಥಾಪನೆಯಾಗಿದೆ ಎಂಬದು ಬಹುಶಃ ಪೌಲನ ಮಾತುಗಳಾಗಿರಬಹುದು. ಹೆಚ್ಚಿನ ಪುರಾವೆ ಅಥವಾ ತಡಮಾಡುವದಕ್ಕೆ ಯಾವುದೇ ಅವಶ್ಯಕತೆಯಿಲ್ಲ. **2**

**13:2** *"ಶಿಕ್ಷಿಸದೆ ಬಿಡುವದಿಲ್ಲ"*– 1 ಕೊರಿಂಥ 4:18-21; 5:3-5 ನೋಡಿರಿ. ತಪ್ಪುಮಾಡುವವರಿಗೆ ಶಿಕ್ಷೆಯಾಗುವ ಸಲುವಾಗಿ ಯೇಸು ಕ್ರಿಸ್ತನ ಅಪೊಸ್ತಲನಾಗಿ ನಾನು ನನ್ನ ಅಧಿಕಾರವನ್ನು ಉಪಯೋಗಿಸುತ್ತೇನೆ ಎಂಬದು ಪೌಲನ ಮಾತುಗಳ ಅರ್ಥವಾಗಿದೆ. **3**

**13:3** *"ನಿಮಗೆ ಬೇಕಾದ ಪ್ರಮಾಣವು"*- ಈ ಪತ್ರದಲ್ಲಿ ಅವನ ಅಪೊಸ್ತಲತನಕ್ಕೆ ಇದು ದಾಖಲೆಯಾಗಿದೆ. ಒಂದುವೇಳೆ ಅವರಿಗೆ (ಸಾತ್ವಿಕತೆ ಮತ್ತು ದೀನತೆಗೆ – 10:1 ಬದಲಾಗಿ) ಅಧಿಕಾರ ಅಥವಾ ಶಕ್ತಿಯ ಪ್ರದರ್ಶನ ಬೇಕಿರುವದಾದರೆ, ಅವನು ಅದನ್ನು ಅವರಿಗೆ ತೋರಿಸುವವನಾಗಿದ್ದಾನೆ. ಅವನ ಬಲಹೀನತೆಯ ವಿಷಯದಲ್ಲಿ ಅವರು ಅಪರಾಧಿಗಳೆಂದು ಅಂದುಕೊಂಡರು (10:10; 1 ಕೊರಿಂಥ 2:3). ಅವರು ಯೇಸು ಕ್ರಿಸ್ತನ ಶಕ್ತಿಯನ್ನು ತಿಳಿದುಕೊಂಡರು. ಯೇಸು ಕ್ರಿಸ್ತನು ಸಹ ನಿರ್ಬಲನಂತೆ ಇದ್ದನು ("ಬಲಹೀನತೆಯಲ್ಲಿ ಶಿಲುಬೆಗೆ ಹಾಕಲ್ಪಟ್ಟನು") ಆದರೂ ಅವರ ನಡುವೆ ಪುನರುತ್ಥಾನದ ಶಕ್ತಿಯಲ್ಲಿ ಜೀವಿಸಿದನು. ಪೌಲನು ಅವರೊಂದಿಗೆ ಮಾತನಾಡುವಾಗಲೂ ಅದೇ ಶಕ್ತಿಯನ್ನು ಉಪಯೋಗಿಸುವವನಾಗಿದ್ದನು – ಒಂದುವೇಳೆ ಅವರು ಪಶ್ಚಾತ್ತಾಪಪಡದೆ ಹೋದರೆ ಮಾತ್ರ. **5**

**13:5** *"ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ"*– ಅವರು ಪೌಲನನ್ನು ಪರೀಕ್ಷಿಸಲು

ಪ್ರಯತ್ನಿಸುತ್ತಾ ಇದ್ದರು ಮತ್ತು ಯೇಸು ಕ್ರಿಸ್ತನು ಅವನ ಮೂಲಕ ಮಾತನಾಡುತ್ತಾ ಇದ್ದಾನೋ ಇಲ್ಲವೋ ಎಂಬದಕ್ಕೆ ಪುರಾವೆಗಳನ್ನು ಹುಡುಕುತ್ತಾ ಇದ್ದರು (ವ 3). ಅವರು ತಮ್ಮನ್ನು ಪರೀಕ್ಷಿಸುವ ಕೆಲಸವನ್ನು ಸರಿಯಾಗಿ ಮಾಡುವರು ಎಂಬದಾಗಿ ಪೌಲನು ಹೇಳಿದ್ದಾನೆ. ಒಂದುವೇಳೆ ಅವರು ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಮತ್ತು ಯೇಸು ಕ್ರಿಸ್ತನು ನಮ್ಮಲ್ಲಿ ಇದ್ದಾನೆ ಎಂಬದು ದೃಢವಾದರೆ, ಅವನು (ಅವರ ಆತ್ಮೀಕ ತಂದೆ – 1 ಕೊರಿಂಥ 4:15) ಪರೀಕ್ಷೆಯಲ್ಲಿ ಉತ್ತೀರ್ಣನಾದನು ಎಂದು ತಿಳಿದುಕೊಳ್ಳಬಹುದು. ಆ ಪರೀಕ್ಷೆ ಏನು? ಮತ್ತು ಕ್ರೈಸ್ತರು ತಮ್ಮನ್ನು ಯಾಕೆ ಪರೀಕ್ಷಿಸಿಕೊಳ್ಳಬೇಕು ಮತ್ತು ಅದನ್ನು ಯಾವ ರೀತಿ ಮಾಡಬೇಕು? ನಮ್ಮನ್ನು ಪರೀಕ್ಷಿಸಿಕೊಳ್ಳುವದರ ಉದ್ದೇಶ ನಾವು "ನಂಬಿಕೆಯಲ್ಲಿ ಇದ್ದೇವೋ" ಎಂಬದನ್ನು ತಿಳಿದುಕೊಳ್ಳಲು ಆಗಿದೆ – ಅಂದರೆ, ನಾವು ದೇವರ ಸತ್ಯವನ್ನು ಅಂಗೀಕರಿಸಿಕೊಂಡಿದ್ದೇವೋ, ಅದನ್ನು ನಂಬಿದ್ದೇವೋ ಮತ್ತು ಅನುಸರಿಸುತ್ತಾ ಇದ್ದೇವೋ, ನಾವು ನಿಜವಾಗಿಯ ಕ್ರೈಸ್ತರಾಗಿದ್ದೇವೋ ಅಥವಾ ಹೆಸರಿಗೆ ಮಾತ್ರ ಕ್ರೈಸ್ತರೆಂದು ಹೇಳಿಕೊಳ್ಳುತ್ತಾ ಇದ್ದೇವೋ ಎಂಬದನ್ನು ತಿಳಿದುಕೊಳ್ಳುವದಾಗಿದೆ. ನಮ್ಮನ್ನು ನಾವು ಹೇಗೆ ಪರೀಕ್ಷಿಸಿಕೊಳ್ಳುತ್ತೇವೆ? ನಮ್ಮ ಸ್ವಂತ ಹೃದಯಗಳಲ್ಲಿ ಏನಿದೆ ಎಂಬದನ್ನು ನೋಡಲು ಪ್ರಯತ್ನಿಸುವದರಿಂದಲ್ಲ (ಒಂದುವೇಳೆ ನಾವು ಪ್ರಯತ್ನಿಸುವದಾದರೆ ರೋಮಾ 7:18,21 ರಲ್ಲಿರುವದನ್ನು ನೋಡಬಹುದು) ಮತ್ತು ನಮ್ಮ ಭಾವನೆಗಳನ್ನು ಪರೀಕ್ಷಿಸಿಕೊಳ್ಳುವದರಿಂದಲ್ಲ (ನಮ್ಮ ಭಾವನೆಗಳಲ್ಲಿ ಏರುಪೇರುಗಳು ಆಗುತ್ತವೆ ಮತ್ತು ನಮ್ಮ ಆತ್ಮೀಕ ಪರಿಸ್ಥಿತಿಗೆ ಅದು ಬಹಳ ಕೆಟ್ಟ ಪುರಾವೆಯಾಗಿರುತ್ತದೆ). ನಾವು ನಿಜವಾಗಿಯೂ ಏನು ಮಾಡುತ್ತಾ ಇದ್ದೇವೆ ಮತ್ತು ದೇವರ ವಾಕ್ಯದ ಮೂಲಕ ಹಾಗೂ ಅದಕ್ಕೆ ವಿಧೇಯರಾಗುತ್ತಾ ಇದ್ದೇವೋ ಅಥವಾ ಅವಿಧೇಯರಾಗುತ್ತಾ ಇದ್ದೇವೋ ಎಂಬುದರ ಮೂಲಕ ಪರೀಕ್ಷಿಸಿಕೊಳ್ಳಬಹುದಾಗಿದೆ. ಮರದ ಫಲವನ್ನು ನೋಡಿ ಮರ ಯಾವ ಸ್ಥಿತಿಯಲ್ಲಿದೆ ಎಂಬದನ್ನು ನಾವು ತಿಳಿಯಬಹುದು (ಮತ್ತಾಯ 7:16-20; ಇಬ್ರಿ 6:9-10). ಒಂದುವೇಳೆ ನಮಗೆ ಯೇಸು ಕ್ರಿಸ್ತನೊಂದಿಗೆ ಅನುಭವ ಇಲ್ಲದೆ ಹೋದರೆ ಮತ್ತು ನಾವು ಆತನಿಗೆ ವಿಧೇಯರಾಗಿರದೆ ಹೋದರೆ, ನಮ್ಮ ಜೀವನ ಶೈಲಿ, ಆಲೋಚನೆ ಮತ್ತು ಕ್ರಿಯೆಗಳು ದೇವರ ವಾಕ್ಯಗಳಿಗೆ ವಿರುದ್ಧವಾಗಿ ಇರುವದಾದರೆ, ನಾವು ಯೇಸು ಕ್ರಿಸ್ತನಿಗೆ ಸೇರಿದ್ದೇವೆ ಎಂಬದನ್ನು ತಿಳಿಸಲು ಯಾವ ಪುರಾವೆಗಳಿವೆ? ಆದರೆ ಒಂದುವೇಳೆ ಯೇಸು ಕ್ರಿಸ್ತನೊಂದಿಗೆ ನಮಗೆ ಕೆಲವು ಅನುಭವಗಳು ಆಗಿವೆ ಮತ್ತು ನಾವು ಆತನ ವಾಕ್ಯಗಳಿಗೆ

ವಿಧೇಯರಾಗಲು ಆಸಕ್ತಿಯಿಂದ ಪ್ರಯತ್ನಿಸುತ್ತಾ ಇದ್ದೇವೆ ಎಂಬದು ಗೊತ್ತಿದ್ದರೆ (ಕೆಲವೊಮ್ಮೆ ಬಲಹೀನತೆ ಹಾಗೂ ನಮ್ಮ ಪ್ರಯತ್ನಗಳಲ್ಲಿ ಸೋತುಹೋಗುವಾಗಲೂ) ಮತ್ತು ರಕ್ಷಣೆ ಹೊಂದಲು ಸತ್ಯವೇದವು ಹೇಳುವ ಪ್ರಕಾರ ನಡೆದುಕೊಂಡಿದ್ದೇವೆ ಎಂಬದು ಗೊತ್ತಿದ್ದರೆ, ಯೇಸು ಕ್ರಿಸ್ತನು ನಮ್ಮಲ್ಲಿ ಇದ್ದಾನೆ ಎಂಬದು ನಮಗೆ ಗೊತ್ತಿರುತ್ತದೆ. 1 ಯೋಹಾನ 5:9-13; 2:4; 3:10,14,24 ರೊಂದಿಗೆ ಹೋಲಿಸಿ ನೋಡಿರಿ. ನಾವು ನಂಬಿಕೆಯಲ್ಲಿದ್ದೇವೆ ಎಂಬದನ್ನು ತೋರಿಸಲು ನಮ್ಮಿಂದ ಆಗುವ ಕಾರ್ಯಗಳನ್ನು ಮಾಡುವವರಾಗಿರಬೇಕು – ಇಬ್ರಿ 6:11; 2 ಪೇತ್ರ 1:10. ಒಂದುವೇಳೆ ನಾವು ಪರೀಕ್ಷೆಯಲ್ಲಿ ಉತ್ತೀರ್ಣರಾಗದೆ ಹೋದರೆ ನಿರಾಸೆಗೆ ಒಳಗಾಗಬಾರದು. ಬದಲಾಗಿ ನಾವು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡಬೇಕು ಮತ್ತು ನಮ್ಮ ತನುಮನಗಳಿಂದ ಯೇಸು ಕ್ರಿಸ್ತನ ಕಡೆಗೆ ತಿರುಗಿಕೊಳ್ಳಬೇಕು.

*"ಯೇಸು ಕ್ರಿಸ್ತನು ನಿಮ್ಮಲ್ಲಿ ಇದ್ದಾನೆ"*– ಯೋಹಾನ 17:23; ರೋಮಾ 8:9-10; ಕೊಲೊ 1:27; ಪ್ರಕ 3:10. **7-9**

**13:7-9** ಮತ್ತೊಮ್ಮೆ ಅವನು ಅವರಿಗೆ ತನ್ನ ಆಲೋಚನೆಯಲ್ಲಿ ಪ್ರಥಮ ಸ್ಥಾನವನ್ನು ಕೊಟ್ಟಿದ್ದಾನೆ-ಅವನ ಬಯಕೆ ಏನೆಂದರೆ ಅವರು ದೇವರೊಂದಿಗೆ ಸರಿಯಾದ ಸಂಬಂಧವುಳ್ಳವರಾಗಿರಬೇಕು, ಅವನು ದೇವರೊಂದಿಗೆ ಸರಿಯಾದ ಸಂಬಂಧದಲ್ಲಿ ಇಲ್ಲವೆಂದು ಅಂದುಕೊಂಡರೂ ತಾವು ಸರಿಯಾಗಿರಬೇಕು. ಒಂದುವೇಳೆ ಅವರು ದೇವರಿಗೆ ಸತ್ಯವಾಗಿ ನಡೆದುಕೊಳ್ಳುವದಾದರೆ ತುಳಿಯಲ್ಪಡಲು ಸಿದ್ಧರಾಗಿರಬೇಕು. ಯಾವುದೇ ಪರಿಸ್ಥಿತಿಯಲ್ಲಿಯೂ ಅವರು ಸತ್ಯದ ನಿಮಿತ್ತ ನಡೆದುಕೊಳ್ಳುವವರಾಗಿರಬೇಕು (1 ಕೊರಿಂಥ 9:23; 2 ತಿಮೊ 2:10). **8**

**13:8** *"ಸತ್ಯಾಭಿವೃದ್ಧಿ"*– 7:1; ಮತ್ತಾಯ 5:48. ವಿಶ್ವಾಸಿಗಳು ಸತ್ಯಾಭಿವೃದ್ಧಿಯಾಗಬೇಕು ಎಂದು ನಾವು ಬೇಡಿಕೊಳ್ಳುತ್ತೇವೋ? **9**

- **13:9** 4:12; 1 ಕೊರಿಂಥ 4:9-13 ನೋಡಿರಿ. **10**

**13:10** ವಚನ 2; 1 ಕೊರಿಂಥ 4:21. **11**

**13:11** *"ಕ್ರಮಪಡಿಸಿಕೊಳ್ಳಿರಿ"*– ವ 9; 7:1; ಮತ್ತಾಯ 5:48 ರ ನೋಟ್ ನೋಡಿರಿ. ಇತರರು ಹಾಗೂ ನಮ್ಮ ವಿಷಯದಲ್ಲಿ ನಮ್ಮ ಗುರಿ ಯಾವಾಗಲೂ ಪೂರ್ಣವಾದ ಆತ್ಮೀಕ ಪರಿಪಕ್ವತೆಗಿಂತ ಕಡಿಮೆಯಾಗಿರಬೇಕು.

*“ಪ್ರೀತಿ ಮತ್ತು ಸಮಾಧಾನದ ದೇವರು”*– ಇಬ್ರಿ 13:20; 1 ಯೋಹಾನ 4:8. **12**

**13:12** *“ಮುದ್ದು”*– ರೋಮಾ 16:16. **14**

**13:14** ಪೂರ್ತಿಯಾಗಿ ಘನವಾದ ಸತ್ಯವಿರುವ ವಚನವನ್ನು ನಾವು ಇಲ್ಲಿ ನೋಡಬಹುದು. ಯೇಸು ಕ್ರಿಸ್ತನು ಈ ವಾಕ್ಯದಲ್ಲಿ ಇದ್ದಾನೆ. ಆತನು ಕರ್ತನು ಮತ್ತು ಕ್ರಿಸ್ತನಾಗಿದ್ದಾನೆ (ಅಪೊ 2:36. ಲೂಕ 2:11; ಫಿಲಿಪ್ಪಿ 2:10-11 ರಲ್ಲಿ “ಕರ್ತನ” ಕುರಿತಾದ ನೋಟ್ ನೋಡಿರಿ; ಮತ್ತಾಯ 1:1 ರಲ್ಲಿ “ಕ್ರಿಸ್ತನ” ಕುರಿತಾದ ನೋಟ್ ನೋಡಿರಿ). ಆತನ ಕೃಪೆ ಪಾಪಿಗಳನ್ನು ಕಾಪಾಡುತ್ತದೆ ಮತ್ತು ವಿಶ್ವಾಸಿಗಳನ್ನು ಆಶೀರ್ವದಿಸುತ್ತದೆ (8:9; ಯೋಹಾನ 1:14-17; ಗಲಾ 1:6). ಯೇಸು ಕ್ರಿಸ್ತನು ಮಾನವರ ಕೃಪೆಗೆ ಮೂಲನಾಗಿದ್ದಾನೆ ಎಂದರೆ ಆತನು ದೇವರಾಗಿದ್ದಾನೆ ಎಂದು ಹೇಳುವದಾಗಿದೆ. ಫಿಲಿಪ್ಪಿ 2:6 ರ ವಾಕ್ಯವನ್ನು ನೋಡಿರಿ. ತಂದೆಯಾದ ದೇವರನ್ನು ಸಹ ಈ ವಾಕ್ಯದಲ್ಲಿ ನೋಡಬಹುದು. ಆತನು ಕರ್ತನಾದ ಯೇಸು ಕ್ರಿಸ್ತನನ್ನು ಕಳುಹಿಸಿದನು (ಯೋಹಾನ 3:16; ರೋಮಾ 5:8; 1 ಯೋಹಾನ 4:10). 11 ನೇ ವಚನವು ದೇವರ ಪ್ರೀತಿಯ ಬಗ್ಗೆ ಮಾತನಾಡುತ್ತದೆ. ಇಲ್ಲಿ ಇದು ದೇವರ ಪ್ರೀತಿಯಾಗಿದೆ – ಆತನ ಪ್ರೀತಿಯನ್ನು ಕ್ರಿಯೆಯಲ್ಲಿ ನೋಡಬಹುದು. ಯೇಸು ಕ್ರಿಸ್ತನ ಕೃಪೆ ಮತ್ತು ದೇವರ ಪ್ರೀತಿ ಒಟ್ಟಾಗಿ ಕಾರ್ಯಮಾಡುತ್ತವೆ. ದೇವರ ಪ್ರೀತಿಯ ನಿಮಿತ್ತ ಯೇಸು ಕ್ರಿಸ್ತನು ಬಂದನು ಮತ್ತು ಆತನ ಕೃಪೆಯನ್ನು ಪ್ರಕಟಿಸಿದನು, ಇದಲ್ಲದೆ ಆತನ ಕೃಪೆಯ ನಿಮಿತ್ತ ದೇವರ ಪ್ರೀತಿ ವಿಶ್ವಾಸಿಗಳೊಂದಿಗೆ ಇರುತ್ತದೆ. ಪವಿತ್ರಾತ್ಮನನ್ನೂ ಇಲ್ಲಿ ನೋಡಬಹುದು. ಯೋಹಾನ 14:16-17 ರ ನೋಟ್ಸ್ ನೋಡಿರಿ. ಆತನ ವ್ಯಕ್ತಿತ್ವವನ್ನು ಇಲ್ಲಿ ನೋಡಬಹುದು. ನಾವು ಜನರೊಂದಿಗೆ ಅನ್ಯೋನ್ಯತೆಯಲ್ಲಿ ಇರಬಹುದು, ಅರಿವಿಲ್ಲದ ಅಧಿಕಾರಗಳು ಅಥವಾ ಪ್ರಭಾವಗಳ ವಿಷಯದಲ್ಲಿ ಅಲ್ಲ. ಪವಿತ್ರಾತ್ಮನ ಮೂಲಕ ದೇವರು ವಿಶ್ವಾಸಿಗಳಲ್ಲಿ ಜೀವಿಸುತ್ತಾನೆ, ಮತ್ತು ಆತನ ಮೂಲಕವಾಗಿ ನಾವು ತಂದೆಯಾದ ದೇವರು ಹಾಗೂ ಕರ್ತನಾದ ಯೇಸು ಕ್ರಿಸ್ತನೊಂದಿಗೆ ಅನ್ಯೋನ್ಯತೆಯುಳ್ಳವರಾಗಿ ಇರುತ್ತೇವೆ (1 ಯೋಹಾನ 1:3). ಹೀಗೆ ಈ ವಾಕ್ಯದಲ್ಲಿ ನಾವು ತ್ರಯೇಕತ್ವವನ್ನು ನೋಡಬಹುದು. ರಕ್ಷಣೆ, ಶುದ್ಧೀಕರಣ ಮತ್ತು ವಿಶ್ವಾಸಿಗಳ ಆಶೀರ್ವಾದದಲ್ಲಿ ಪ್ರತಿಯೊಬ್ಬರು ತಮ್ಮ ಕಾರ್ಯವನ್ನು ಮಾಡುವರು. ಮತ್ತಾಯ 3:16-17 ರಲ್ಲಿ “ತ್ರಯೇಕತ್ವದ” ಕುರಿತಾದ ನೋಟ್ಸ್ ನೋಡಿರಿ.